ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 29 ಬುಧವಾರ 2024

45

ಸಂಪುಟ: 45 | ಸಂಚಿಕೆ: 43 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಆರೋಪಿಗಳಾದ

ನವೀನ್‌ಗೌಡ, ಚೇತನ್ ಎಸ್‌ಐಟಿಯಿಂದ ಬಂಧನ

● ಈ ವೇಳೆ ಇವರ ಸ್ನೇಹಿತ ಶ್ಯಾಮ್‌ಸುಂದರ್ ಕೂಡ ವಶ ● ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ವೇಳೆ ಕೋರ್ಟ್‌ಗೆ ಬಂದಾಗ ಕಸ್ಟಡಿಗೆ



ನವೀನ್ ಗೌಡ



ಚೇತನ್

ಬೆಂಗಳೂರು, ಮೇ 28 (ಕೆಎಂಶಿ)–ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಪ್ರಮುಖ ಆರೋಪಿಗಳಾದ ನವೀನ್‌ಗೌಡ ಮತ್ತು ಚೇತನ್ ಅವರನ್ನು ಎಸ್‌ಐಟಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ಇದ್ದ ಕಾರಣ ಸಚಿವ ಜಮೀರ್ ಅಹಮದ್ ಆಪ್ತ ನವೀನ್ ಗೌಡ ಮತ್ತು ಚೇತನ್ ತಮ್ಮ ಸ್ನೇಹಿತ ಶ್ಯಾಮ್‌ಸುಂದರ್ ಜೊತೆ ನ್ಯಾಯಾಲಯಕ್ಕೆ ಬಂದ ಸಂದರ್ಭದಲ್ಲಿ ಇವರನ್ನು ವಶಕ್ಕೆ ಪಡೆಯಲಾಯಿತು. ನ್ಯಾಯಾಲಯದಿಂದ ಹೊರಬಂದು ವಾಹನ ಪಾರ್ಕಿಂಗ್ ಪ್ರದೇಶದಲ್ಲಿದ್ದಾಗ ಆರೋಪಿಗಳ ಜೊತೆಗೆ ಸ್ನೇಹಿತನನ್ನೂ ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರಜ್ವಲ್‌ನ ಎಡಿಟೆಡ್ ಅಶ್ಲೀಲ ವಿಡಿಯೋಗಳನ್ನು ಹರಿಬಿಟ್ಟು ತಲೆಮರೆಸಿಕೊಂಡಿದ್ದರು ● 9ನೇ ಪುಟಕ್ಕೆ

ವಿಮಾನ ಟಿಕೆಟ್ ಕಾಯ್ದಿರಿಸಿದ ಪ್ರಜ್ವಲ್

ನಿನ್ನೆಯಷ್ಟೇ ವಿಡಿಯೋ ಮೂಲಕ ಪ್ರತ್ಯಕ್ಷವಾಗಿ ಮೇ 31ರಂದು ಸ್ವದೇಶಕ್ಕೆ ಮರಳಿ, ಎಸ್‌ಐಟಿ ಮುಂದೆ ಹಾಜರಾಗುವುದಾಗಿ ಪ್ರಕಟಿಸಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಹಾಸನ ಸಂಸದ ಪ್ರಜ್ವಲ್ ಇಂದು ವಿಮಾನ ಟಿಕೆಟ್ ಕಾಯ್ದಿರಿಸಿದ್ದಾರೆ. ಜರ್ಮನಿಯ ಮ್ಯೂನಿಚ್ ನಿಂದ ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ



ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವ ಸಲುವಾಗಿ ಲುಫ್ತಾನ್ಸಾ ಏರ್‌ವೇಸ್ ವಿಮಾನದ ಬಿಸಿನೆಸ್ ಕ್ಲಾಸ್ ಟಿಕೆಟ್ ಕಾಯ್ದಿರಿಸಿದ್ದಾರೆ. ಆ ಮೂಲಕ ಪ್ರಜ್ವಲ್ ರೇವಣ್ಣ ಸ್ವದೇಶಕ್ಕೆ ವಾಪಸ್ಸಾಗುವುದು ಬಹುತೇಕ ಖಚಿತವಾಗಿದೆ. ಈ ಮೊದಲು 2 ಬಾರಿ ವಿಮಾನ ಟಿಕೆಟ್ ಕಾಯ್ದಿರಿಸಿ ಅಂತಿಮ ಗಳಿಗೆಯಲ್ಲಿ ರದ್ದುಪಡಿಸಿದ ನಿದರ್ಶನವಿದೆ. ಈ ಹಿನ್ನೆಲೆಯಲ್ಲಿ ಪ್ರಜ್ವಲ್ ಈಗ ಟಿಕೆಟ್ ಕಾಯ್ದಿರಿಸಿದಂತೆ ಸಮಯಕ್ಕೆ ಭಾರತಕ್ಕೆ ಮರಳಲಿ ದ್ದಾರೆಯೇ ಇಲ್ಲ, ಟಿಕೆಟ್ ರದ್ದುಪಡಿಸಲಿದ್ದಾರೆಯೇ ಕಾದು ನೋಡಬೇಕಿದೆ.

ಶಿಕ್ಷಕ ಸಮುದಾಯ ಎನ್‌ಡಿಎ ಅಭ್ಯರ್ಥಿ ಬೆಂಬಲಿಸುವ ವಿಶ್ವಾಸ

● ಬಿಜೆಪಿ ಕಚೇರಿಯಲ್ಲಿ ಎನ್‌ಡಿಎ ಮಿತ್ರ ಪಕ್ಷಗಳ ಮುಖಂಡರ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಭರವಸೆ ● ಪ್ರತಿ ಮತದಾರರ ಭೇಟಿಯಾಗಿ ಮನವೊಲಿಸುವಂತೆ ಸಲಹೆ

ಮೈಸೂರು, ಮೇ 28(ಎಂಟಿವೈ)– ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರು ಈ ಹಿಂದಿನಿಂದಲೂ ಜೆಡಿಎಸ್–ಬಿಜೆಪಿಯನ್ನು ಬೆಂಬಲಿಸುತ್ತಾ ಬಂದಿದ್ದು, ಈ ಬಾರಿಯೂ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗೆ ಬೆಂಬಲ ನೀಡುತ್ತಾರೆ ಎಂದು ಶಾಸಕ ಜಿ.ಟಿ. ದೇವೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ 'ಬಿಜೆಪಿ–ಜೆಡಿಎಸ್' ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿದ್ದು, ಶಿಕ್ಷಕ ಮತದಾರರು ಜೆಡಿಎಸ್ ಮೇಲೆ ವಿಶ್ವಾಸವಿಟ್ಟಿದ್ದಾರೆ. ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಹೊರತುಪಡಿಸಿದರೆ ಶಿಕ್ಷಕರ ಕ್ಷೇತ್ರದ ಮತದಾರರು ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಯಾವುದೇ ಚುನಾವಣೆಯಲ್ಲೂ ಕಾಂಗ್ರೆಸ್‌ಗೆ ಬೆಂಬಲ ನೀಡಿಲ್ಲ. ಇದನ್ನು ಸದುಪಯೋಗ ಮಾಡಿಕೊಂಡು ಮೈತ್ರಿ ಅಭ್ಯರ್ಥಿಯನ್ನು ಗೆಲ್ಲಿಸಬೇಕು. ಪ್ರತಿಯೊಬ್ಬ ಮತದಾರರನ್ನು ಸಂಪರ್ಕಿಸಿ ಬೆಂಬಲಯಾಚಿಸಬೇಕು ಎಂದು ಸಲಹೆ ನೀಡಿದರು. ಚುನಾವಣೆಯಲ್ಲಿ ಪ್ರಥಮ ಪ್ರಾಶಸ್ತ್ಯದ ಮತಗಳು ಮೈತ್ರಿಕೂಟದ ಅಭ್ಯರ್ಥಿಗೆ ಬರಬೇಕು. ಉಳಿದ ಐದಾರು ದಿನಗಳಲ್ಲಿ ಮುಖಂಡರು ಪರಸ್ಪರ ಸಮನ್ವಯತೆಯಿಂದ ಮತ ಯಾಚಿಸಬೇಕು. ಕಾಂಗ್ರೆಸ್ ಅಭ್ಯರ್ಥಿಯ ಮಾತಿಗೆ ಮರುಳಾಗದಂತೆ ನೋಡಿಕೊಳ್ಳಬೇಕು. ಶಿಕ್ಷಕರ ಕ್ಷೇತ್ರಕ್ಕೆ ಜೆಡಿಎಸ್–ಬಿಜೆಪಿ ಸರ್ಕಾರ ನೀಡಿರುವ ಕೊಡುಗೆಗಳ ● 9ನೇ ಪುಟಕ್ಕೆ



ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಬಿಜೆಪಿ–ಜೆಡಿಎಸ್ ಮುಖಂಡರ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿದರು. ಚಿತ್ರದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಅಶ್ವಿನ್‌ಕುಮಾರ್, ಅಭ್ಯರ್ಥಿ ಕೆ.ವಿವೇಕಾನಂದ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇನ್ನಿತರರನ್ನು ಕಾಣಬಹುದು.

ಜೆಡಿಎಸ್ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಲು ಸಲಹೆ

ಮೈಸೂರು, ಮೇ 28–ಮೈಸೂರು–ಹುಣಸೂರು ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಜೆಡಿಎಸ್ ಮುಖಂಡರ ಸಭೆ ಆಯೋಜಿಸಲಾಗಿತ್ತು. ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರ ಗೆಲುವಿಗೆ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋಲಿಸಿ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯನ್ನು ಗೆಲ್ಲಿಸಲು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಎಲ್ಲಾ ಮತದಾರರೂ ಮತ ಚಲಾಯಿಸುವಂತೆ ನೋಡಿಕೊಳ್ಳಬೇಕು. ಈ ಚುನಾವಣೆ ಬಿಜೆಪಿ–ಜೆಡಿಎಸ್‌ಗೆ ಸವಾಲಾಗಿದೆ. ಪಕ್ಷದ ಭದ್ರಕೋಟೆ ಆಗಿರುವ ಕಾರಣ ಮುಖಂಡರು, ಕಾರ್ಯಕರ್ತರು ಮೈಮರೆಯದೆ ಕೆಲಸ ಮಾಡಬೇಕು. ಮೈಸೂರು ನಗರ ವ್ಯಾಪ್ತಿಯಲ್ಲಿ 11 ಸಾವಿರ ಮತದಾರರಿದ್ದು, ಪ್ರತಿಯೊಬ್ಬ ಮತದಾರನನ್ನು ಸಂಪರ್ಕಿಸಬೇಕು. ಹುಣಸೂರು, ಪಿರಿಯಾಪಟ್ಟಣದಲ್ಲಿ ಕೆಲಸ ಮಾಡುತ್ತಿದ್ದರೂ ಅವರೆಲ್ಲಾ ಮೈಸೂರು ನಗರದ ಮತದಾರರಾಗಿರುತ್ತಾರೆ. ಅಂತಹವರನ್ನು ಗುರುತಿಸಿ ● 9ನೇ ಪುಟಕ್ಕೆ

ಕೆ–ಸೆಟ್ ಪರೀಕ್ಷೆ ಫಲಿತಾಂಶ ಪ್ರಕಟ

6675 ಮಂದಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹರು

ಬೆಂಗಳೂರು, ಮೇ 28– ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ–ಸೆಟ್) ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಂಗಳವಾರ ಪ್ರಕಟಿಸಿದೆ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ 41 ವಿಷಯಗಳಿಗೆ ಜನವರಿ 13ರಂದು ನಡೆದ ಪರೀಕ್ಷೆಯಲ್ಲಿ ಒಟ್ಟು 6,675 ಮಂದಿ ಅರ್ಹತೆ ಪಡೆದಿದ್ದು, ಅಷ್ಟೂ ಮಂದಿಯ ನೋಂದಣಿ ಸಂಖ್ಯೆಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ● 2ನೇ ಪುಟಕ್ಕೆ

ವಿಧಾನಸಭೆಯಿಂದ ಪರಿಷತ್ ಚುನಾವಣೆ: ಕಾಂಗ್ರೆಸ್ ಪಾಲಿನ 7 ಸ್ಥಾನಕ್ಕೆ 300 ಪ್ರಬಲ ಆಕಾಂಕ್ಷಿಗಳು

ಇಂದು ಅಭ್ಯರ್ಥಿಗಳ ಪಟ್ಟಿ ಪ್ರಕಟ ಸಾಧ್ಯತೆ



ಬೆಂಗಳೂರು, ಮೇ 28 (ಕೆಎಂಶಿ)– ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುತ್ತಿರುವ ಚುನಾವಣೆಯಲ್ಲಿ 7 ಸ್ಥಾನಕ್ಕೆ ನಮ್ಮಲ್ಲಿ 300 ಪ್ರಬಲ ಆಕಾಂಕ್ಷಿಗಳಿದ್ದಾರೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ತೆರವಾಗಲಿರುವ 11 ಸ್ಥಾನಗಳಲ್ಲಿ ವಿಧಾನಸಭೆಯಲ್ಲಿನ ಸಂಖ್ಯಾಬಲದ ಆಧಾರದ ಮೇಲೆ ನಮಗೆ 7 ಸ್ಥಾನ ಲಭ್ಯವಾಗಲಿವೆ, ಇದಕ್ಕೆ ಎಲ್ಲಾ ಸಮುದಾಯ ಮತ್ತು ವಲಯಗಳಿಂದ ಒತ್ತಡ ಇದೆ ಎಂದಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ವರಿಷ್ಠರ ಅನುಮೋದನೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂಡಿ ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ವರ್ಗಕ್ಕೂ ನ್ಯಾಯ ಕಲ್ಪಿಸಲು ಸಾಧ್ಯವಿಲ್ಲ. ಒತ್ತಡ ಹೆಚ್ಚಿರುವುದರ ಹಿನ್ನೆಲೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ವರಿಷ್ಠರಿಗೆ ಬಿಡುತ್ತೇವೆ. ಆದರೆ, ನಾನು ಮತ್ತು ಮುಖ್ಯಮಂತ್ರಿ ಅವರು, ಪಕ್ಷ ಸಂಘಟನೆಗೆ ದುಡಿದವರು, ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಕೆಲಸ ಮಾಡಿದ, ಪಕ್ಷ ಸಂಘಟನೆಗೆ ಸಹಕಾರಿ ಆಗುವಂತಹವರನ್ನು ಗುರುತಿಸಿ ಎಂದು ಮನವಿ ಮಾಡುತ್ತೇವೆ. ● 2ನೇ ಪುಟಕ್ಕೆ

ಸಿಎಂ–ಡಿಸಿಎಂ ಪಕ್ಷದ ಹಿರಿಯ ನಾಯಕರ ಸಲಹೆ ಪರಿಗಣಿಸಲಿ

ಬೆಂಗಳೂರು, ಮೇ 28– ವಿಧಾನಪರಿಷತ್ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಪಕ್ಷದ ಹಿರಿಯ ನಾಯಕರ ಸಲಹೆ ಪಡೆಯಬೇಕೆಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ಅಭಿಪ್ರಾಯಪಟ್ಟಿದ್ದಾರೆ. ಪರಿಷತ್‌ನ 11 ಸ್ಥಾನಗಳಿಗೆ ಜೂ.13 ರಂದು ಚುನಾವಣೆ ನಡೆಯುತ್ತಿದ್ದು, ಚುನಾವಣೆಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಂಬಂಧ ಹೈಕಮಾಂಡ್ ಜೊತೆ ಚರ್ಚೆ ಮಾಡುವುದಕ್ಕೆ ಇಂದು ಸಿಎಂ–ಡಿಸಿಎಂ ದೆಹಲಿಗೆ ತೆರಳಿದ್ದಾರೆ. ಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರು ಜವಾಬ್ದಾರಿಯುತ ಸ್ಥಾನದಲ್ಲಿದ್ದಾರೆ. ನಮ್ಮಂತಹ ಪಕ್ಷದ ಹಿರಿಯ ನಾಯಕರ ಸಲಹೆಯನ್ನು ಪಡೆದರೆ ಅದು ಸೂಕ್ತವಾಗಿರಲಿದೆ. ಯಾರ ಸಲಹೆಯನ್ನೂ ಪಡೆಯದೇ ಅವರೇ ನಿರ್ಧಾರ ತೆಗೆದುಕೊಂಡರೆ, ನನ್ನ ಪ್ರಕಾರ ಅದು ಸರಿಯಲ್ಲ. ಪಕ್ಷ ಮತ್ತು ಸರ್ಕಾರದಲ್ಲಿ ಹಿರಿತನ, ಅನುಭವ ಇರುವವರು ಮತ್ತು ಸಂಪರ್ಕ ಹೊಂದಿರುವವರ ಸಲಹೆ ಪಡೆಯಬೇಕು. ಅವರು ನಮ್ಮೊಂದಿಗೆ ಚರ್ಚಿಸಬೇಕು ● 2ನೇ ಪುಟಕ್ಕೆ



ಮೈಸೂರಲ್ಲಿ ಚಿನ್ನದ ಸರ ಕದ್ದ ಖದೀಮನ ಮಹಾರಾಷ್ಟ್ರದಲ್ಲಿ ಬಂಧನ!

ಮೈಸೂರು, ಮೇ 28 (ಆರ್‌ಕೆ)– ಮೈಸೂರಲ್ಲಿ ಮಹಿಳೆಯ ಚಿನ್ನದ ಸರ ಕದ್ದು, ಪರಾರಿಯಾಗಿದ್ದ ಖದೀಮ ಮಹಾರಾಷ್ಟ್ರದ ನಾಗ್ಪುರ್‌ನಲ್ಲಿ ಸೆರೆ ಸಿಕ್ಕಿದ್ದಾನೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದ ಸರಸ್ವತಿಪುರಂ ಠಾಣೆ ಪೊಲೀಸರು ಸುಳಿವಿನ ಜಾಡು ಹಿಡಿದು ಬೆನ್ನತ್ತಿದಾಗ ಸ್ಥಳೀಯ ಪೊಲೀಸರ ನೆರವಿನಿಂದ ನಾಗ್ಪುರ್‌ನಲ್ಲಿ ಅಡಗಿದ್ದ ಆರೋಪಿಯನ್ನು ಸೋಮವಾರ ವಶಕ್ಕೆ ಪಡೆದಿದ್ದಾರೆ.

ಮೇ 22ರಂದು ಬೆಳಗ್ಗೆ ಸರಸ್ವತಿಪುರಂ ವ್ಯಾಪ್ತಿಯ ಟೆಲಿಕಾಂ ಬಡಾವಣೆಯಲ್ಲಿ ಮಧುರಾ ಎಂಬ ಮಹಿಳೆ ನಡೆದುಕೊಂಡು ಹೋಗುತ್ತಿದ್ದಾಗ ಬೈಕಿನಲ್ಲಿ ಬಂದ ಯುವಕ 50 ಗ್ರಾಂ ಎರಡೆಳೆ ಚಿನ್ನದ ಸರದ ಪೈಕಿ 30 ಗ್ರಾಂ ತುಣಕನ್ನು ಕಿತ್ತುಕೊಂಡು ಪರಾರಿಯಾಗಿದ್ದ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ್ದ ಸರಸ್ವತಿಪುರಂ ಠಾಣೆ ಪೊಲೀಸರು, ಸುತ್ತಲಿನ ಸಿಸಿ ಕ್ಯಾಮರಾ ಫುಟೇಜ್‌ಗಳ ಆಧಾರದ ಮೇಲೆ ಶೋಧ ನಡೆಸಿ ಅವರ ಲೊಕೇಷನ್ ಸುಳಿವಿನ ಬೆನ್ನತ್ತಿದಾಗ ನಾಗ್ಪುರದ ನಿರ್ಜನ ಪ್ರದೇಶದಲ್ಲಿ ಅಡಗಿದ್ದ ಕುಖ್ಯಾತ ಕಳ್ಳನನ್ನು ಸೋಮವಾರ ವಶಕ್ಕೆ ಪಡೆದಿದ್ದಾರೆ. ವಿಚಾರಣೆ ನಡೆಸಿ, ಕಳವು ಮಾಡಿದ ಚಿನ್ನದ ಸರ ವಶಪಡಿಸಿಕೊಂಡು ಇಂದು ಸಂಜೆ ವೇಳೆಗೆ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಸರಸ್ವತಿಪುರಂ ಠಾಣೆ ಪೊಲೀಸರು ಹಾಜರುಪಡಿಸುವರು. ಪೊಲೀಸರ ವಶದಲ್ಲಿರುವ ಸರ ಅಪಹರಣ ಆರೋಪಿ ವಿರುದ್ಧ ನಾಗ್ಪುರ್‌ದಲ್ಲಿ ಮನೆ ಕಳವು, ಸರ ಅಪಹರಣ, ಗಲಾಟೆ, ದರೋಡೆ ಸೇರಿದಂತೆ 60ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಜಾಮೀನಿನ ಮೇಲೆ ಹೊರ ಬಂದು ಮತ್ತೆ ಅಪರಾಧ ಕೃತ್ಯದಲ್ಲಿ ತೊಡಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವರ್ಷ ಶಾಲಾ ಪಠ್ಯ ಪುಸ್ತಕಗಳ ಪರಿಷ್ಕರಣೆ ಇಲ್ಲ

ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟನೆ

● ವ್ಯಾಕರಣ, ಶಬ್ದಗಳನ್ನು ಮಾತ್ರ ಬದಲಿಸಲಾಗಿದೆ ● ರಾಜಕೀಯ ಉದ್ದೇಶದಿಂದ ಎನ್‌ಇಪಿ ರದ್ದು ಮಾಡಿಲ್ಲ ● 3 ವರ್ಷದಲ್ಲಿ 6 ಸಾವಿರ ಕರ್ನಾಟಕ ಪಬ್ಲಿಕ್ ಸ್ಕೂಲ್ ಆರಂಭ ● ಗ್ರೇಸ್ ಮಾರ್ಕ್ಸ್ ನೀಡಿದ ಕಾರಣ 42 ಸಾವಿರ ವಿದ್ಯಾರ್ಥಿಗಳ ತೇರ್ಗಡೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿದರು. ಚಿತ್ರದಲ್ಲಿ ಮರಿತಿಬ್ಬೇಗೌಡ, ವಿಜಯಕುಮಾರ್ ಇದ್ದಾರೆ.

ಮೈಸೂರು, ಮೇ28(ಬಿಎಲ್‌ಯು)– ಈ ವರ್ಷ ಶಾಲಾ ಪಠ್ಯ ಪುಸ್ತಕಗಳಲ್ಲಿ ಆಮೂಲಾಗ್ರ ಪರಿಷ್ಕರಣೆ ಇಲ್ಲ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದ್ದಾರೆ.

ನಗರ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 45 ಅಂಶಗಳನ್ನು ಇಟ್ಟುಕೊಂಡು ಕಳೆದ ವರ್ಷವೇ ಪಠ್ಯ ಪುಸ್ತಕ ಪರಿಷ್ಕರಣೆ ಮಾಡಿ ಮುಗಿಸಿರುವ ಕಾರಣ ಈ ವರ್ಷ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ತಿಳಿಸಿದರು. ಈ ವರ್ಷ ಪಠ್ಯ ಪುಸ್ತಕದಲ್ಲಿದ್ದ ಕೆಲವು ವ್ಯಾಕರಣ ಹಾಗೂ ಶಬ್ದಗಳನ್ನು ಮಾತ್ರ ಬದಲಾವಣೆ ಮಾಡಲಾಗಿದೆ. ಅದು ಬಿಟ್ಟು ಪಠ್ಯ ಪುಸ್ತಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದರು.

ಚುನಾವಣಾ ಪೂರ್ವ ನಿರ್ಧಾರ: ರಾಷ್ಟ್ರೀಯ ಶಿಕ್ಷಣ ನೀತಿ ರದ್ದು ಮಾಡುವುದಾಗಿ ಚುನಾವಣಾ ಪೂರ್ವದಲ್ಲೇ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ಪ್ರಕಟಿಸಿತ್ತು. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ರಾಷ್ಟ್ರೀಯ ಶಿಕ್ಷಣ ನೀತಿ ರದ್ದು ಮಾಡಿ, ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಲಾಗಿದೆ. ರಾಜ್ಯ ಶಿಕ್ಷಣ ನೀತಿ ಮಾದರಿಯಾಗಿದ್ದು, ಇದನ್ನು ಈಗ ಹಲವು ರಾಜ್ಯಗಳು ಅನುಸರಿಸುತ್ತಿವೆ ಎಂದು ಹೇಳಿದರು.

ಯಾವುದೇ ರಾಜಕೀಯ ಉದ್ದೇಶ ಇಟ್ಟುಕೊಂಡು ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಿಲ್ಲ. ಮಕ್ಕಳಿಗೆ ಅವಶ್ಯವಿರುವ ಅಂಶಗಳನ್ನು ಜಾರಿಗೊಳಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

500 ಕೆಪಿಎಸ್ ಆರಂಭ: ಖಾಸಗಿ ಶಾಲೆಗಳ ಗುಣಮಟ್ಟಕ್ಕೆ ಸರಿ ಸಮಾನವಾಗಿ 500 ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ತೆರೆಯಲಾಗುತ್ತಿದೆ. 2 ಗ್ರಾಮ ಪಂಚಾಯಿತಿಗೆ ಒಂದರಂತೆ ಇದನ್ನು ತೆರೆಯಲು ನಿರ್ಧರಿಸಲಾಗಿದೆ. ಇನ್ನು 3 ವರ್ಷದ ಅವಧಿಯಲ್ಲಿ 6 ಸಾವಿರ ಕೆಪಿಎಸ್ ಶಾಲೆ ತೆರೆಯುವ ಗುರಿ ಹೊಂದಲಾಗಿದೆ. ಇದಕ್ಕೆ ಸಿಎಸ್‌ಆರ್ ಫಂಡ್ ಹಣವನ್ನು ಬಳಕೆ ಮಾಡಿಕೊಳ್ಳಲಾಗುವುದು ಎಂದು ಮಧು ಬಂಗಾರಪ್ಪ ವಿವರಿಸಿದರು.

ಗರಿಷ್ಠ ನೇಮಕಾತಿ: ರಾಜ್ಯ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಒಂದು ವರ್ಷದ ಅವಧಿಯಲ್ಲಿ 12 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಇನ್ನು 53 ಸಾವಿರ ● 9ನೇ ಪುಟಕ್ಕೆ

ಶಿಕ್ಷಕರು ರಾಜಕಾರಣ ಮಾಡಿದರೆ ಕ್ರಮ

ವಿಧಾನಪರಿಷತ್ ಚುನಾವಣೆಯಲ್ಲಿ ಶಿಕ್ಷಕರು ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಎಚ್ಚರಿಸಿದ್ದಾರೆ. ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕುವಂತೆ ಶಿಕ್ಷಕ ಮತದಾರರ ಮೇಲೆ ಸರ್ಕಾರ ಒತ್ತಡ ಹಾಕುತ್ತಿಲ್ಲ. ಜೊತೆಗೆ ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ದುರ್ಬಳಕೆ ಕೂಡ ಮಾಡಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರಭಾವ ಬಳಸಿ ಶಿಕ್ಷಕರಿಂದ ಮತ ಹಾಕಿಸುವ ಬೆಳವಣಿಗೆ ಈ ಹಿಂದೆ ನಡೆದಿತ್ತು. ಆದರೆ ನಾವು ಅಂತಹ ಯಾವುದೇ ಬೆಳವಣಿಗೆಯಲ್ಲಿ ಭಾಗಿಯಾಗಿಲ್ಲ ಎಂದು ಹೇಳಿದರು. ಶಿಕ್ಷಣ ಇಲಾಖೆಯ ಅಧಿಕಾರಿಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ ಚುನಾವಣಾ ಆಯೋಗ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಶಿಕ್ಷಕ ಮತದಾರರಿಗೆ ಅಭ್ಯರ್ಥಿಗಳು ಉಡುಗೊರೆಗಳ ಆಮಿಷ ತೋರುತ್ತಿರುವುದು, ಪಾರ್ಟಿಗಳನ್ನು ನೀಡುತ್ತಿರುವುದು ಸೇರಿದಂತೆ ಕೆಲವು ವಿಚಾರಗಳು ನನ್ನ ಗಮನಕ್ಕೆ ಬಂದಿದೆ. ಆದರೆ ಕಾಂಗ್ರೆಸ್ ಪಕ್ಷ ಮಾತ್ರ ಇಂತಹ ಯಾವುದೇ ಬೆಳವಣಿಗೆಯಲ್ಲಿ ಭಾಗಿಯಾಗಿಲ್ಲ ಎಂದು ತಿಳಿಸಿದರು.

ನನ್ನ ಹೇರ್ ಸ್ಟೈಲ್ ಪ್ರಶ್ನಿಸುವವರು ಡಾ.ಅಬ್ದುಲ್ ಕಲಾಂ ಪ್ರಶ್ನಿಸ್ತಾರಾ...!?

ನನ್ನ ಹೇರ್ ಸ್ಟೈಲ್ ಬಗ್ಗೆ ಪ್ರಶ್ನೆ ಮಾಡುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸೇರಿದಂತೆ ವಿಪಕ್ಷ ನಾಯಕರು ಮಾಜಿ ರಾಷ್ಟ್ರಪತಿ ದಿವಂಗತ ಡಾ.ಅಬ್ದುಲ್ ಕಲಾಂ ಅವರ ಹೇರ್ ಸ್ಟೈಲ್ ಬಗ್ಗೆ ಮಾತನಾಡುತ್ತಾರಾ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಶ್ನೆ ಮಾಡಿದ್ದಾರೆ.

ಕೋವಿಡ್ ಸಮಯದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಗಡ್ಡ ಬಿಟ್ಟಿದ್ದರು. ಆಗ ಏಕೆ ಬಿಜೆಪಿ ನಾಯಕರು ಪ್ರಶ್ನೆ ಮಾಡಲಿಲ್ಲ ಎಂದು ಮರು ಪ್ರಶ್ನಿಸಿದರು. ಹೇರ್ ಕಟ್ ಮಾಡಿಸಲು ನಾವೇ ಕಳುಹಿಸುತ್ತೇವೆ ಎಂದು ಬಿಜೆಪಿ ನಾಯಕರ ಸಲಹೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಮಧು ಬಂಗಾರಪ್ಪ, ನಾನು ಟೈಂ ಕೊಟ್ಟಾಗ ನನ್ನ ಹೇರ್ ಕಟ್ ಮಾಡಲು ಅವರು ಬರಲಿ. ಅವರ ತಜ್ಞತೆ ನೋಡಿಕೊಂಡು ಅವರಿಗೆ ನಾನು ಕೆಲಸ ಕೊಡುತ್ತೇನೆ ಎಂದು ಸವಾಲು ಹಾಕಿದರು.

ನನ್ನ ಕೂದಲು ಚೆನ್ನಾಗಿದೆ. ತಲೆ ಒಳಗಿನ ಮೆದುಳು ಚೆನ್ನಾಗಿದೆ. ಅವರಂತೆ ನನಗೆ ಯಾವ ದುರ್ಬುದ್ಧಿಯೂ ಇಲ್ಲ. ಅವರಂತೆ ಫೋಟಾ ಸೈನ್ ಮಾಡುವ ವ್ಯವಹಾರ ನನಗೆ ಗೊತ್ತಿಲ್ಲ ಎಂದು ಬಿಜೆಪಿ ನಾಯಕರಿಗೆ ಮಧು ಬಂಗಾರಪ್ಪ ಟಾಂಗ್ ಕೊಟ್ಟರು. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಗಡ್ಡದ ಬಗ್ಗೆ ಮಾತನಾಡಿ ಬಿಜೆಪಿಯವರು 130 ರಿಂದ 60 ಸ್ಥಾನಕ್ಕೆ ಕುಸಿದರು. ಈಗ ನನ್ನ ಹೇರ್‌ಸ್ಟೈಲ್ ಬಗ್ಗೆ ಮಾತನಾಡಿ 6ಕ್ಕೆ ಬರುತ್ತಾರೆ ನೋಡಿ ಎಂದು ಎಚ್ಚರಿಸಿದರು.

ನನ್ನ ಹೇರ್‌ಸ್ಟೈಲ್ ನನ್ನ ತಂದೆಗೆ ಬಹಳ ಇಷ್ಟ: ನನಗೆ ನನ್ನ ತಂದೆ ಬಂಗಾರಪ್ಪ ಒಳ್ಳೆಯ ಬುದ್ಧಿ ಕಲಿಸಿದ್ದಾರೆ. ನನ್ನ ಹೇರ್‌ಸ್ಟೈಲ್ ಬಗ್ಗೆ ನನ್ನ ತಂದೆಗೆ ಬಹಳ ಪ್ರೀತಿ ಇತ್ತು. ನಾನಾದರೂ ಹೇರ್ ಕಟ್ ಮಾಡಿಸಿದರೆ ಎರಡು ಮೂರು ವಾರ ನನ್ನೊಡನೆ ಮಾತಾಡದೆ ಕೋಪ ಮಾಡಿಕೊಳ್ಳುತ್ತಿದ್ದರು. ಅಷ್ಟರ ಮಟ್ಟಿಗೆ ಅವರು ನನ್ನ ಹೇರ್ ಸ್ಟೈಲ್ ಇಷ್ಟಪಡುತ್ತಿದ್ದರು. ನಾನು ನನ್ನ ತಂದೆ ನೀಡಿದ ಮಾರ್ಗದರ್ಶನದಲ್ಲೇ ನಡೆಯುತ್ತೇನೆಯೇ ಹೊರತು, ಇವರ ಮಾರ್ಗದರ್ಶನ ನನಗೆ ಬೇಕಿಲ್ಲ ಎಂದು ಹೇಳಿದರು.

ಕೆಲವು ಮಕ್ಕಳು, ನಮ್ಮ ಶಿಕ್ಷಣ ಸಚಿವರು ಒಳ್ಳೆ ಹೇರ್‌ಸ್ಟೈಲ್‌ನಲ್ಲಿದ್ದಾರೆ. ನಾವು ಆ ತರಹ ಹೇರ್‌ಸ್ಟೈಲ್‌ನಲ್ಲಿ ಇರಲು ಅವಕಾಶ ನೀಡುತ್ತಿಲ್ಲ. ನಮಗೂ ಅವರಂತೆ ಹೇರ್‌ಸ್ಟೈಲ್‌ನಲ್ಲಿರಲು ಅವಕಾಶ ಕೊಡಿ ಎಂದು ಕೇಳುತ್ತಾರೆ. ಏನು ಮಾಡಲಿ ಹೇಳಿ ಎಂದು ಪ್ರಶ್ನಿಸಿದರು.

ಒಟ್ಟಾರೆ ಯಾರು ಏನೇ ಹೇಳಿದರೂ ನಾನು ನನ್ನ ಹೇರ್‌ಸ್ಟೈಲ್ ಬಿಡುವುದಿಲ್ಲ. ಈ ಹಿಂದೆ ಹೇಗಿದ್ದೆನೋ ಈಗಲೂ ಹಾಗೇ ಇರುತ್ತೇನೆ. ನಾನು ಬದಲಾಗುವುದಿಲ್ಲ. ಟೀಕೆ ಮಾಡುವ ಬಿಜೆಪಿ ನಾಯಕರಿಗೆ ಜೂನ್ 4ರ ನಂತರ ಬೇರೆ ಕೆಲಸ ಕೊಡುತ್ತೇನೆ ಎಂದು ತಿಳಿಸಿದರು.

ಕಿಚ್ಚ ಸುದೀಪ್ ದಂಪತಿ ಚಾಮುಂಡಿ ದರ್ಶನ



ಖ್ಯಾತ ನಟ ಕಿಚ್ಚ ಸುದೀಪ್ ಸೋಮವಾರ ಚಾಮುಂಡಿ ಬೆಟ್ಟಕ್ಕೆ ಪತ್ನಿ ಪ್ರಿಯಾ ಅವರೊಂದಿಗೆ ಭೇಟಿ ನೀಡಿ, ಚಾಮುಂಡೇಶ್ವರಿಯ ದರ್ಶನ ಪಡೆದರು. ಈ ವೇಳೆ ಖ್ಯಾತ ಉದ್ಯಮಿ ಹಾಗೂ ಚಿತ್ರ ನಿರ್ಮಾಪಕ ಸಂದೇಶ್ ಎನ್, ಮಾಜಿ ಮೇಯರ್ ರವಿಕುಮಾರ್ ಇತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಪ್ರಾಧ್ಯಾಪಕರ ಹುದ್ದೆಗೆ ಅರ್ಹರು

ಪ್ರಕಟಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಭ್ಯರ್ಥಿಗಳ ಅರ್ಹತಾ ಪರೀಕ್ಷೆ: ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಭ್ಯರ್ಥಿಗಳ ಅರ್ಹತೆಯನ್ನು ನಿರ್ಧರಿಸಲು ಈ ಪರೀಕ್ಷೆ ಪ್ರಮುಖವಾಗಿದ್ದು, ಇದರ ಜವಾಬ್ದಾರಿಯನ್ನು ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರ ಕೆಇಎಗೆ ವಹಿಸಿತ್ತು. ಅದನ್ನು ಯಶಸ್ವಿಯಾಗಿ ಮುಗಿಸಿದ್ದು, ವೆಬ್‌ಸೈಟ್‌ನಲ್ಲಿ ವಿಷಯವಾರು, ವರ್ಗಾವಾರು ಅರ್ಹರ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಎಷ್ಟು ಮಂದಿ ಅರ್ಹತೆ ಪಡೆದಿದ್ದಾರೆ: ಕೆ-ಸೆಟ್ ಪರೀಕ್ಷೆಗೆ ಒಟ್ಟು 1,17,303 ಮಂದಿ ನೋಂದಾಯಿಸಿಕೊಂಡು, 95,201 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಅವರ ಪೈಕಿ 6,675 ಮಂದಿ ಅರ್ಹತೆ ಪಡೆದಿದ್ದಾರೆ. ಇವರಲ್ಲಿ ಪುರುಷರು 3,398 ಹಾಗೂ ಮಹಿಳೆಯರು 3,180 ಹಾಗೂ ತೃತೀಯ ಲಿಂಗಿಗಳು 97 ಮಂದಿ ಇದ್ದಾರೆ. 350 ಮಂದಿ ವಿಶೇಷ ಸಾಮರ್ಥ್ಯವುಳ್ಳವರು ಈ ಪಟ್ಟಿಯಲ್ಲಿ ಸೇರಿದ್ದಾರೆ ಎಂದು ತಿಳಿಸಿದ್ದಾರೆ. ಯುಜಿಸಿ ಹಾಗೂ ರಾಜ್ಯದ ಮೀಸಲಾತಿ ನಿಯಮಗಳ ಪ್ರಕಾರ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ದಾಖಲೆಗಳ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳಿಗೆ ಇ- ಪ್ರಮಾಣ ಪತ್ರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದಲೇ ನೀಡಲಾಗುವುದು ಎಂದೂ ಅವರು ವಿವರಿಸಿದ್ದಾರೆ.

ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿ ಸಲ್ಲಿಕೆ: ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಯುಜಿನೀಟ್- 2024ರ ಫಲಿತಾಂಶ ಪ್ರಕಟಣೆ ನಂತರ ಮೂರು ದಿನಗಳ ಕಾಲಾವಕಾಶ ನೀಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಂಗಳವಾರ ಪತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಂಜಿನಿಯರಿಂಗ್, ಆರ್ಕಿಟೆಕ್ಚರ್ ಹಾಗೂ ಮೇಲೆ ಹೆಸರಿಸಿದ ಕೋರ್ಸುಗಳು ಸೇರಿದಂತೆ ಎಲ್ಲಾ ವೃತ್ತಿಪರ ಕೋರ್ಸುಗಳ ಸೀಟು ಹಂಚಿಕೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆ ಸಾಮಾನ್ಯವಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಿ ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯ. ಈ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವ ದಿನಾಂಕಗಳ ವಿವರಗಳಿಗಾಗಿ ಅಭ್ಯರ್ಥಿಗಳು ಆಗಿಂದ್ದಾಗ್ಗೆ ಪ್ರಾಧಿಕಾರದ ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಪ್ರಕಟಣೆಯಲ್ಲಿ ಸೂಚಿಸಲಾಗಿದೆ.

ಅಭ್ಯರ್ಥಿಗಳ ಪಟ್ಟಿ ಪ್ರಕಟ ಸಾಧ್ಯತೆ

ಅಷ್ಟೇ ಅಲ್ಲ, ಆಕಾಂಕ್ಷಿಗಳ ಪಟ್ಟಿ ಯನ್ನು ವರಿಷ್ಠರ ಗಮನಕ್ಕೆ ತರುವು ದಾಗಿಯೂ ತಿಳಿಸಿದರು. ವಿಧಾನ ಪರಿಷತ್ ಸ್ಥಾನ ಪಡೆಯಲು ಆಸಕ್ತಿ ತೋರುವುದು ತಪ್ಪಲ್ಲ, ಅವರೆಲ್ಲರೂ ಬ್ಲಾಕ್, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪಕ್ಷಕ್ಕೆ ದುಡಿದಿದ್ದಾರೆ. ಕರಾವಳಿ, ಕಿತ್ತೂರು, ಕಲ್ಯಾಣ ಕರ್ನಾಟಕ ಹಾಗೂ ಹಳೇ ಮೈಸೂರು ಭಾಗ ಸೇರಿದಂತೆ ಎಲ್ಲಾ ಕಡೆಯಿಂದ ಅವಕಾಶ ನೀಡಬೇಕು ಎಂಬ ಬೇಡಿಕೆ ಇದೆ. ಇದರ ಜೊತೆಗೆ ಕೆಲವು ಸ್ಥಾನಗಳಲ್ಲಿ ಹಾಲಿ ಸದಸ್ಯರೂ ಇದ್ದಾರೆ. ಹೀಗಾಗಿ ಆಯ್ಕೆ ಕಠಿಣ ಪರಿಸ್ಥಿತಿ ತಂದಿದೆ. ದೆಹಲಿಗೆ ತೆರಳುತ್ತಿದ್ದಂತೆ ಪಕ್ಷದ ಮುಖಂಡರುಗಳನ್ನು ಭೇಟಿ ಮಾಡಿ ಚರ್ಚಿಸುತ್ತೇವೆ, ಅಂತಿಮವಾಗಿ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಚರ್ಚೆ ನಡೆಸಿದ ನಂತರ ಪಟ್ಟಿ ಅಂತಿಮಗೊಳ್ಳಲಿದೆ. ರಾಜ್ಯ ನಾಯಕರೊಂದಿಗೆ ಚರ್ಚಿಸಿದ ನಂತರ ವರಿಷ್ಠರು ನಾಳೆ 7 ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸುವ ಸಾಧ್ಯತೆ ಇದೆ ಎಂದು ಶಿವಕುಮಾರ್ ತಿಳಿಸಿದರು. ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕಾರ್ಯ ಕಳೆದ ಸೋಮವಾರದಿಂದ ಆರಂಭವಾಗಿದೆ. ನಾಮಪತ್ರ ಸಲ್ಲಿಕೆಗೆ ಜೂನ್ 3 ಕಡೆಯ ದಿನವಾಗಿದ್ದು, ಅಗತ್ಯ ಬಿದ್ದಲ್ಲಿ ಜೂನ್ 13 ರಂದು ಮತದಾನ ನಡೆಯಲಿದ್ದು, ಅಂದು ಸಂಜೆಯೇ ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ.

ಹಿರಿಯ ನಾಯಕರ ಸಲಹೆ ಪರಿಗಣಿಸಲಿ

ಎಂದು ಪರಮೇಶ್ವರ ಹೇಳಿದರು. ನಾನಷ್ಟೇ ಅಲ್ಲ, ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದ ನನ್ನಂತಹ ಹಿರಿಯರು ಹಾಗೂ ಅನುಭವ ಇರುವವರು, ಪಕ್ಷದ ಸ್ಥಾನ ಅಲಂಕರಿಸಿರುವವರು ಇದ್ದಾರೆ, ಅವರ ಸಲಹೆ, ಅಭಿಪ್ರಾಯ ಪಡೆದರೆ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ ಎಂದು ಗೃಹ ಸಚಿವರು ಹೇಳಿದ್ದಾರೆ.

ಎಂಎಲ್‌ಸಿ ಅಭ್ಯರ್ಥಿಗಳ ಬಗ್ಗೆ ಮುಖ್ಯಮಂತ್ರಿ ಮತ್ತು ಶಿವಕುಮಾರ್ ಅವರ ಅಭಿಪ್ರಾಯ ಕೇಳಿದ್ದಾರೆಯೇ ಅಥವಾ ಯಾವುದಾದರೂ ಹೆಸರನ್ನು ಶಿಫಾರಸು ಮಾಡಿದ್ದಾರೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದ್ದರು. ಟಿಕೆಟ್ ನೀಡುವಾಗ ಪ್ರದೇಶ ಮತ್ತು ಜಾತಿಯಂತಹ ಅಂಶಗಳನ್ನು ಪರಿಗಣಿಸಿ ಹಲವು ಸಚಿವರು ಸಲಹೆ ನೀಡುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ, ಈ ಬಗ್ಗೆ ಚರ್ಚೆಯಾಗಬೇಕು, ಇಬ್ಬರೂ (ಸಿಎಂ ಮತ್ತು ಡಿಸಿಎಂ) ಏಕಪಕ್ಷೀಯವಾಗಿ ತೀರ್ಮಾನಿಸಬಾರದು. ನಮ್ಮ ಸಲಹೆ ಪಡೆಯಬೇಕು. ಜಿಲ್ಲೆ ಮತ್ತು ಜಾತಿವಾರು ಪರಿಗಣಿಸಿ." ಪಕ್ಷ ಕಟ್ಟಿರುವವರನ್ನು, ಸಂಘಟನೆಯ ಪರವಾಗಿ ನಿಂತ ಸಮುದಾಯಗಳನ್ನು ಗುರುತಿಸಬೇಕು ಎಂದು ಹೇಳಿದ್ದಾರೆ. ಗೃಹ ಸಚಿವರ ಹೇಳಿಕೆಗೆ ಡಿಸಿಎಂ ಡಿಕೆ ಶಿವಕುಮಾರ್ ಪ್ರತಿಕ್ರಿಯೆ ನೀಡಿದ್ದು, ಖಂಡಿತವಾಗಿಯೂ ಪಕ್ಷದ ಹಿರಿಯ ನಾಯಕರ ಸಲಹೆ ಪಡೆಯುತ್ತೇವೆ ಎಂದು ಹೇಳಿದ್ದಾರೆ.

ನಿಷ್ಠಾವಂತರಿಗೆ ಅವಕಾಶ ನೀಡುವಂತೆ ಸಿಎಂಗೆ 'ಕೈ' ಪಡೆ ಒತ್ತಾಯ

ಬೆಂಗಳೂರು: ಎಂಎಲ್‌ಸಿ ಟಿಕೆಟ್‌ಗಾಗಿ ತೀವ್ರ ಲಾಬಿ ನಡೆಯುತ್ತಿದ್ದು, ಪಕ್ಷಕ್ಕೆ ನಿಷ್ಠರಾಗಿರುವ ಮತ್ತು ಸಂಘಟನಾಶೀಲರಾಗಿರುವವರನ್ನು ಆಯ್ಕೆ ಮಾಡುವಂತೆ ಕಾಂಗ್ರೆಸ್ ಮುಖಂಡರ ಒಂದು ವರ್ಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ. ಟಿಕೆಟ್ ಆಕಾಂಕ್ಷಿಗಳಾದ ವಿಜಯ್ ಮುಳಗುಂದ, ವಿ.ಶಂಕರ್, ಬಿ.ಆರ್.ನಾಯ್ಡು, ಎಸ್.ಮನೋಹರ್, ಅಬ್ದುಲ್ ವಾಜಿದ್, ಎ.ಕೆಂಚೇಗೌಡ, ವಿಎಸ್ ಆರಾಧ್ಯ ಮತ್ತು ಎಂ ರಾಮಚಂದ್ರಪ್ಪ ಸೇರಿದಂತೆ ಪಕ್ಷದ ಎಂಟು ಮುಖಂಡರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ವಿಧಾನಪರಿಷತ್‌ನ 11 ಸ್ಥಾನಗಳಿಗೆ ಜೂನ್ 13ರಂದು ಚುನಾವಣೆ ನಿಗದಿಯಾಗಿದೆ. ಎಂಎಲ್‌ಸಿಗಳನ್ನು ಶಾಸಕರು ಆಯ್ಕೆ ಮಾಡಲಿದ್ದು, ಪಕ್ಷಗಳು ಹೊಂದಿರುವ ಶಾಸಕರ ಸಂಖ್ಯೆಯ ಆಧಾರದ ಮೇಲೆ, ಕಾಂಗ್ರೆಸ್ ಏಳು ಎಂಎಲ್‌ಸಿಗಳನ್ನು, ಬಿಜೆಪಿ ಮೂರು ಮತ್ತು ಜೆಡಿಎಸ್ ಒಬ್ಬರನ್ನು ಆಯ್ಕೆ ಮಾಡುವ ಅವಕಾಶವನ್ನು ಪಡೆದುಕೊಂಡಿದೆ.

ಪ್ರತಿ ಬಾರಿ ಎಂಎಲ್‌ಸಿ ಚುನಾವಣೆ ನಡೆದಾಗ ಪಕ್ಷಕ್ಕೆ ನಿಷ್ಠರಾಗಿರುವವರನ್ನು ಮಾತ್ರ ಆಯ್ಕೆ ಮಾಡಬೇಕು ಎಂಬ ಧ್ವನಿ ಶುರುವಾಗುತ್ತದೆ. ಆದರೆ ಕಾರಣಾಂತರಗಳಿಂದ ಹಿರಿಯ ನಾಯಕರು ಹಾಗೂ ಹೈಕಮಾಂಡ್ ಆಯ್ಕೆ ಮಾಡಿದವರಿಗೆ ಮಾತ್ರ ಅವಕಾಶ ಸಿಗುತ್ತಿದೆ. ಆದರೆ. ಪಕ್ಷದ ಸಂಘಟನೆಯಲ್ಲಿ ಯಾರು ಎಷ್ಟು ಕೆಲಸ ಮಾಡಿದ್ದಾರೆ ಎಂಬ ಸ್ಪಷ್ಟ ಮಾಹಿತಿ ನಿಮ್ಮ ಬಳಿ ಇದ್ದೇ ಇರುತ್ತದೆ. ಹೀಗಾಗಿ ಅಂತಹವರು ನಾಮನಿರ್ದೇಶನಗೊಳ್ಳುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ ಎಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಈಗಾಗಲೇ ಎಂಎಲ್‌ಸಿ, ಸಚಿವ ಅಥವಾ ಇತರೆ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದವರನ್ನು ಪರಿಗಣಿಸಬಾರದು. ಪಕ್ಷದ ಸಾಮಾನ್ಯ ಕಾರ್ಯಕರ್ತರು ಹಾಗೂ ಸಂಘಟನಾ ಚಟುವಟಿಕೆಯಲ್ಲಿ ತೊಡಗಿರುವವರನ್ನು ಆಯ್ಕೆ ಮಾಡುವುದರಿಂದ ಉತ್ತಮ ಸಂದೇಶ ರವಾನೆಯಾಗುತ್ತದೆ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ನಿಧನ

ರಾಚಪ್ಪ



ಮೈಸೂರು, ಮೇ 28-ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾ ದೇವಿ ದೇವಸ್ಥಾನದ ರಸ್ತೆ ನಿವಾಸಿ ರಾಚಪ್ಪ (68) ಅವರು ಸೋಮವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಪುಟ್ಟಮ್ಮ, ಮಕ್ಕಳಾದ ರಾಜೇಶ, ಮೀನಾಕ್ಷಿ, ಪಲ್ಲವಿ, ಅಳಿಯ ಶಂಕರ್ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯ ಕ್ರಿಯೆಯು ಸೋಮವಾರ ಸಂಜೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯರಗನಹಳ್ಳಿ ಶಾಲಾ ಆವರಣದಲ್ಲಿ ಮಳೆ ನೀರು ಹರಿದು ಹೋಗಲು ತಾತ್ಕಾಲಿಕ ಪೈಪ್‌ಲೈನ್ ವ್ಯವಸ್ಥೆ



ಮೊದಲ ಚಿತ್ರಣ



'ಮೈಸೂರು ಮಿತ್ರ' ವರದಿ ಫಲಶ್ರುತಿ

ಕಾಮಗಾರಿ ನಂತರದ ಚಿತ್ರಣ

ಮೈಸೂರು, ಮೇ 28- ಮೈಸೂರಿನ ಯರಗನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಮಳೆ ಬಂದಾಗ ಕೆರೆ ಮಾದರಿ ನಿಲ್ಲುತ್ತಿದ್ದ ನೀರು ಸರಾಗವಾಗಿ ಹರಿದು ಹೊರ ಹೋಗಲು ತಾತ್ಕಾಲಿಕ ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದೆ.

'ಮೈಸೂರು ಮಿತ್ರ'ನ ಮೇ 25ರ ಸಂಚಿಕೆಯಲ್ಲಿ 'ಶಾಲೆಯ ದುಸ್ಥಿತಿಯ ನಡುವೆ ಮಕ್ಕಳು ಪಾಠ ಕಲಿಯುವ ಸ್ಥಿತಿ!' ಶೀರ್ಷಿಕೆಯಡಿ ಶಾಲಾ ಆವರಣ ಜಲಮಯವಾಗುತ್ತಿರುವುದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ, ಶಾಲಾ ಕಟ್ಟಡದಲ್ಲಿ ಸೋರಿಕೆ ಕುರಿತು ಸವಿಸ್ತಾರವಾಗಿ ವರದಿ ಪ್ರಕಟಿಸಲಾಗಿತ್ತು.

ಬಳಿಕ ಎಚ್ಚೆತ್ತ ಸಂಬಂಧಪಟ್ಟ ಅಧಿಕಾರಿಗಳು ಶಾಲಾ ಆವರಣದಿಂದ ಮಳೆ ನೀರು ಹೊರಗಡೆ ಹರಿದು ಹೋಗಲು ತಾತ್ಕಾಲಿಕ ಪೈಪ್‌ಲೈನ್ ಅಳವಡಿಸಿದ್ದಾರೆ. ಆದರೆ, ಶಾಲೆಯ ಹಿಂಭಾಗದಲ್ಲಿ ಕಸದ ರಾಶಿಯನ್ನು ವಿಲೇವಾರಿ ಮಾಡುವುದಾಗಲೀ, ಸಂಪ್‌ನೊಳಗೆ ಇರುವ ಕಲುಷಿತ ನೀರು ಹಾಗೂ ಮಣ್ಣು ತೆಗೆದು ಸ್ವಚ್ಛಗೊಳಿಸುವ ಕೆಲಸವಾಗಿಲ್ಲ ಎಂದು ಯರಗನಹಳ್ಳಿ ನಿವಾಸಿಗಳು ದೂರಿದ್ದಾರೆ.

ಅಧಿಕಾರಿಗಳು ಕಾಟಾಚಾರಕ್ಕೆ ಬಂದು ಶಾಲಾ ಆವರಣದಲ್ಲಿ ಶೇಖರಣೆಯಾಗುತ್ತಿದ್ದ ಮಳೆ ಹೊರ ಹಾಕಲು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದಾರೆ. ಪೈಪ್‌ಲೈನ್ ವ್ಯವಸ್ಥೆಯೂ ಕೂಡ ಸರಿಯಾಗಿ ಆಗಿಲ್ಲ. ಜೋರು ಮಳೆ ಬಂದರೆ ಮತ್ತೆ ಸಮಸ್ಯೆ ಉದ್ಭವಿಸಲಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.



ಶಾಲೆಯ ದುಸ್ಥಿತಿಯ ನಡುವೆ ಮಕ್ಕಳು ಪಾಠ ಕಲಿಯುವ ಸ್ಥಿತಿ!

•ಶಾಲಾ ಆವರಣ ಮಳೆ ನೀರಿನ ಮಡುಕೆರೆ •ಮಕ್ಕಳಿಗೆ ಸಾಂಕ್ರಾಮಿಕ ರೋಗದ ಭೀತಿ

ಮರಿತಿಬ್ಬೇಗೌಡರಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪರಿಂದ ಶುಭ ಕೋರಿಕೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಮರಿತಿಬ್ಬೇಗೌಡರ ಗೆಲುವಿಗೆ ಶುಭ ಕೋರಿದರು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಹಿರಿಯ ಉಪಾಧ್ಯಕ್ಷ ನಾಗಭೂಷಣ್ ತಿವಾರಿ, ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಮುಖಂಡರಾದ ರವಿ ಮಂಚೇಗೌಡನಕೊಪ್ಪಲು, ಈಶ್ವರ್ ಚಕ್ಕಡಿ, ಚಂದ್ರ ವಿಶ್ವಕರ್ಮ, ಕಮಲ ಅನಂತರಾಮ, ವಿನೋದ್‌ರಾಜ್, ಲೋಕೇಶ್‌ಕುಮಾರ್ ಮಾದಾಪುರ, ರಾಘವೇಂದ್ರ, ರಾಜು ಉಪ್ಪಾರ್, ವೆಂಕಟೇಶ್ ಮಡಿವಾಳ, ಕಿರಣ್‌ಕುಮಾರ್ ವಿಶ್ವಕರ್ಮ ಇನ್ನಿತರರು ಉಪಸ್ಥಿತರಿದ್ದರು.

ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

ಮೈಸೂರು, ಮೇ 28(ಜಿಎ)-ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಸಿಸಿಬಿ ಪೊಲೀಸರು ಬಂಧಿಸಿ, ಆತನಿಂದ 30 ಸಾವಿರ ರೂ. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ನಗರದ ಸಿಸಿಬಿ ಘಟಕದ ಅಧಿಕಾರಿ ಮತ್ತು ಸಿಬ್ಬಂದಿ ಮೇ 19ರಂದು ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಆವರಣದ ಎಕ್ಸಿಟ್ ಗೇಟ್ ಬಳಿಯ ಕೆಎಸ್‌ಆರ್‌ಟಿಸಿ ಬಿಲ್ಡಿಂಗ್‌ನಲ್ಲಿರುವ ಆರ್ಯ ಈಟ್ಸ್ ಅಂಡ್ ಡ್ರಿಂಕ್ಸ್ ಬೇಕರಿ ಬಳಿ ಗಸ್ತಿನಲ್ಲಿರುವಾಗ ಒಬ್ಬ ಗಾಂಜಾ ಪೆಡ್ಲರ್‌ನ್ನು ವಶಕ್ಕೆ ಪಡೆದು ಆತನ ವಶದಲ್ಲಿದ್ದ 30 ಸಾವಿರ ರೂ. ಮೌಲ್ಯದ 1 ಕೆ.ಜಿ 650 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದಿದ್ದು, ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿಸಿಬಿ ಪೊಲೀಸರ ಕಾರ್ಯವನ್ನು ಮೈಸೂರು ನಗರದ ಪೊಲೀಸ್ ಆಯುಕ್ತ ಬಿ.ರಮೇಶ್ ಪ್ರಶಂಸಿಸಿದ್ದಾರೆ.

ಪಿಎಚ್.ಡಿ ಪದವಿ




ಮೈಸೂರು, ಮೇ 28-ಡಾ.ಎಂ. ಪುಷ್ಪಾ ಅವರ ಮಾರ್ಗದರ್ಶನದಲ್ಲಿ ಐಸಿದೊರೆ ವಿಕ್ಟೋರಿಯಾ ಮರಿಯಾ ರೋಚೆ ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಿರುರಂಗಮಂದಿರದಲ್ಲಿ 'ಪ್ರತಿಜ್ಞಾ ಮತ್ತು ಸ್ವಪ್ನ' ನಾಟಕ

ಮೈಸೂರು, ಮೇ 28(ಜಿಎ)-ರಂಗವಲ್ಲಿ ರಂಗ ತಂಡದ ವತಿಯಿಂದ ಮೇ 30 ರಿಂದ ಜೂ.2ರವರೆಗೆ ನಗರದ ಕಲಾಮಂದಿರದ ಕಿರು ರಂಗಮಂದಿರದಲ್ಲಿ ನಿತ್ಯ ಸಂಜೆ 6.30ಕ್ಕೆ ಭಾಸ ಮಹಾ ಕವಿಯ 'ಪ್ರತಿಜ್ಞಾ ಮತ್ತು ಸ್ವಪ್ನ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಚಾಲಕ ರವಿಪ್ರಸಾದ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ನಿರ್ದೇಶಕ ಉಮೇಶ್ ಸಾಲಿಯಾನ್ ನಿರ್ದೇಶನ, ಎಚ್.ಕೆ. ದ್ವಾರಕಾನಾಥ್ ರಂಗ ವಿನ್ಯಾಸ, ಕೆ.ಆರ್.ನಂದಿನಿ ಅವರ ವಸ್ತ್ರ ವಿನ್ಯಾಸದಲ್ಲಿ ಈ ನಾಟಕ ಮೂಡಿಬರಲಿದ್ದು, ಎರಡೂ ನಾಟಕ ಒಂದಕ್ಕೊಂದು ಪೂರಕವಾಗಿ ಒಂದರ ನಂತರ ಒಂದರಂತೆ ಪ್ರದರ್ಶನಗೊಳ್ಳಲಿವೆ. ಮೊದಲಿನದು ವೀರ ರಸದ್ದಾದರೆ, ಎರಡನೆಯದು ಲಾಲಿತ್ಯ ಹಾಗೂ ಶೃಂಗಾರ ರಸದ್ದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಸಾಲಿಯಾನ್ ಉಮೇಶ್, ಸುಧೀರ್‌ಕುಮಾರ್, ಮನಸ್ವಿನಿ, ಸುಖದೇವ್ ತೇಜಸ್ವಿ ಉಪಸ್ಥಿತರಿದ್ದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಪ್ರಣಾಮ ಸಲ್ಲಿಕೆ



ಮೈಸೂರಿನ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 82ನೇ ಜನ್ಮ ದಿನೋತ್ಸವದಂದು ಶ್ರೀಗಳಿಗೆ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಸಮ್ಮುಖದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಕೆಸರೆ ಗಾಯತ್ರಿ ರಾಮಮಂದಿರದ ಎಂ.ಎಸ್.ಚಂದ್ರಶೇಖರ್, ಎಂ.ಕೆ.ಸತ್ಯನಾರಾಯಣ, ಬಿ.ಎಂ.ಆನಂದ, ಎಂ.ಕೆ.ವಿಜಯಲಕ್ಷ್ಮಿ ಅವರು ಫಲಪುಷ್ಪ, ಸ್ಮರಣಿಕೆ ಸಮರ್ಪಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.05.2024 ಬುಧವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಜೆಎಸ್‌ಎಸ್ ಆಸ್ಪತ್ರೆ, ಶಸ್ತ್ರ ಚಿಕಿತ್ಸಾ ವಿಭಾಗ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ :** ಅಂತರರಾಷ್ಟ್ರೀಯ ಮಹಿಳಾ ಆರೋಗ್ಯ ದಿನದ ಪ್ರಯುಕ್ತ ಸ್ತನರೋಗ, ಗರ್ಭಕಂಠ ಕ್ಯಾನ್ಸರ್‌ಗೆ ಉಚಿತ ತಪಾಸಣೆ, ಜಾಗೃತಿ ಶಿಬಿರ, ಸ್ಥಳ: ಮೈಸೂರು ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 9.30 ರಿಂದ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 222, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30ಕ್ಕೆ
- **ಲೇಖಿಕಾ ಸಾಹಿತ್ಯ ವೇದಿಕೆ:** ಪುಸ್ತಕ ಬಿಡುಗಡೆ, ವಾಣಿ ಕಥಾಸ್ಪರ್ಧೆ ಬಹುಮಾನ ವಿತರಣೆ, ವಸುಮತಿ ಉಡುಪ ಸಂವಾದ ಮತ್ತು ಗೌರವಾರ್ಪಣೆ, ಉದ್ಘಾಟನೆ: ಸಾಹಿತಿ ಡಾ.ವೀಣಾ ಭಾರತಿ, ಅಧ್ಯಕ್ಷತೆ: ಲೇಖಕರಾದ ಶೈಲಜಾ ಸುರೇಶ್, ಪುಸ್ತಕ ಬಿಡುಗಡೆ: ಲೇಖಕ ತ್ರಿಶಲಾ ಬ್ರಹ್ಮಯ್ಯ, ಕೃತಿ ಬಿಡುಗಡೆ ಮತ್ತು ಪರಿಚಯ: ಸಾಹಿತಿ ಡಾ.ಎಚ್.ವಿ.ಪಾರ್ಶ್ವನಾಥ್, ಸುಧಾಶರ್ಮ ಚವತ್ತಿ, ಟಿ.ಆರ್.ಉಷಾರಾಣಿ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಲೇಖಿಕಾ ಪುಸ್ತಕ ಪ್ರಶಸ್ತಿ ಪ್ರದಾನ: ಡಾ.ಗಣೇಶ ಅಮೀನಗಢ ಮತ್ತು ಡಾ.ಗೀತಾ ಸೀತಾರಾಂ, ಸ್ಥಳ: ಸುರುಚಿ ರಂಗಮಂದಿರ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.
- **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್:** ಇಂಟರ್‌ನ್ಯಾಷನಲ್ ನರ್ಸಸ್ ದಿನಾಚರಣೆ, ಸಾನ್ನಿಧ್ಯ: ಶ್ರೀ ನಿರ್ಮಲಾನಾಥಾನಂದ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಅಪೋಲೋ ಬಿಜಿಎಸ್ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಅಮನ್ ನಾಯಕ್, ಕೆವಿಸಿ ಆಸ್ಪತ್ರೆ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ದೀಪಕ್ ಬಿ. ಗೌಡ, ರೈಲ್ವೆ ಆಸ್ಪತ್ರೆ ಚೀಫ್ ನರ್ಸಿಂಗ್ ಸೂಪರಿಂಟೆಂಡೆಂಟ್ ಕೆ.ಬಿ. ಆನಂದ್, ಜಯದೇವ ಆಸ್ಪತ್ರೆ ನರ್ಸಿಂಗ್ ಸೂಪರಿಂಟೆಂಡೆಂಟ್ ಕೆ. ಯೋಗಾಲಕ್ಷ್ಮಿ, ಭಾರತ್ ಕ್ಯಾನ್ಸರ್ ಆಸ್ಪತ್ರೆ ನರ್ಸಿಂಗ್ ಸೂಪರಿಂಟೆಂಡೆಂಟ್ ಪಿ.ಎಸ್. ಪ್ರೇಮ, ಸ್ಥಳ: ಬಿಜಿಎಸ್ ಮಲ್ಟಿ ಪರ್ಪಸ್ ಹಾಲ್, ಬೆಳಗ್ಗೆ 10.30ಕ್ಕೆ.
- **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ : ವಿಮರ್ಶಕ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಮುಖ್ಯ ಅತಿಥಿಗಳು : ವಿದುಷಿ ಸೌಮ್ಯ ಶ್ರೀಧರ್ ಜೈನ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಡಾ. ಎಂ. ಶಾರದ, ಡಾ. ಜಿ.ಪ್ರಸಾದಮೂರ್ತಿ, ಶ್ರೀಮತಿ ಎಂ.ಎಸ್. ಸಂಧ್ಯಾರಾಣಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.
- **ಅಧ್ಯಾಪಕರ ಬಳಗ, ಮಹಾರಾಜ ಕಾಲೇಜು:** ಬೀಳ್ಕೊಡುಗೆ ಸಮಾರಂಭ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಹೆಚ್.ಸೋಮಶೇಖರಪ್ಪ, ಸನ್ಮಾನಿತರು: ಡಾ.ಗೋಪಾಲರಾಜು, ಡಾ.ವಿಶ್ವನಾಥ್, ಡಾ.ರಾಮು, ನಾಗೇಶಯ್ಯ, ಉಪಸ್ಥಿತರು: ಪ್ರೊ.ಷಣ್ಮುಗಂ, ಪ್ರೊ.ಚೇತನ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಬೆಳಗ್ಗೆ 11ಕ್ಕೆ
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ. ವಿಶ್ವನಾಥ್, ಕಾಲೇಜು ಅಧ್ಯಕ್ಷ ಟಿ.ನಾಗರಾಜು, ಸ್ಥಳ: ಶ್ರೀ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3ಕ್ಕೆ
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ನಿರ್ದೇಶಕರಾದ ಡಾ. ಕೆ. ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ : ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್, ಕಾಯಕಶ್ರೀ ಪ್ರಶಸ್ತಿ ಪುರಸ್ಕೃತರು : ಎಂ.ಬಿ. ಮಹದೇವಪ್ಪ, ಶ್ರೀಮತಿ ಜಯಮ್ಮ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.
- **ರಂಗಾಯಣ :** ನಾಂದಿ ನಾಟಕೋತ್ಸವ, ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್. ರಾಮನಾಥ, ಸಂಗೀತ ನಿರ್ವಹಣೆ : ಧನಂಜಯ ಆರ್.ಸಿ., ಎಸ್. ಸುಬ್ರಹ್ಮಣ್ಯ, ಕೆ. ಅಂಜುಸಿಂಗ್, ನಿರ್ದೇಶನ : ಹೈಸ್ನಾಂ ತೋಂಬಾ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.
- **ನಾದಬ್ರಹ್ಮ ಸಂಗೀತ ಸಭಾ :** ಟಿ.ಆರ್. ಮಹಾಲಿಂಗಂ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಟಿ.ಆರ್. ಶ್ರೀನಾಥ್ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ವಿದುಷಿ ಪೃಥ್ವಿ ಭಾಸ್ಕರ್-ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜಂ-ಮೃದಂಗ, ವಿದ್ವಾನ್ ವಿ.ಎಸ್. ರಮೇಶ್-ಮೋರ್ಚಿಂಗ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಮೈಸೂರು ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ
- **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸ ಸ್ವಾಮಿಯವರ ವಾರ್ಷಿಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀಯವರಿಗೆ ಮಹಾಭಿಷೇಕ, ಸಂಜೆ 7ಕ್ಕೆ ಪುಷ್ಟೋತ್ಸವ, ಸ್ಥಳ: ದೇವಸ್ಥಾನದ ಆವರಣ, ತಿಲಕ್‌ನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬದುಕು ಬದಲಿಸಿದ ಶೋಧ' ಬಾನುಲಿ ಸರಣಿ, ಪ್ರಸ್ತುತಿ- ಎನ್.ಎನ್.ಸುರೇಂದ್ರನಾಥ್ ಸಾತ್ವಿಕ್, 6.40 'ನಾನು ನ.ರತ್ನ' ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ- ಶೋಭಾ ಗುರ್ಟು, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು-ಪುರುಷೋತ್ತಮ, 2.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 3.10 ಕರ್ನಾಟಕ ಶಾಸ್ತ್ರೀಯ ಸಂಗೀತ -ಪಿ.ರಾಜ್‌ಗೋಪಾಲ್ ಮತ್ತು ಎಂ.ಎನ್.ಗಣೇಶ್, 4.00 ಮಹಿಳಾರಂಗ-ಹೀಗಿದೆ ನೋಡಿ ನಮ್ ಜೋಡಿ, ರಂಗಭೂಮಿ ಕಲಾವಿದೆ ಹಾಗೂ ಲೇಖಕಿ ಜಾಹಿದಾ ಹಾಗೂ ಪತಿ ರಂಗಭೂಮಿ ಕಲಾವಿದ ಉಮೇಶ್, ಸಾಲಿಯಾನ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಅಬ್ದುಲ್ ರಶೀದ್, 4.45 ಹಿಂದಿ ಪಾಠ-ಡಾ.ಜಯಂತಿ ಪ್ರಸಾದ್ ನೌಟಿಯಾಲ್, 6.55 ಕೃಷಿರಂಗ-ಸಾವಯವ ಸಂಪದ, ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ-ರೈತ ಉತ್ಪಾದಕ ಸಂಸ್ಥೆಗಳ ಮೂಲಕ ಸಾವಯವ ಕೃಷಿಗೆ ಉತ್ತೇಜನ. ಈ ಕುರಿತು ಕೆ.ಆರ್.ನಗರ ತಾಲೂಕು ಅರ್ಜುನ ಹಳ್ಳಿಯ ಎ.ಎಸ್.ರಾಮಪ್ರಸಾದ್ ಅವರೊಂದಿಗೆ ಸಂದರ್ಶನ. ಸಂದರ್ಶಕರು- ಎನ್. ಕೇಶವಮೂರ್ತಿ, 8.00 ಕ್ಷಿತಿಜ-ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಮಾನ್ಯತೆ ಪಡೆದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 10.00 ಜನಪದಗೀತೆ, 10.30 ಸವಿನೆನಪು

ಅಂದು ಸಾವರ್ಕರ್ ವಿರೋಧಿಸಿದ ಪ್ರಚಾರ ಹಿಮ್ಮೆಟ್ಟಿಸಲು ನಾವಿಂದು ದೃಢವಾಗಿ ನಿಲ್ಲಬೇಕು

ವೀರ ಸಾವರ್ಕರ್ ಸಮ್ಮಾನ ಪ್ರಶಸ್ತಿ ಸ್ವೀಕರಿಸಿ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ದಿಟ್ಟ ನುಡಿ



ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರಿಗೆ ವೀರ ಸಾವರ್ಕರ್ ಸಮ್ಮಾನ ಪ್ರಶಸ್ತಿಯನ್ನು ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಪ್ರದಾನ ಮಾಡಿದರು. ಮುಂಡಿಯೂರಿ ಕೆಳಗೆ ಕುಳಿತು ಚಕ್ರವರ್ತಿ ಅವರು ಪ್ರಶಸ್ತಿ ಸ್ವೀಕರಿಸಿದ್ದು ಗಮನ ಸೆಳೆಯಿತು.

ಮೈಸೂರು,ಮೇ 28(ಪಿಎಂ)– ಸುಳ್ಳನ್ನು ಸತ್ಯವೆಂದು ಬಿಂಬಿಸುವ ಪ್ರಚಾರದ (ಪ್ರಾಪಗಾಂಡ) ವಿರುದ್ಧದ ಹೋರಾಟಕ್ಕೆ ಅಂದು ವೀರ ಸಾವರ್ಕರ್ ತಮ್ಮ ಬದುಕನ್ನೇ ಪಣವಾಗಿಟ್ಟರು. ಇಂದು ನಾವು ಅದೇ ರೀತಿಯ ಪ್ರಚಾರ ಹಿಮ್ಮೆಟ್ಟಿಸಲು ದೃಢವಾಗಿ ನಿಲ್ಲಬೇಕಿದೆ ಎಂದು ಯುವ ಬ್ರಿಗೇಡ್ ಸಂಸ್ಥಾಪಕ ಹಾಗೂ ಸಾಮಾಜಿಕ ಕಾರ್ಯಕರ್ತ ಚಕ್ರವರ್ತಿ ಸೂಲಿಬೆಲೆ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ ಸಾವರ್ಕರ್ ಅವರ 141ನೇ ಜಯಂತಿ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಎರಡನೇ ವರ್ಷದ ವೀರ ಸಾವರ್ಕರ್ ಸಮ್ಮಾನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಭಾರತದ ವಿರುದ್ಧ ಚೀನಾ, ಪಾಕಿಸ್ತಾನ, ಅಮೆರಿಕಾ ಸೇರಿದಂತೆ ಯಾವುದೇ ದೇಶಗಳು ಪ್ರತ್ಯಕ್ಷ ಯುದ್ಧ ಮಾಡಲಾರವು. ಆದರೆ ಈಗಿನ ಹೊಸ ಯುದ್ಧವಾದ ಪ್ರಚಾರ (ಪ್ರಾಪಗಾಂಡ) ಬಳಸಿಕೊಳ್ಳುತ್ತಾರೆ. ಅದೇ 'ಪ್ರಾಪಗಾಂಡ ವಾರ್'. ಅಂದರೆ ಪ್ರಚಾರದ ಯುದ್ಧ. ಆ ಮೂಲಕ ಸುಳ್ಳನ್ನು ಹರಿಬಿಟ್ಟು ಭಿನ್ನ ಭಿನ್ನ ಸಂಪನ್ಮೂಲಗಳ ಮೂಲಕ ಪದೇ ಪದೆ ತಲೆಗೆ ತುಂಬಿ ಸತ್ಯ ಎಂದು ಒಪ್ಪಿಸಲಾಗುತ್ತದೆ ಎಂದು ಹೇಳಿದರು.

ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ರಷ್ಯಾಗೆ ಭಾರೀ ಹೊಡೆತ ಬಿದ್ದಿದೆ ಎಂದು ಬಿಂಬಿಸಲಾಗಿದೆ. ಉಕ್ರೇನ್ ಸದೃಢವಾಗಿದೆ ಎನ್ನಲಾಗುತ್ತಿದೆ. ಆದರೆ ವಾಸ್ತವದಲ್ಲಿ ರಷ್ಯಾವೇ ಪ್ರಬಲವಾಗಿದೆ. ರಷ್ಯಾ ಕುರಿತಂತೆ ನೈಜ ಸಂಗತಿ ದೊರೆಯುವ ವ್ಯವಸ್ಥೆಯೇ ಇಲ್ಲವಾಗಿದೆ. ಇಸ್ರೇಲ್ ಮತ್ತು ಗಾಜಾಪಟ್ಟಿ ಯುದ್ಧ ಸಂಬಂಧ ನಮಗೆ ದೊರೆಯುವ ಮಾಹಿತಿ ಪ್ರಕಾರ ಗಾಜಾದವರು ಇಸ್ರೇಲ್ ಅನ್ನು ಮುಗಿಸೇ ಬಿಡುತ್ತಾರೆ ಎನ್ನಲಾಗಿದೆ. ಆದರೆ ವಾಸ್ತವದಲ್ಲಿ ಇಸ್ರೇಲ್ ಬಲಿಷ್ಠ ವಾಗಿದೆ. ಹೀಗಾಗಿ ಅಮೆರಿಕಾದ ಲೆಫ್ಟ್ ಲಿಬರಲ್‌ಗಳು ಇದನ್ನು ಹರಿಬಿಟ್ಟು ಈಗ ಬೀದಿಗೆ ಬಂದಿದ್ದಾರೆ. ಇಡೀ ಜಗತ್ತನ್ನು ಇಸ್ರೇಲ್ ವಿರುದ್ಧ ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಜಗತ್ತಿನ ಹಲವು ರಾಷ್ಟ್ರಗಳು ಬಲವಾಗಿ ಇಸ್ರೇಲ್ ಪರವಾಗಿ ನಿಂತಿದ್ದು, ಹೀಗಾಗಿ ಇಸ್ರೇಲ್ ಬಲಿಷ್ಠವಾಗಿದೆ. ಇದು ವಾಸ್ತವ. ಆದರೆ ವ್ಯವಸ್ಥಿತ ಪ್ರಚಾರ ವಾರ್ ಮೂಲಕ ಸುಳ್ಳನ್ನು ಪದೇ ಪದೆ ಹೇಳಿ ನಮ್ಮನ್ನು ಒಪ್ಪಿಸುವ ಕೆಲಸ ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಭೂಗೋಳದಲ್ಲಿ ಅತ್ಯಂತ ಬೆಸ್ಟ್ ವೆಸ್ಟ್‌ನವರು. ಈಸ್ಟ್‌ನವರು ಯಾವುದಕ್ಕೂ ಪ್ರಯೋಜನವಿಲ್ಲ ಎಂಬುದಾಗಿ ಬಿಂಬಿಸುತ್ತಿರುವುದೂ ಇದೇ ರೀತಿಯ ಇನ್ನೊಂದು ಪ್ರಾಪಗಾಂಡ. ಅದೇ ರೀತಿಯಲ್ಲಿ ದೇಶದ ಲೋಕಸಭಾ ಚುನಾವಣೆ ಸಂಬಂಧ ಮೊದಲ ಹಂತದಲ್ಲಿ ಪ್ರಾಪಗಂಡ ಹೇಗಿತ್ತೆಂದರೆ ಮೋದಿ ಸೋತೇ ಹೋಗುತ್ತಾರೆ ಎಂದು ಬಿಂಬಿಸಲಾಗಿತ್ತು. ಎರಡನೇ ಹಂತದ ವೇಳೆ ಮೋದಿ ಆಸ್ತಿಗೆ ಸಂಬಂಧಿಸಿದಂತೆ ಮಾತನಾಡುತ್ತಿದ್ದಂತೆ ವಿರೋಧ ಪಕ್ಷವರು ಮೋದಿ ವಿರುದ್ಧ ಮುಗಿಬಿದ್ದರು. ಮೋದಿಯವರು ಅಧಿಕಾರಕ್ಕೆ ಬಂದಾಕ್ಷಣ ಸಂವಿಧಾನ ಬದಲಿಸುತ್ತಾರೆ ಎಂದು ಇವರು ಹೇಳಿದ್ದು ಮಾತ್ರ ವೇದವಾಕ್ಯವೇ? ಇವರು ಸುಳ್ಳುಗಳನ್ನೇ ಹೇಳಿಕೊಂಡು ಬಂದಿದ್ದು ಸರಿಯೇ ಎಂದು ಕಿಡಿಕಾರಿದರು.

ಮೋದಿ ಒಂದು ಸತ್ಯವನ್ನು ಹೇಳಿದ್ದಕ್ಕೆ ಇವರಿಗೆ ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಎರಡನೇ ಹಂತ ಮುಗಿಯುವ ವೇಳೆಗೆ ಮೋದಿ ಒದ್ದಾಡುತ್ತಿದ್ದಾರೆ ಎನ್ನಲು ಶುರು ಮಾಡಿದರು. ನಾಲ್ಕನೇ ಹಂತ ಮುಗಿಯುವ ವೇಳೆಗೆ ರಾಯ್‌ಬರೇಲಿ ಒಂದರಲ್ಲಿ ಗೆದ್ದರೆ ಸಾಕು ಎನ್ನುವಂತಾದರು. ಐದನೇ ಹಂತದ ಬಳಿಕ ವಿರೋಧ ಪಕ್ಷವರು ಮಾತನ್ನೇ ನಿಲ್ಲಿಸಿದ್ದರು. ಈಗ ಎನ್‌ಡಿಎಗೆ 400 ಸ್ಥಾನ ಬರುವುದಿಲ್ಲ ಎನ್ನುತ್ತಿದ್ದಾರೆ. ಇದಕ್ಕೆ ಮೋದಿ ನಾನು 400 ಸ್ಥಾನಕ್ಕೆ ಪ್ರಯತ್ನವನ್ನೇ ಮಾಡಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ವಾಸ್ತವವಾಗಿ ಬೇಕಿರುವುದು 272 ಸ್ಥಾನ. ಅದನ್ನು ನಾವು ಪಡೆಯುತ್ತೇವೆ ಎಂದಿದ್ದಾರೆ. ಮೋದಿ ಸೋಲುತ್ತಾರೆ ಎಂದು ರಾಹುಲ್‌ಗಾಂಧಿ ಮತ್ತು ಅವರ ಟೀಮ್ ಹೇಳುತ್ತಿತ್ತು ಎಂದು ಕಿಡಿಕಾರಿದರು.

ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ನೆಹರು ಗ್ರೇಟ್, ಸಾವರ್ಕರ್ ಬ್ರಿಟಿಷರ ಏಜೆಂಟ್ ಎಂಬ ಪ್ರಾಪಗಂಡ ಇತ್ತು. ರಾಮಚಂದ್ರ ಗುಹಾ ಅವರು ಇತ್ತೀಚೆಗೆ ಟೆಲಿಗ್ರಾಫ್‌ಗೆ ಒಂದು ಲೇಖನ ಬರೆದಿದ್ದು, ಅದರಲ್ಲಿ ಮೋದಿಯವರನ್ನು ಪ್ರಜಾಪ್ರಭುತ್ವದ ವಿರೋಧಿ ಎಂದು ಬಿಂಬಿಸಲು ಪ್ರಯತ್ನಿಸಲಾಗಿದೆ. ಮೋದಿ ಮತ್ತೆ ಅಧಿಕಾರಕ್ಕೆ ಬರುತ್ತಾರೆ ಎಂಬ ಆತಂಕ ಈ ಲೇಖನದಲ್ಲಿ ಎದ್ದು ಕಾಣುತ್ತಿದೆ. ತುರ್ತು ಪರಿಸ್ಥಿತಿ ಜಾರಿ ಮಾಡಿದ ಇಂದಿರಾ ಗಾಂಧಿ ಇವರಿಗೆ ಪ್ರಜಾಪ್ರಭುತ್ವದ ಪರವೇ ಎಂದು ಕಿಡಿಕಾರಿದರು.

ಈ ಪ್ರಾಪಗಾಂಡ ಎಂಬುದು ಕಾಂಗ್ರೆಸ್ ಹಾಗೂ ಇತರೆ ವಿರೋಧ ಪಕ್ಷದವರಿಗೆ ಬ್ರಿಟಿಷರು ಕೊಟ್ಟ ಬಳುವಳಿಯಾಗಿದೆ. ಬ್ರಿಟಿಷರು ಕೊನೆಗೆ ದೇಶದಲ್ಲಿ ಬಿಟ್ಟು ಹೋಗಿದ್ದು ನೆಹರು.

ಲಾಸ್ಟ್ ವೈಸ್‌ರಾಯ್ ಆಫ್ ಇಂಡಿಯಾ ಎಂದರೆ ಅದು ನೆಹರು ಎನ್ನಬಹುದು ಅಥವಾ ಮೌಂಟ್ ಬ್ಯಾಟನ್ ದೇಶದ ಪ್ರಥಮ ಪ್ರಧಾನಿ ಎಂದಾದರೂ ಕರೆಯಬಹುದು. ಬ್ರಿಟಿಷರು ಭಾರತ ವಿರೋಧಿ ಪ್ರಾಪಗಂಡವನ್ನು ಯಶಸ್ವಿಯಾಗಿ ಮಾಡಿದರು. ಆ ಮೂಲಕ ಭಾರತದ ವಿಚಾರಗಳನ್ನು ತಿರುಚಿ ಬರೆಸಿದರು ಎಂದರು.

ಸರಳ ಬಹುಮತದೊಂದಿಗೆ ಮೋದಿ ಅಧಿಕಾರಕ್ಕೆ: ನರೇಂದ್ರ ಮೋದಿ ನಿಸ್ಸಂದೇಹವಾಗಿ ಮೂರನೇ ಬಾರಿಗೆ ಪ್ರಧಾನಿಯಾಗಲಿದ್ದಾರೆ. ಆದರೆ 400 ಸ್ಥಾನ ಬರುವುದಿಲ್ಲ ಎಂಬುದೇ ವಿರೋಧ ಪಕ್ಷದವರಿಗೆ ದೊಡ್ಡ ಸಮಾಧಾನ. ಸರಳ ಬಹುಮತದೊಂದಿಗೆ ಮತ್ತೊಮ್ಮೆ ಅವರು ಅಧಿಕಾರಕ್ಕೇರುತ್ತಾರೆ. ಅವರೇ ಹೇಳಿರುವಂತೆ ಮುಂದಿನ ಅಧಿಕಾರಾವಧಿ ಬಹಳ ಕಠಿಣವಾಗಿರುತ್ತದೆ ಎಂದು ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

ಭೈರಪ್ಪರಿಂದ ಪ್ರಶಸ್ತಿ ಸ್ವೀಕಾರ: ಇದಕ್ಕೂ ಮುನ್ನ ಹಿರಿಯ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರಿಂದ ಚಕ್ರವರ್ತಿ ಸೂಲಿಬೆಲೆ ಪ್ರಶಸ್ತಿ ಸ್ವೀಕರಿಸಿದರು. ಭೈರಪ್ಪರನ್ನೇ ಕುರ್ಚಿಯಲ್ಲಿ ಕೂರಿಸಿದ ಸೂಲಿಬೆಲೆಯವರು, ತಾವು ಕೆಳಗೆ ಕುಳಿತು ಅವರಿಂದ ಪ್ರಶಸ್ತಿ ಸ್ವೀಕರಿಸಿ ಎಲ್ಲರ ಗಮನ ಸೆಳೆದರು. ಪ್ರಶಸ್ತಿ ಪತ್ರದೊಂದಿಗೆ ಒಂದು ಲಕ್ಷ ರೂ. ನಗದನ್ನು ಪ್ರಶಸ್ತಿಯೂ ಒಳಗೊಂಡಿದೆ. ಈ ನಗದನ್ನು ಗೋಶಾಲೆಯೊಂದಕ್ಕೆ ನೀಡುವುದಾಗಿ ಇದೇ ವೇಳೆ ಸೂಲಿಬೆಲೆ ಘೋಷಿಸಿದರು. ಇಡೀ ಕಲಾಮಂದಿರವು ಕಿಕ್ಕಿರಿದು ತುಂಬಿತ್ತು. ಬಿಗಿ ಪೊಲೀಸ್ ಭದ್ರತೆಯನ್ನೂ ಕಲ್ಪಿಸಲಾಗಿತ್ತು. ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ, ಆದಿತ್ಯ ಅಧಿಕಾರಿ ಆಸ್ಪತ್ರೆ ಸಂಸ್ಥಾಪಕ ಡಾ.ಚಂದ್ರಶೇಖರ್ ವೇದಿಕೆಯಲ್ಲಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಸಭಿಕರಾಗಿ ಆಗಮಿಸಿದ್ದರು.

ಸಿದ್ದಗಂಗಾ ಶ್ರೀಗಳಿಗೆ ಭಾರತ ರತ್ನ ಏಕೆ ಕೊಟ್ಟಿಲ್ಲ ಎಂಬುದೇ ಅರ್ಥವಾಗುತ್ತಿಲ್ಲ

ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಬೇಸರ

- ಶ್ರೀಗಳು ಲಕ್ಷಾಂತರ ಮಕ್ಕಳಿಗೆ ಅನ್ನ–ವಿದ್ಯೆ ಕೊಟ್ಟರೂ ಯಾರನ್ನೂ ಜಾತಿ ಬದಲಾಯಿಸಿ ಅನ್ನಲಿಲ್ಲ
- ಆದರೆ ಮದರ್ ತೆರೇಸ್ಸಾ ಅನಾಥ ಮಕ್ಕಳ ಕರೆತಂದು ಎಲ್ಲರನ್ನೂ ಕ್ರೈಸ್ತರನ್ನಾಗಿ ಮಾಡಿದರು; ಅವರಿಗೆ ಭಾರತ ರತ್ನವೂ ಸಿಕ್ತು; ನೊಬೆಲ್ ಪ್ರಶಸ್ತಿಯೂ ದಕ್ಕಿತು!

ಮೈಸೂರು,ಮೇ 28(ಪಿಎಂ)– ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳಿಗೆ ಏಕೆ 'ಭಾರತ ರತ್ನ' ಕೊಟ್ಟಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಈ ಪುರಸ್ಕಾರ ನೀಡುವಂತೆ ಎಲ್ಲರೂ ಕೇಳುತ್ತಲೇ ಇದ್ದಾರೆ. ಆದರೂ ಕೊಡದಿರುವುದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಸಾವರ್ಕರ್ ಅವರನ್ನು ದೂರ ಇಟ್ಟಂತೆ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮಿಗಳನ್ನು ಹಾಗೆಯೇ ಮಾಡಿಬಿಡುತ್ತಾರೆಯೇ ಎಂಬುದು ಕಾಡುವಂತಾಗಿದೆ ಎಂದು ಹಿರಿಯ ಸಾಹಿತಿ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ ಹೇಳಿದರು.

ವೀರ ಸಾವರ್ಕರ್ ಸಮ್ಮಾನ ಪ್ರಶಸ್ತಿ ಪ್ರದಾನ ಸಮಾರಂಭದ ಘನ ಉಪಸ್ಥಿತಿಯಲ್ಲಿ ಮಾತ ನಾಡಿದ ಅವರು, ಸಿದ್ಧಗಂಗಾ ಸ್ವಾಮೀಜಿಯವರನ್ನು ನಾನು ಮೂರು ಬಾರಿ ಖುದ್ದು ನೋಡಿದ್ದೇನೆ. ನಾನು ಯಾವ ಸ್ವಾಮಿಗಳಿಗೂ ನಮಸ್ಕಾರ ಮಾಡಲ್ಲ. ಏಕೆಂದರೆ ಬಹುತೇಕ ಸ್ವಾಮಿಗಳು ದುಡ್ಡು ಮಾಡಿಕೊಂಡು ಇರುತ್ತಾರೆಯೇ ಹೊರತು ಏನೂ ಮಾಡುವುದಿಲ್ಲ ಎಂಬುದು ನನಗೆ ಗೊತ್ತಿದೆ. ಹಾಗಾಗಿ ಕೇವಲ ಕೈ ಮುಗಿಯುತ್ತಾನೆ. ಆದರೆ ಸಿದ್ದಗಂಗಾದ ಶಿವಕುಮಾರ್ ಸ್ವಾಮಿಗಳಿಗೆ ಕಾಲು ಮುಟ್ಟಿ ನಮಸ್ಕಾರ ಮಾಡಿದ್ದೇನೆ ಎಂದರು.

ಏಕೆಂದರೆ ಅವರು ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ನ–ವಿದ್ಯೆ ಕೊಟ್ಟಿದ್ದಾರೆ. ಅವರಲ್ಲಿ ಆಶ್ರಯ ಪಡೆದವರಲ್ಲಿ ಮುಸಲ್ಮಾನರು, ಕ್ರೈಸ್ತರು ಇದ್ದರು. ಆದರೆ ಯಾರನ್ನು ಕೂಡ ಜಾತಿ ಬದಲಾಯಿಸಿ ಎಂದು ಅವರು ಹೇಳಲಿಲ್ಲ. ನನ್ನ ಸ್ವಂತ ಅಭಿಪ್ರಾಯದಲ್ಲಿ ಸನ್ಯಾಸಿಗಳು ಯಾವುದೇ ಟೈಟಲ್ ತೆಗೆದುಕೊಳ್ಳಬಾರದು ಎಂದು ಹೇಳಿದರು. ಕಲ್ಕತ್ತಾದಲ್ಲಿ ಮದರ್ ತೆರೇಸಾ ಅಂತ ಇದ್ದರು. ಅವರು ಅನಾಥ ಮಕ್ಕಳನ್ನು ಕರೆತಂದು ಕ್ರೈಸ್ತರನ್ನಾಗಿ ಮಾಡುತ್ತಿದ್ದರು. ನೆಹರು ಅವರಿಗೆ ಭಾರತ ರತ್ನ ಪುರಸ್ಕಾರ ಕೊಟ್ಟರು. ನೊಬೆಲ್ ಪುರಸ್ಕಾರವೂ ಅವರಿಗೆ ದಕ್ಕಿತು ಎಂದರು.

ಫ್ರೆಂಚ್ ಪತ್ರಕರ್ತರು ಡೆಲ್ಲಿಯಲ್ಲಿದ್ದರು. ಅವರನ್ನು ನಾನು ಹಲವು ಬಾರಿ ಭೇಟಿಯಾಗಿದ್ದೆ. ಅವರು ಯುಪಿಎ ಅಧಿಕಾರಾವಧಿಯಲ್ಲಿ ಸೋನಿಯಾ ಗಾಂಧಿ ಏನು ಮಾಡಿದರು ಎಂದು ಬರೆದಿದ್ದಾರೆ. ಸೋನಿಯಾ ಗಾಂಧಿ ಐದು ರಾಜ್ಯಗಳಲ್ಲಿ ಕ್ರೈಸ್ತರನ್ನೇ ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದರು. ನರಸಿಂಹರಾವ್ ಪಿಎಂ ಆಗಿದ್ದವರು. ಅವರು ತೀರಿ ಹೋದಾಗ ಅವರ ಸಂಸ್ಕಾರಕ್ಕಾಗಿ ಡೆಲ್ಲಿಯಲ್ಲಿ ಅವಕಾಶ ದೊರೆಯದಂತೆ



ಮಾಡಲಾಯಿತು. ಆಂಧ್ರದಲ್ಲಿದ್ದ ರಾಜಶೇಖರ ರೆಡ್ಡಿ ಮೂಲಕ ನರಸಿಂಹ ರಾವ್ ಆಂಧ್ರದವರು, ಹಾಗಾಗಿ ಆಂಧ್ರದಲ್ಲಿ ಸಂಸ್ಕಾರ ಮಾಡಬೇಕೆಂದು ಹೇಳಿಸಿ, ಅದೇ ಸರಿ ಎನ್ನುವಂತೆ ಜನರ ತಲೆಗೆ ತುಂಬಲಾಯಿತು. ಲಿಬರೇಷನ್ ನಿರ್ಧಾರ ಕೈಗೊಂಡಿದ್ದು ಪಿ.ವಿ.ನರಸಿಂಹ ರಾವ್. ಆದರೆ ಅದರ ಶ್ರೇಯಸ್ಸು ತೆಗೆದುಕೊಂಡಿದ್ದು ಮನಮೋಹನ್ ಸಿಂಗ್ ಎಂದು ಬೇಸರ ವ್ಯಕ್ತಪಡಿಸಿದರು.

ಜೊತೆಗೆ ಸೋನಿಯಾ ಗಾಂಧಿಯವರು ಕೇಂದ್ರ ಸರ್ಕಾರದ ಎಲ್ಲಾ ಮುಖ್ಯ ಅಧಿಕಾರ ಸ್ಥಾನಗಳಲ್ಲಿ ಕ್ರೈಸ್ತರನ್ನೇ ಕೂರಿಸಿದರು. ಮನಮೋಹನ್ ಸಿಂಗ್ ರಾಷ್ಟ್ರದ ಸಂಪತ್ತು ಹೆಚ್ಚು ಭಾಗ ಮುಸಲ್ಮಾನರಿಗೆ ಸೇರಬೇಕೆಂದು ತೀರ್ಮಾನ ಮಾಡಿದರು. ತೆರಿಗೆ ಕಟ್ಟುವವರು ಹಿಂದೂಗಳು. ದೊಡ್ಡ ವಹಿವಾಟು ಇದ್ದರೂ ಅವರು ತೆರಿಗೆ ಕಟ್ಟದೇ ಎಲ್ಲವನ್ನೂ ಮೇನೇಜ್ ಮಾಡುತ್ತಾರೆ. ಅವರು ತೆರಿಗೆ ಕಟ್ಟದೇ ಎಂಜಾಯ್ ಮಾಡುವ ರೀತಿ ಮಾಡಿದ್ದರು. 1964ರಲ್ಲಿ ಇಡೀ ಕ್ರೈಸ್ತ ಸಮುದಾಯಕ್ಕೆ ಮುಖ್ಯಸ್ಥರಾಗಿದ್ದವರು ಇಂಡಿಯಾ ಪ್ರವಾಸಕ್ಕೆ ಬಂದಿದ್ದರು. ಅವರು ಇಂಡಿಯಾದಿಂದ ಆರಂಭಿಸಿ ಇಡೀ ಏಷ್ಯಾವನ್ನು ಕ್ರೈಸ್ತರಾಗಿ ಮಾಡುವುದಾಗಿ ಹೇಳಿದ್ದರು. ಅಂದಿನ ಕೇಂದ್ರ ಸರ್ಕಾರ ಅವರಿಗೆ ಸಕಲ ಸೌಕರ್ಯ ಕಲ್ಪಿಸಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜಶೇಖರ ರೆಡ್ಡಿ ಇಡೀ ಆಂಧ್ರದಲ್ಲಿ ಚರ್ಚ್ ಕಟ್ಟಿಸಿದರು. ತಿರುಪತಿಯ ಸಮೀಪವೂ ಚರ್ಚ್ ಕಟ್ಟಿಸಲು ಪ್ರಯತ್ನಿಸಿದ್ದರು. ಆಗ ಉಡುಪಿ ಸ್ವಾಮೀಜಿ, ಸುತ್ತೂರು ಸ್ವಾಮೀಜಿಯವರು ತಿರುಪತಿಗೆ ಭೇಟಿ ನೀಡಿ ಇದಕ್ಕೆ ವಿರೋಧಿಸಿದರು. ಇದರಿಂದ ಅದು ನಿಂತಿತು. ರಾಜಶೇಖರ ರೆಡ್ಡಿ ತಿರುಪತಿ ಲಾಡು ತಯಾರಿಸುವ ಗುತ್ತಿಗೆಯನ್ನೂ ಕ್ರೈಸ್ತರೊಬ್ಬರಿಗೆ ನೀಡಿದರು. ಈಗ ಆರ್‌ಎಸ್‌ಎಸ್, ಬಿಜೆಪಿ ಮುನ್ನಲೆಗೆ ಬಂದಿರುವುದರಿಂದ ಹಿಂದೂಗಳಲ್ಲಿ ಧೈರ್ಯ ಬಂದಿದೆ. ಆದರೆ ಆಗ ಈಗಿನಂತಹ ಪರಿಸ್ಥಿತಿ ಇರಲಿಲ್ಲ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ, ಪ್ರಶಸ್ತಿ ಯಾರ ಹೆಸರಿನಲ್ಲಿ ಇದೆಯೋ ಅವರಿಗೆ ಅತ್ಯಂತ ಶ್ರದ್ಧೆಯಿಂದ ಸಮರ್ಪಿಸುತ್ತೇನೆ. ಸಾವರ್ಕರ್ ಅವರು ನನಗೆ ಏನು ಕೊಡಬೇಕೋ ಕೊಟ್ಟು ಆಗಿದೆ. ಕೆಲವು ವರ್ಷಗಳ ಹಿಂದೆ ಸಂಸದರೊಬ್ಬರು ಚಕ್ರವರ್ತಿಗೆ ಮೋದಿಯೇ ಬಂಡವಾಳ ಎಂದು ಮಾಧ್ಯಮದಲ್ಲಿ ಹೇಳಿಕೆ ನೀಡಿದ್ದರು. ಸತ್ಯ ಹೇಳಬೇಕೆಂದರೆ ಮೋದಿ ಪ್ರತ್ಯಕ್ಷವಾಗಿ ನನಗೆ ಏನೂ ಕೊಟ್ಟಿಲ್ಲ. ಆದರೆ ನಾನು ಜೀವನದ ಅಮೂಲ್ಯವಾದ ಎರಡೂ ಮುಕ್ಕಾಲು ವರ್ಷಗಳನ್ನು ಮೋದಿ ಪರ ಪ್ರಚಾರಕ್ಕೆ ಕೊಟ್ಟಿದ್ದೇನೆ. ನಾನು ತೆಗೆದುಕೊಂಡಿದ್ದು ಏನೂ ಇಲ್ಲ. ಮೋದಿಯವರು ಈ ರಾಷ್ಟ್ರವನ್ನು ವಿಶ್ವ ಗುರು ಮಟ್ಟಕ್ಕೆ ಏರಿಸಿದ್ದಾರೆ. ಅದಕ್ಕಿಂತ ದೊಡ್ಡ ಕೊಡುಗೆ ಮತ್ತೇನು ಬೇಕು ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಕಿಡಿ: ಮಂತ್ರಿ ಪ್ರಿಯಾಂಕ್ ಖರ್ಗೆ ಟ್ವಿಟ್ ಮಾಡಿ, ಉತ್ತರ ಭಾರತದವರು ಬೆಂಗಳೂರಿಗೆ ಕೆಲಸಕ್ಕೆ ಬರುತ್ತಾರೆ ಎಂದು ಅಪಸ್ವರ ಎತ್ತಿದ್ದಾರೆ. ಇವರು ಕಲಬುರಗಿಯವರು. ಅಲ್ಲಿಂದ ಎಷ್ಟೋ ಮಂದಿ ಬೆಂಗಳೂರಿಗೆ ಕೆಲಸಕ್ಕೆ ಬರುವುದಿಲ್ಲವೇ? ಹಾಗಾದರೆ ಇವರಿಗೆ ಕಲಬುರಗಿಯಲ್ಲೇ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಲು ಆಗುವುದಿಲ್ಲವೇ? ಎಂದು ಪ್ರಶ್ನಿಸಿದರು. ಇದೆಲ್ಲಾ ಪ್ರಾಪಗಂಡದ ಪರಿಣಾಮ. ಇದರ ಜೊತೆಗೆ ಮತ್ತೊಂದು ಗಂಭೀರವಾದ ಸಂಗತಿ ಎಂದರೆ ಅರ್ಬನ್ ನಕ್ಸಲರು ಎಲ್ಲಾ ಕಡೆ ನುಸುಳಲು ಶುರು ಮಾಡಿದ್ದಾರೆ. ಅರ್ಬನ್ ನಕ್ಸಲರು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದರೆ ಭೀಮಾ ಕೋರೆಂಗಾವ್ ಯುದ್ಧ ಸ್ಮರಣಾರ್ಥದ ಕಾರ್ಯಕ್ರಮದಲ್ಲಿ ಕಳೆದ ಕೆಲ ವರ್ಷಗಳ ಹಿಂದೆ ನಡೆದಾಗ, ಗಲಭೆ ಉಂಟಾಗಿ ಸರ್ಕಾರ ದಾಳಿ ಮಾಡಬೇಕಾಯಿತು. ಆಗ ದಾಖಲೆಯೊಂದು ಸಿಕ್ಕಿತು. ಅದರಲ್ಲಿ ವೈಟ್ ಕಾಲರ್ ಜಾಬ್ ಮಾಡುವಂತಹ ಪಟ್ಟಣಗಳ ನಡುವೆ ತಮ್ಮ ಚಿಂತನೆ ಹಬ್ಬಿಸಲು ಬೇಕಾದಂತಹ ಟೂಲ್ ಕಿಟ್ ಸಿದ್ಧಪಡಿಸಿದ್ದರು. ಒಂದು ಚಿಂತನೆ ಮೇಲಿನಿಂದ ಬಂದರೆ ಅದನ್ನು ಎಲ್ಲರ ತಲೆಗೆ ತುಂಬಲು ವ್ಯವಸ್ಥೆಯನ್ನು ಮಾಡುತ್ತಿದ್ದಾರೆ ಎಂದು ದೂರಿದರು. ವಿದೇಶಿ ಹಾಗೂ ದೇಶದ ಕೆಲ ಮಾಧ್ಯಮಗಳು ಅವರ ಪರವಾಗಿ ಕೆಲಸ ಮಾಡುತ್ತಿವೆ. ಅರ್ಬನ್ ನಕ್ಸಲರು ಹಾಗೂ ಮೈನಾರಿಟಿಗಳ ಸಮರ್ಥವಾದ ಜೋಡಿ ಕಳೆದ ಒಂದು ದಶಕದಿಂದ ದೇಶದಲ್ಲಿ ಕೆಲಸ ಮಾಡುತ್ತಿದೆ ಎಂದು ದೂರಿದರು.

ಎರಡು ಹೃದಯಗಳ ಸಮ್ಮಿಲನವೇ ವಿವಾಹ

ಶರಣರ ದೃಷ್ಟಿಯಲ್ಲಿ ದಾಂಪತ್ಯ ಜೀವನ ಕುರಿತು ಉಪನ್ಯಾಸ



ಮೈಸೂರು, ಮೇ 28– ಸ್ವಸ್ಥ ಮತ್ತು ಸಾರ್ಥಕ ದಾಂಪತ್ಯ ಜೀವನಕ್ಕೆ ಶರಣರ ವಚನಗಳೆ ದಾರಿದೀಪ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ರಾಮಕೃಷ್ಣನಗರ ಶ್ರೀ ಬಸವೇಶ್ವರ ಸೇವಾ ಸಮಿತಿ ರಾಮಕೃಷ್ಣನಗರದ ಕೆ–ಬ್ಲಾಕ್‌ನಲ್ಲಿರುವ ಗಣಪತಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ 21ನೇ ಶರಣ ಸಂಗಮ ಕಾರ್ಯಕ್ರಮದಲ್ಲಿ ಶರಣರ ದೃಷ್ಟಿಯಲ್ಲಿ ದಾಂಪತ್ಯ ಜೀವನ ವಿಷಯ ಕುರಿತು ಉಪನ್ಯಾಸ ನೀಡಿದ ಅವರು, ವಿವಾಹವೆಂಬುದು ಎರಡು ದೇಹಗಳ ಸಂಬಂಧವಲ್ಲ, ಎರಡು ಹೃದಯಗಳ ಸಮ್ಮಿಲನವೆಂದು ಭಾವಿಸಿ ಒಬ್ಬರನ್ನೊಬ್ಬರು ಅರಿತುಕೊಂಡು ಬಾಳಲು ಶರಣರು 12ನೇ ಶತಮಾನದಲ್ಲಿಯೇ ಸಾವಿರಾರು ವಚನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅವುಗಳನ್ನು ಅರಿತು ಅದರಂತೆ ನಡೆದರೆ ವೈವಾಹಿಕ ಜೀವನ ಸುಖಕರವಾಗಿರುತ್ತದೆ. ಸನ್ಯಾಸಕ್ಕಿಂತ ಸಂಸಾರ ಶ್ರೇಷ್ಠ ಎಂಬ ನಿಲುವನ್ನು ವಚನಕಾರರು ತಾಳಿದ್ದು, ಅದಕ್ಕೆ ಜೇಡರ ದಾಸಿಮಯ್ಯ–ದುಗ್ಗಳೆ, ಆಯ್ದಕ್ಕಿ ಮಾರಯ್ಯ–ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಾರಯ್ಯ ಮೋಳಿಗೆ ಮಹಾದೇವಿ ಮುಂತಾದ ಶರಣ ದಂಪತಿಗಳ ಜೀವನವೇ ನೈಜ ದೃಷ್ಟಾಂತವಾಗಿದೆ ಎಂದರು.

ಹನ್ನೆರಡನೇ ಶತಮಾನಕ್ಕೆ ಮೊದಲು ಸರ್ವೇ ಜನ ಸುಖಿನೋ ಭವಂತು ಎಂಬ ವಾಕ್ಯ ಪ್ರಚಲಿತದಲ್ಲಿತ್ತು. ಶರಣರು ಆ ಸುಭಾಷಿತಕ್ಕಿಂತ ಭಿನ್ನವಾಗಿ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಕುಲಜರೇ ಶರಣರು ಎಂದು ಹೇಳುವ ಮೂಲಕ ಸೃಷ್ಟಿಯಲ್ಲಿರುವ ಪ್ರತಿಯೊಂದು ಜೀವಿಯನ್ನು ಗೌರವಿಸಬೇಕು ಎಂದು ವಚನಗಳ ಮೂಲಕ ಕರೆ ನೀಡಿದರು ಎಂದರು. ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್ ಮಾತನಾಡಿ ಮೈಸೂರಿನಲ್ಲಿ ಮೊದಲ ಬಾರಿಗೆ ಬಯಲಿನಲ್ಲಿ ಬಸವಜಯಂತಿ ಕಾರ್ಯಕ್ರಮವನ್ನು ಆಚರಿಸುತ್ತಿದ್ದು, ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವಗಳನ್ನು ಜನಮಾನಸಕ್ಕೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಪ್ರತಿಯೊಬ್ಬರೂ ಸಹಕರಿಸಬೇಕು ಎಂದರು.

ಬಸವಬಳಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಮಾತನಾಡಿ ಮೈಸೂರಿನಲ್ಲಿ ಪ್ರಥಮ ಬಾರಿಗೆ ಆನೆಯ ಮೇಲೆ ಅಂಬಾರಿಯನ್ನು ಇಟ್ಟು ಅದರೊಳಗೆ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಇಟ್ಟು ಅದ್ದೂರಿಯಾಗಿ ಮೆರವಣಿಗೆ ಮಾಡುವ ಯೋಜನೆ ಹಾಕಿಕೊಂಡಿದ್ದು, ಅನುಭವ ಮಂಟಪ, ಸುತ್ತೂರು ಮಠ, ದೇವನೂರು ಮಠ, ಶ್ರೀ ಶಿವಕುಮಾರಸ್ವಾಮೀಜಿ, ಶ್ರೀ ಸಿದ್ಧೇಶ್ವರ ಸ್ವಾಮೀಜಿ ಮತ್ತು ಹಾನಗಲ್ ಕುಮಾರ ಸ್ವಾಮಿಗಳ ಬಗ್ಗೆ ತಿಳಿಸುವ ಸ್ತಬ್ಧಚಿತ್ರಗಳ ಮೆರವಣಿಗೆ ಇರುತ್ತದೆ ಎಂದರು.

ಯಡಕೊಳದ ವ್ಯಕ್ತಿ ನಾಪತ್ತೆ



ಮೈಸೂರು, ಮೇ 28– ತಾಲೂಕಿನ ಯಡಕೊಳ ಗ್ರಾಮದ ವೈ.ಎನ್.ಪ್ರಕಾಶ್ (54 ವರ್ಷ) ಆದರೆ 14–8–2021ರಲ್ಲಿ ಬೆಳಗ್ಗೆ 8.15 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವನು ಮನೆಗೆ ಮರಳಿಲ್ಲ. ಈ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ.ಸಂಖ್ಯೆ(ಎಸ್‌ಪಿ)–0821–2520040, ಕಂಟ್ರೋಲ್ ರೂಂ: 0821–2444800, ವರುಣ ಪೊಲೀಸ್ ಠಾಣೆ– 08212594411, 9480805052 ಹಾಗೂ ಸಹೋದರ ಎನ್.ಸೋಮಾರಾಧ್ಯ, ಮೊ.ಸಂ. 9845298047 ಸಂಪರ್ಕಿಸಿ ಮಾಹಿತಿ ನೀಡಬಹುದು.

ಮಾರಿಯಮ್ಮ ಜಾತ್ರೆ ಮಹೋತ್ಸವ; ಜಾನಪದ ಜಂಗಮ

ಮೈಸೂರು, ಮೇ 28– ಇಲ್ಲಿನ ಜೆ.ಪಿ. ನಗರದ ನವೋದಯ ಬಡಾವಣೆಯಲ್ಲಿ ದಲಿತ ಅಭಿವೃದ್ಧಿ ಸಂಘ ಹಾಗೂ ಧನ್ವಂತ್ರಿ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಮಾರಿಯಮ್ಮನವರ ಜಾತ್ರೆ ಮಹೋತ್ಸವ ಅಂಗವಾಗಿ ಸೋಮವಾರ ವಿಜೃಂಭಣೆಯಿಂದ 'ಜಾನಪದ ಜಂಗಮ' ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಜಾತ್ರೆ ಅಂಗವಾಗಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ನಗಾರಿ ಮತ್ತು ತಮಟೆ ಸಾಂಸ್ಕೃತಿಕ ಕಲಾವೃಂದದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಜಾನಪದ ಕಲಾ ತಂಡಗಳ ಅದ್ದೂರಿ ಮೆರವಣಿಗೆ ನಡೆಯಿತು.

ಹೆಗ್ಗೋಡಿನ ಮಹಿಳಾ ಡೊಳ್ಳು, ನಗರದ ತಮಟೆ, ಗಾರುಡಿ ಗೊಂಬೆ, ನಗಾರಿ, ಸೋಮನ ಕುಣಿತ ಹಾಗೂ ಕೀಲು ಕುದುರೆ ತಂಡಗಳು ಭಾಗವಹಿಸಿದ್ದವು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ನಗಾರಿ ಮತ್ತು ತಮಟೆ ಸಾಂಸ್ಕೃತಿಕ ಕಲಾವೃಂದ ಸಂಸ್ಥೆಯ ಅಧ್ಯಕ್ಷ ರಾಜಣ್ಣ ಹಾಗೂ ಪದಾಧಿಕಾರಿಗಳು, ನವೋದಯ ಬಡಾವಣೆಯ ಯಜಮಾನರು, ಛೇರ್ಮನ್, ಸಂಘದ ಪದಾಧಿಕಾರಿಗಳು, ಬಡಾವಣೆಯ ಮುಖ್ಯಸ್ಥರು, ಮಹಿಳಾ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದ್ದರು.



ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಭಾರೀ ಪ್ರತಿಭಟನೆ

- ಕಾನೂನು–ಸುವ್ಯವಸ್ಥೆ ಬಗ್ಗೆ ಆಕ್ರೋಶ
- ಹಾದಿ–ಬೀದಿಯಲ್ಲಿ ರೌಡಿಗಳ ಕಾಳಗ; ಹೆಣ್ಣು ಮಕ್ಕಳು ಹೊರಗೆ ಬಾರದಂತಹ ಪರಿಸ್ಥಿತಿ
- ಆಡಳಿತ ವ್ಯವಸ್ಥೆ ಕುಸಿತ; ಗ್ಯಾರಂಟಿ ಹೆಸರಲ್ಲಿ ಅಭಿವೃದ್ಧಿ ಕುಂಠಿತ
- ಇದಕ್ಕೆ ಹೊಣೆ ಸಿಎಂ ಸಿದ್ದರಾಮಯ್ಯ; ಬಿಜೆಪಿ ಆಕ್ರೋಶ





ಬೆಂಗಳೂರು, ಮೇ 28 (ಕೆಂಪಿ)– ಹಾದಿ–ಬೀದಿಯಲ್ಲಿ ರಂಪಾಟಗಳು, ಗೂಂಡಾ ಪ್ರವೃತ್ತಿ ಹೆಚ್ಚಾಗಿ ರಾಜ್ಯದ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಬಿಜೆಪಿಯ ಮುಖಂಡರು ಇಂದಿಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನವನದ ಬಳಿ ಹಮ್ಮಿಕೊಳ್ಳಲಾಗಿದ್ದ ಭಾರೀ ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಗೂಂಡಾಗಳ ರಾಜ್ಯವಾಗಿ ಕರ್ನಾಟಕ ಮಾರ್ಪಾಡಾಗುತ್ತಿದೆ. ಹೆಣ್ಣು ಮಕ್ಕಳು ಧೈರ್ಯವಾಗಿ ಮನೆಯಿಂದ ಹೊರಬರುವ ಪರಿಸ್ಥಿತಿ ಇಲ್ಲ, ಸಾರ್ವಜನಿಕವಾಗಿಯೇ ರೌಡಿಗಳು ಬೀದಿಯಲ್ಲಿ ಕಾಳಗ ಮಾಡುತ್ತಾರೆ. ಕಾನೂನು–ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ, ಸರ್ಕಾರ ಇತ್ತ ಗಮನವನ್ನೇ ಹರಿಸಿಲ್ಲ ಎಂದು ಅವರು ಆರೋಪಿಸಿದರು. ಒಂದೆಡೆ ಕಾನೂನು–ಸುವ್ಯವಸ್ಥೆ ಕುಸಿದಿದೆ, ಮತ್ತೊಂದೆಡೆ ಏನೂ ಅಭಿವೃದ್ಧಿ ಆಗದೆ ಖಜಾನೆ ಲೂಟಿ ಮಾಡುವ ಕೆಲಸಕ್ಕೆ ಅಧಿಕಾರಸ್ಥರು ಕೈಹಾಕಿದ್ದಾರೆ. ಕರ್ನಾಟಕದ ಇತಿಹಾಸದಲ್ಲೇ ಒಬ್ಬ ಅಧಿಕಾರಿ ಲೂಟಿ ಆರೋಪವನ್ನು ಸಹಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇದಕ್ಕೆ ನೇರ ಹೊಣೆ ಆಗುತ್ತಾರೆ ಎಂದು ಆರೋಪಿಸಿದರು. ನಾವು ಅಧಿಕಾರದಲ್ಲಿ ಇದ್ದಾಗ 40% ಸರ್ಕಾರ, ಪೇ ಸಿಎಂ ಎಂದು ಹಾದಿ ಬೀದಿಯಲ್ಲಿ ಬೊಬ್ಬೆ ಹೊಡೆಯುತ್ತಿದ್ದರು. ಈಗ ನಾವು ಇವರಿಗೆ ಏನನ್ನಬೇಕು ಎಂದು ಪ್ರಶ್ನಿಸಿದರು. ಅಭಿವೃದ್ಧಿ ಮಾಡದೆ ಇಲಾಖಾ ಹಣವನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗಾಯಿಸಿಕೊಂಡು ದೋಚುವ ದಂಧೆ ನಡೆದಿದೆ. ಇದಕ್ಕೆ ಎಂತಹ ಸಿಎಂ ಅನ್ನಬೇಕು. ಪಂಚ ಗ್ಯಾರಂಟಿಗಳ ಹೆಸರಿನಲ್ಲಿ ಅಭಿವೃದ್ಧಿ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದೆ, ರಾಜ್ಯದ ಯಾವುದೇ ಭಾಗದಲ್ಲಿನ ರಸ್ತೆ ಗುಂಡಿ ಮುಚ್ಚಲೂ ಇವರಲ್ಲಿ ಹಣವಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯ ಮಾಡಿ ಕೈಬಿಸಿ ಮಾಡಿಕೊಳ್ಳಲು ಆಗದೆ, ನಿಗಮ–ಮಂಡಳಿಗಳಲ್ಲಿನ ಹಣವನ್ನೇ ವರ್ಗಾವಣೆ ಮಾಡಿಕೊಂಡು ದೋಚುವ ಕೆಲಸ ನಡೆದಿದೆ ಎಂದರು.

ಬ್ರ್ಯಾಂಡ್ ಬೆಂಗಳೂರು ಮಾಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿ ಒಂದು ವರ್ಷವಾದರೂ ಒಂದು ರೂಪಾಯಿಯನ್ನೂ ಬೆಂಗಳೂರಿಗೆ ಬಿಡುಗಡೆ ಮಾಡಿಲ್ಲ. ರಾಜ್ಯದ ಶೇ. 60ರಿಂದ 65ರಷ್ಟು ತೆರಿಗೆ ಬೆಂಗಳೂರಿನಿಂದ ಸಂಗ್ರಹವಾಗುತ್ತಿದೆ, ಸಿದ್ದರಾಮಯ್ಯ 'ನಮ್ಮ ತೆರಿಗೆ ನಮ್ಮ ಹಕ್ಕು' ಎಂದು ದೆಹಲಿಯಲ್ಲಿ ಪ್ರತಿಭಟನೆ ಮಾಡಿದ್ದರು, ಈಗ ಬೆಂಗಳೂರಿನ ಜನತೆ 'ಬೆಂಗಳೂರಿನ ತೆರಿಗೆ ಬೆಂಗಳೂರಿಗರ ಹಕ್ಕು' ಎಂದು ಹೋರಾಟ ಮಾಡುವಂತಾಗಿದೆ ಎಂದರು. ಮಳೆಗಾಲ ಆರಂಭವಾಗುವಾಗಲೇ ರಸ್ತೆಗಳಲ್ಲಿ ಹೊಂಡ ಗುಂಡಿಗಳಾಗಿದೆ. ಎಲ್ಲೆಡೆ ಕಸದ ರಾಶಿ ಬಿದ್ದಿದೆ, ಕಸ ಎತ್ತುವವರಿಗೆ ಜನವರಿಯಿಂದ ಸಂಬಳ ಕೊಟ್ಟಿಲ್ಲ. ಒಣಗಿದ ಮರಗಳನ್ನು ತೆರವುಗೊಳಿಸಲು ಇತ್ತೀಚೆಗೆ ಮುಖ್ಯಮಂತ್ರಿ ಸೂಚಿಸಿದ್ದರು. ಒಂದಾದರೂ ಮರ ತೆರವಾಗಿದ್ದರೆ ತೋರಿಸಿ ಎಂದು ಸವಾಲು ಹಾಕಿದರು. ಇದು ಅತ್ಯಂತ ಕೆಟ್ಟ–ಭ್ರಷ್ಟ ಸರಕಾರ, ಗುತ್ತಿಗೆದಾರರ ರಕ್ತ ಹೀರುವ ಸರಕಾರ ಎಂದು ಟೀಕಿಸಿದರು.

ಮೈಸೂರು ಮಿತ್ರ

ನಕ್ಕರೆ ಅದೇ ಸ್ವರ್ಗ

ಕಂಡಕ್ಟರ್ : "ಏನಯ್ಯಾ, ಹನ್ನೆರಡು ವರ್ಷ ಆಗಿರುವವರಿಗೆ ಅರ್ಧ ಚಾರ್ಜು. ನಿನ್ನ ವಯಸ್ಸು ಎಷ್ಟು?"
ಬಾಲಕ : "ಹನ್ನೊಂದು ವರ್ಷ"
ಕಂಡಕ್ಟರ್ : "ಹಾಗಾದರೆ ಹನ್ನೆರಡು ಆಗೋದು ಯಾವಾಗ?"
ಬಾಲಕ : "ಬಸ್ ಇಳಿದ ಮೇಲೆ!"

ಮೈಸೂರು ಮಿತ್ರ

ಬುಧವಾರ, 29 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಜೀವನದ ಆರಂಭದಲ್ಲಿಯೇ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವವನು ಧನ್ಯ – ಎಮರ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿರಿಯ ಮಗನಾಗ ಬೇಡ, ಕಿರಿ ಸೊಸೆಯಾಗಬೇಡ

ನಿಮ್ಮ ಪತ್ರಗಳು

ಕಾನೂನಿನ ಸಾಮಾನ್ಯ ಜ್ಞಾನ!

ಮಾನ್ಯರೆ,

ವೈದ್ಯನಿಗೆ ಯಾವುದೇ ರೋಗ ಬಂದರೆ ತನಗೆ ತಾನೇ ಶಸ್ತ್ರಚಿಕಿತ್ಸೆ ಮಾಡಿಕೊಳ್ಳಲು ಸಾಧ್ಯವಿಲ್ಲ. ದೂರು ನೀಡುವ ಪೊಲೀಸ್ ಅಧಿಕಾರಿ ದೂರುದಾರನಾಗಿ ತಾನೇ ಪ್ರಕರಣದ ತನಿಖೆ ಮಾಡಲು ಸಾಧ್ಯವಿಲ್ಲ. ದೂರುದಾರನೇ ತನಿಖಾಧಿಕಾರಿಯಾಗಲು ಸಾಧ್ಯವಿಲ್ಲ. ಯಾವುದೇ ನ್ಯಾಯಾಧೀಶ ತನ್ನದೇ ಪ್ರಕರಣದಲ್ಲಿ ತಾನೇ ತೀರ್ಪು ನೀಡಲು ಸಾಧ್ಯವಿಲ್ಲ.

ಅಂತೆಯೇ ಆದಾಯಕ್ಕೂ ಮೀರಿದ ಅಕ್ರಮ ಆಸ್ತಿ ಗಳಿಕೆ ಆರೋಪ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧದ ಸಿಬಿಐ ತನಿಖೆಗೆ ಹಿಂದಿನ ಸರಕಾರ ನೀಡಿದ್ದ ಅನುಮತಿಯನ್ನು ಡಿಕೆಶಿ ನೇತೃತ್ವದ ಸರಕಾರ, ಸಚಿವ ಸಂಪುಟವು ವಾಪಸ್ ಪಡೆಯಲು ಸಾಧ್ಯವಿಲ್ಲ.

ಸಿಬಿಐ ತನಿಖೆಯ ಪ್ರಕರಣದಲ್ಲಿ ಡಿ.ಕೆ. ಶಿವಕುಮಾರ್ ಓರ್ವ ಆರೋಪಿ. ಇದೇ ಡಿಕೆಶಿ ಅವರು ಕರ್ನಾಟಕ ಸರಕಾರದಲ್ಲಿ ಉಪಮುಖ್ಯಮಂತ್ರಿ. ತಾನೇ ಆರೋಪಿಯಾಗಿರುವ ಪ್ರಕರಣದ ತನಿಖೆಯನ್ನು ನಡೆಸಲು ಅಥವಾ ನಡೆಸದಿರಲು, ಅನುಮತಿ ನೀಡುವ ಅಥವಾ ಅನುಮತಿ ನಿರಾಕರಿಸುವ ಅಧಿಕಾರ ಡಿಕೆಶಿ ಅವರ ಸಚಿವ ಸಂಪುಟಕ್ಕಿಲ್ಲ.

ಸರಕಾರದ ಸಚಿವ ಸಂಪುಟದ ಭಾಗವಾಗಿರುವ ಡಿಕೆಶಿ ಅವರು ತನ್ನದೇ ಪ್ರಕರಣದ ವಿಚಾರವಾಗಿ ಯಾವುದೇ ಅನುಮತಿ ನೀಡುವ ಹಾಗೂ ನೀಡದಿರುವ ವಿಷಯವೇ ಹಾಸ್ಯಾಸ್ಪದ!

ಸಿಬಿಐ ತನಿಖೆಗೆ ಹಿಂದಿನ ಸರಕಾರವು ನೀಡಿರುವ ಅನುಮತಿಯನ್ನು ಈಗಿನ ಸರಕಾರವು ಹಿಂಪಡೆಯಬೇಕಾದರೆ ಆ ಸಚಿವ ಸಂಪುಟದಲ್ಲಿ ಡಿ.ಕೆ. ಶಿವಕುಮಾರ್ ಇರಬಾರದು. ಡಿಕೆಶಿ ಅವರು ಸಚಿವ ಸಂಪುಟದಿಂದ ಹೊರಗಿದ್ದರೆ ಮಾತ್ರ ಸಿಬಿಐ ತನಿಖೆಗೆ ನೀಡಿರುವ ಅನುಮತಿಯನ್ನು ಈಗಿನ ಸರಕಾರ, ಸಚಿವ ಸಂಪುಟ ಹಿಂಪಡೆಯಲು ಸಾಧ್ಯ. ಇದು ಕಾನೂನಿನ ಸಾಮಾನ್ಯ ಜ್ಞಾನ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ರಸ್ತೆ ಅಪಘಾತಗಳು ಹೆಚ್ಚುತ್ತಿರುವುದು ಆತಂಕಕಾರಿ

ಮಾನ್ಯರೆ,

ಪ್ರತ್ಯೇಕ ರಸ್ತೆ ಅಪಘಾತಗಳಿಗೆ ಸಿಲುಕಿ, ರಾಜ್ಯದಲ್ಲಿ ಒಂದೇ ದಿನ 51 ಮಂದಿ ಬಲಿಯಾಗಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಇಷ್ಟು ಸಾವು ಇದೇ ಮೊದಲು ಎಂದು ರಾಜ್ಯ ರಸ್ತೆ ಸುರಕ್ಷತೆ ಮತ್ತು ಸಂಚಾರ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ತಿಳಿಸಿರುವುದು ಆತಂಕಕಾರಿಯಾದ ವಿಚಾರ. ಈ ಅಪಘಾತಗಳಿಗೆ ಅತಿ ವೇಗ ಹಾಗೂ ಅಜಾಗರೂಕ ಚಾಲನೆಯೇ ಪ್ರಮುಖ ಕಾರಣವೆಂದು ಅಲೋಕ್ ಕುಮಾರ್ ತಿಳಿಸಿದ್ದಾರೆ. ಮೈಸೂರು ಮತ್ತು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದವು. ಆದರೆ ಪೊಲೀಸ್ ಮತ್ತು ಸಂಚಾರ ಇಲಾಖೆಗಳು ತೆಗೆದುಕೊಳ್ಳುತ್ತಿರುವ ಕಟ್ಟುನಿಟ್ಟಿನ ಕ್ರಮಗಳಿಂದಾಗಿ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಇಳಿಮುಖವಾಗುತ್ತಿರುವುದು ಸಮಾಧಾನಕರ ಸಂಗತಿಯಾಗಿದೆ.

ರಸ್ತೆ ಅಪಘಾತಗಳಿಗೆ ನಾನಾ ಕಾರಣಗಳಿರುತ್ತವೆ. ಬಹು ಮುಖ್ಯ ಕಾರಣವೆಂದರೆ ಅಜಾಗರೂಕ ಚಾಲನೆ. ಕೆಲವು ಚಾಲಕರು ಮದ್ಯ ಸೇವಿಸಿ ವಾಹನ ಚಾಲನೆ ಮಾಡುವುದು ಕೂಡ ಮತ್ತೊಂದು ಕಾರಣವೆನ್ನಬಹುದು. ರಸ್ತೆ ಸರಿಯಿಲ್ಲದಿರುವುದು, ರಸ್ತೆಗಳಲ್ಲಿ ಅವೈಜ್ಞಾನಿಕ ರೀತಿಯಲ್ಲಿ ಡುಬ್ಬ ಅಳವಡಿಸುವುದು, ಅತಿ ವೇಗದ ಚಾಲನೆ ಮುಂತಾದ ಕಾರಣಗಳು ಕೂಡ ರಸ್ತೆ ಅಪಘಾತಗಳಿಗೆ ಕಾರಣವಾಗಿದೆಯೆನ್ನಬಹುದು. ಚಾಲನಾ ಪರವಾನಗಿ ಪಡೆಯದೇ ಅದೆಷ್ಟೋ ಜನರು ವಾಹನ ಚಾಲನೆ ಮಾಡುತ್ತಾರೆ. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಬಹುತೇಕ ಅಪಘಾತಗಳನ್ನು ತಡೆಯಬಹುದು. ಇನ್ನು ಮುಂದಾದರೂ ಚಾಲಕರು ವಾಹನ ಚಾಲನೆ ಮಾಡುವ ಸಂದರ್ಭಗಳಲ್ಲಿ, ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಮೂಲಕ ಅಪಘಾತಗಳನ್ನು ತಡೆಯಲು ನೆರವಾಗಬೇಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸರ್ಕಾರಕ್ಕೆ ಎಂತಹ ದರಿದ್ರ ಪರಿಸ್ಥಿತಿ?

ಮಾನ್ಯರೇ

ಕನ್ನಡ ಬಾರದ ಅಧಿಕಾರಿಗಳನ್ನು ಸಹಿಸಿಕೊಳ್ಳದ ಕನ್ನಡಿಗರು, ಕನ್ನಡ ಸಂಘಟನೆಗಳು ಕನ್ನಡವೇ ಬರುವುದಿಲ್ಲವೆಂದು ಸಾರ್ವಜನಿಕವಾಗಿಯೇ ಒಪ್ಪಿಕೊಳ್ಳುವ ವಿದ್ಯಾಮಂತ್ರಿಯನ್ನು ಹೇಗೆ ಸಹಿಸಿಕೊಳ್ಳುತ್ತಿದ್ದಾರೆ? ಕನ್ನಡವೇ ಬಾರದ ವ್ಯಕ್ತಿಯನ್ನು ವಿದ್ಯಾಮಂತ್ರಿ ಮಾಡಿಕೊಳ್ಳಬೇಕಾದ ದರಿದ್ರ ಪರಿಸ್ಥಿತಿ ಸರಕಾರಕ್ಕೇಕೆ ಬಂದಿದೆ?

–ಕೆ.ಎ. ಸಿದ್ದಲಿಂಗಪ್ಪ, ಮೈಸೂರು.

ಸರ್ಕಾರಿ ಶಾಲಾ ದಾಖಲಾತಿ ಹೆಚ್ಚಾಗಲಿ

ಮಾನ್ಯರೆ,


ಶಿಕ್ಷಣ ಎಂಬುದು ಇಂದಿನ ದಿನಗಳಲ್ಲಿ ವ್ಯಾಪಾರವಾಗಿದ್ದು, ಉತ್ತಮ ಶಿಕ್ಷಣ ಪಡೆಯಲು ಅಪಾರ ಪ್ರಮಾಣದ ಹಣ ವಿನಿಯೋಗಿಸಬೇಕಾಗುತ್ತದೆ. ಕೇವಲ ಎಲ್‌ಕೆಜಿ, ಯುಕೆಜಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಪಾವತಿಸಬೇಕಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಉತ್ತಮ ಸೌಕರ್ಯಗಳಿಂದಾಗಿ ಜನ ಖಾಸಗಿ ಶಾಲೆಗಳೆಡೆ ಆಕರ್ಷಣೆಗೆ ಒಳಗಾಗುತ್ತಿದ್ದಾರೆ.

ಭಾರತದಲ್ಲಿ 2021–22 ರ ಸಾಲಿನ ಅಂಕಿ ಅಂಶಗಳ ಪ್ರಕಾರ 10,22,386 ಸರ್ಕಾರಿ ಮತ್ತು 82,480 ಸರ್ಕಾರಿ ಅನುದಾನಿತ ಶಾಲೆಗಳಿವೆ. ಕರ್ನಾಟಕದಲ್ಲಿ 2022–23 ರಲ್ಲಿ 48,066 ಸರ್ಕಾರಿ ಶಾಲೆಗಳಿದ್ದವು. 2023 ರ ಅಂತ್ಯದಲ್ಲಿ 47,499ಕ್ಕೆ ಇಳಿಯಿತು. ಈ ಸಮಯದಲ್ಲಿ 567 ಸರ್ಕಾರಿ ಶಾಲೆಗಳು ಮುಚ್ಚಲ್ಪಟ್ಟಿವೆ.

ಪ್ರಸ್ತುತ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಕುಸಿತವಾಗಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು. ಇದರಿಂದಾಗಿ ಅಪಾರ ಪ್ರಮಾಣದ ಹಣ ಉಳಿತಾಯವಾಗುತ್ತದೆ. ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ತಾವು ಕೂಡ ಕಾಳಜಿ ವಹಿಸಿಕೊಂಡು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವ ಮೂಲಕ ಶಿಕ್ಷಣಕ್ಕಾಗಿ ವಿನಿಯೋಗಿಸುವ ಹಣ ಉಳಿತಾಯವಾಗುತ್ತದೆ. ಹೆಚ್ಚಿನ ಮಕ್ಕಳು ಸರ್ಕಾರಿ ಶಾಲೆಗೆ ಸೇರುವ ಮೂಲಕ ಸರ್ಕಾರ ಸಹ ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುತ್ತದೆ.

ಸರ್ಕಾರಿ ಶಾಲೆಗಳಲ್ಲಿ ಓದಿದ ಹಲವಾರು ಜನ ವಿಶೇಷವಾದ ಸಾಧನೆಯನ್ನು ಮಾಡಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವೆಡೆಗೆ ದೃಢ ನಿರ್ಧಾರ ಮಾಡಬೇಕು. ಇದರಿಂದಾಗಿ ಸರ್ಕಾರ ಕೂಡ ಶಾಲೆಗಳ ಬಗ್ಗೆ ಗಮನಹರಿಸುತ್ತದೆ ಮತ್ತು ಸರ್ಕಾರಿ ಶಾಲೆಗಳು ಮುಚ್ಚುವುದನ್ನು ತಡೆಯಬಹುದಾಗಿದೆ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಅದ್ವೈತ ಶ್ರೀಕ್ಷೇತ್ರ ಶೃಂಗೇರಿ

ಭಾರತೀಯ ದರ್ಶನಗಳಲ್ಲಿ ರತ್ನ ಶಿಖರದಂತಿರುವುದು ಅದ್ವೈತ ದರ್ಶನ. ಜೀವಾತ್ಮನೇ ಇಲ್ಲ ಎಂಬ ಸಿದ್ಧಾಂತವನ್ನು ಹೇಳುವ ಚಾರ್ವಾಕದರ್ಶನ ಪ್ರಾರಂಭದ ಸ್ಥಿತಿ. ಶಾಶ್ವತ ಜೀವಾತ್ಮನ ಅಸ್ತಿತ್ವವನ್ನು ನಿರಾಕರಿಸುವ ಬೌದ್ಧದರ್ಶನ ಮೊದಲನೆಯ ಮೆಟ್ಟಿಲು. ಶಾಶ್ವತ ಆತ್ಮನುಂಟು, ಆದರೆ ಜಗತ್ಕರ್ತನಾದ ಪರಮಾತ್ಮನಿಲ್ಲ ಎಂದು ಪ್ರತಿಪಾದಿಸುವ ಜೈನ ಸಿದ್ಧಾಂತ ಮುಂದಿನ ಮೆಟ್ಟಿಲು. ಆತ್ಮನೂ ಉಂಟು, ಪರಮಾತ್ಮನೂ ಉಂಟು, ಆದರೆ ಅವರಿಬ್ಬರೂ ಭಿನ್ನ, ಅವರ ಪರಸ್ಪರ ಭೇದ ಶಾಶ್ವತ ಎಂದು ನಿರೂಪಿಸುವ ಹಲವಾರು ದರ್ಶನಗಳು ಮೇಲಿನ ಮೆಟ್ಟಿಲು. ಈ ಭೇದ ವ್ಯಾವಹಾರಿಕ ದಶೆಯಲ್ಲಿ ಮಾತ್ರ, ಪಾರಮಾರ್ಥಿಕವಾಗಿ ಜೀವಬ್ರಹ್ಮರ, ಎಂದರೆ ಆತ್ಮ–ಪರಮಾತ್ಮರ ಐಕ್ಯವೇ ಪರಮಸತ್ಯ ಎನ್ನುವುದು ಅದ್ವೈತ. ದ್ವಯೋರ್ಭಾವೋ ದ್ವಿತಾ. ದ್ವಿತ್ವೈವ ದ್ವೈತಮ್. ನ ದ್ವೈತಮ್ ಅದ್ವೈತಮ್. ಅದ್ವೈತ ಸಿದ್ಧಾಂತಕ್ಕೆ ಆಧಾರ ಉಪನಿಷತ್ತುಗಳಲ್ಲಿ ಘೋಷಿತವಾದ 'ಅಹಂ ಬ್ರಹ್ಮಾಸ್ಮಿ', 'ಅಯಮಾತ್ಮಾ ಬ್ರಹ್ಮ', 'ತತ್ತ್ವಮಸಿ' ಎಂಬ ಮಹಾವಾಕ್ಯಗಳು. ಉಪನಿಷತ್ತುಗಳೂ ಭಗವದ್ಗೀತೆಯೂ ಬ್ರಹ್ಮಸೂತ್ರಗಳೂ ವೇದಾಂತ ಶಾಸ್ತ್ರವೆಂದು ಪ್ರಸಿದ್ಧವಾಗಿರುವ ಉತ್ತರ ಮೀಮಾಂಸೆಗೆ ಆಧಾರ ಗ್ರಂಥಗಳು. ಈ ಗ್ರಂಥಗಳಿಗೆ ಭಾಷ್ಯಗಳನ್ನು ಬರೆದು ಅದ್ವೈತ ವೇದಾಂತ ಸೌಧವನ್ನು ನಿರ್ಮಿಸಿದವರು ಶ್ರೀಶಂಕರ ಭಗವತ್ಪಾದರು. ಇವರನ್ನೇ ಆದಿಶಂಕರಾಚಾರ್ಯರೆಂದು ಲೋಕವು ಪೂಜಿಸುತ್ತಿದೆ. ಇವರ ಅದ್ಭುತ ಮೇಧಾಶಕ್ತಿ ಮತ್ತು ಸಂಸ್ಕೃತ ಭಾಷಾಪ್ರಭುತ್ವ ವಿಸ್ಮಯಕ್ಕೆ ಕಾರಣವಾಗಿದೆ.



ಶೃಂಗೇರಿ: ಕೇವಲ ಮೂವತ್ತೆರಡು ವರ್ಷ ವಯಸ್ಸಿನಲ್ಲಿ ಅದ್ವೈತ ಸಿದ್ಧಾಂತದ ಮೂಲ ಗ್ರಂಥಗಳನ್ನು ರಚಿಸಿ, ಭಾರತದಲ್ಲೆಲ್ಲ ಕಾಲುನಡಿಗೆಯಿಂದ ಸಂಚರಿಸಿ, ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಪ್ರತಿಷ್ಠಾಪಿಸಿ ಅಲ್ಲಿ ತಮ್ಮ ನಾಲ್ವರು ಶಿಷ್ಯರನ್ನು ನೇಮಿಸಿ ಜ್ಞಾನಪ್ರಸಾರವು ಅವಿಚ್ಛಿನ್ನವಾಗಿರುವಂತೆ ಮಾಡಿದುದು ಆದಿಶಂಕರಾಚಾರ್ಯರ ಅದ್ಭುತ ಸಾಧನೆ. ದಕ್ಷಿಣಾಮ್ನಾಯಪೀಠವನ್ನು ಅವರು ಪವಿತ್ರತಮವಾದ ಶೃಂಗಗಿರಿಯಲ್ಲಿ ಪ್ರತಿಷ್ಠಾಪಿಸಿದರು. ಅದೇ ಶೃಂಗೇರಿ. ಈ ಪೀಠದಲ್ಲಿ ವಿರಾಜಮಾನರಾಗಿದ್ದವರು ಆದಿಶಂಕರಾಚಾರ್ಯರ ಸಾಕ್ಷಾತ್ ಶಿಷ್ಯರಾಗಿದ್ದ ಸುರೇಶ್ವರಾಚಾರ್ಯರು. ಅಲ್ಲಿಂದ ಅವಿಚ್ಛಿನ್ನವಾದ ಗುರುಪರಂಪರೆ ಸನಾತನ ಧರ್ಮವನ್ನು ಕಾಪಾಡುತ್ತಿದೆ. ಮತ್ತು ಬೆಳೆಸುತ್ತಿದೆ. ಗುರುಗಳ ಮಹಿಮೆಯಿಂದ ಶೃಂಗೇರಿ ಪ್ರಪಂಚದ ಭೂಪಟದಲ್ಲಿ ಅತ್ಯಂತ ಪಾವನ ಕ್ಷೇತ್ರವಾಗಿ ತನ್ನನ್ನು ಗುರುತಿಸಿಕೊಂಡಿದೆ. ಈ ಕ್ಷೇತ್ರದ ಸುಂದರ ಪರಿಚಯವನ್ನು ಮಾಡಿಕೊಡಲು ನಂ. ಶ್ರೀಕಂಠಕುಮಾರ್ ಬರೆದಿರುವ ಪುಟ್ಟ ಗ್ರಂಥವೇ ಅದ್ವೈತ ಶ್ರೀ ಕ್ಷೇತ್ರ ಶೃಂಗೇರಿ.

ನಂ. ಶ್ರೀಕಂಠಕುಮಾರ್ ಹಲವು ಪತ್ರಿಕೆಗಳಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಲೇಖನಗಳನ್ನು ಬರೆದು ಓದುಗರಿಗೆ ಸುಪರಿಚಿತರಾಗಿರುವ ಅವರು ಶ್ರೇಷ್ಠ ಲೇಖಕರು. ಇವರು ವಿಷಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ವಿಮರ್ಶಾಪೂರ್ವಕವಾಗಿ ಬರೆಯುತ್ತಾರೆ. ಅವರಿಗೆ ಧರ್ಮದಲ್ಲಿ, ಗುರುಗಳಲ್ಲಿ, ಪರಂಪರೆಯಲ್ಲಿ ಶ್ರದ್ಧೆಯಿದೆ. ಭಾರತ ದೇಶದ ಸಂಸ್ಕೃತಿಯಲ್ಲಿ ಹಬ್ಬಗಳ ಮಹತ್ತ್ವವನ್ನು ಅವರು ಅರಿತಿದ್ದಾರೆ. ಈ ಪುಸ್ತಕದಲ್ಲಿರುವ ದೀಪಾವಳೀ ಎಂಬ ಲೇಖನ ಇದಕ್ಕೆ ಸಾಕ್ಷಿ.

ಶೃಂಗೇರಿಯ ಗುರು ಪರಂಪರೆಗೆ ಸೇರಿದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ, ಶ್ರೀ ಚಂದ್ರಶೇಖರ ಭಾರತೀ, ಶ್ರೀ ಅಭಿನವ ವಿದ್ಯಾತೀರ್ಥ, ಶ್ರೀ ಭಾರತೀತೀರ್ಥ ಮತ್ತು ಶ್ರೀ ವಿಧುಶೇಖರ ಭಾರತೀ ಎಂಬ ಪರಮಪೂಜ್ಯ ಜಗದ್ಗುರುಗಳ ತಪಸ್ಸಿದ್ಧಿಗಳನ್ನೂ ವಿದ್ಯಾವೃದ್ಧಿಗಳನ್ನೂ ಲೇಖಕರು ಪ್ರತ್ಯೇಕ ಲೇಖನಗಳಲ್ಲಿ ವರ್ಣಿಸಿದ್ದಾರೆ. ಶೃಂಗೇರಿ ಇಂದಿಗೂ ವೇದವಿದ್ಯೆಯ ನೆಲೆವೀಡು. ಶಾಸ್ತ್ರ ವಿದ್ಯೆಯ ಗೂಡು. ಧರ್ಮ ಚಿಂತನೆಯ ನಾಡು. ಅಲ್ಲಿಯ ಸಂಸ್ಕೃತಿಯ ವಿಶೇಷಗಳನ್ನು ಶ್ರೀಕಂಠಕುಮಾರರ ಲೇಖನಗಳಲ್ಲಿ ಕಾಣಬಹುದು. ಅವರ ಲೇಖನದ ಸ್ವಾರಸ್ಯವನ್ನು ಅರಿತುಕೊಳ್ಳಲು ಒಂದು ಉದಾಹರಣೆ–

ಶ್ರೀ ವಿದ್ಯಾಶಂಕರ ದೇವಾಲಯ: ಹಸಿರುಡಿಗೆಯಿಂದ ಕಂಗೊಳಿಸುತ್ತ ನೀಲ ಆಗಸದೆಡೆಗೆ ತಲೆ ಚಾಚಿ ನಿಂತ ಗಿರಿ ಶಿಖರಗಳು. ಅವುಗಳ ನಡುವೆ ಮಂಜುಳ ನಿನಾದ ಮಾಡುತ್ತಾ ಹರಿದು ಬಂದು ಉತ್ತರಕ್ಕೆ ತಿರುಗುವ ಶುಭ್ರ ತಿಳಿ ನೀರಿನ ತುಂಗಾ ನದಿ. ನದಿಯ ಎಡದಂಡೆಯ ಎತ್ತರ ಪ್ರದೇಶದಲ್ಲಿ ಹೊಳೆಯುವ ಕಳಸವನ್ನುಳ್ಳ ಬಹುದೊಡ್ಡ ರಥದಂತಿರುವ ಶಿಲಾಮಯ ಶ್ರೀ ವಿದ್ಯಾಶಂಕರ ದೇವಾಲಯವನ್ನು ನೋಡಿದಾಗ ಆನಂದವಾಗುತ್ತದೆ. ಶ್ರೀ ಶಾರದಾ ಪೀಠದ 10ನೇ ಜಗದ್ಗುರುಗಳಾದ ಆಚಾರ್ಯ ಯೋಗಸಿದ್ಧರಾದ ಶ್ರೀ ಶ್ರೀ ವಿದ್ಯಾತೀರ್ಥರು ತಮ್ಮ ತಮ್ಮ ಅಂತಿಮದಲ್ಲಿ ನದೀ ತೀರದ ಗುಹೆಯನ್ನು ಪ್ರವೇಶಿಸಿ ಅಂಬಿಕಾಯೋಗದಲ್ಲಿ ನಿರತರಾದರು. ಅವರ ಸಮಾಧಿಯ ಮೇಲೆ ಅವರ ಶಿಷ್ಯರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು ಕ್ರಿ.ಶ. 1338ರಲ್ಲಿ ಶ್ರೀ ವಿದ್ಯಾಶಂಕರ ದೇವಾಲಯವನ್ನು ನಿರ್ಮಾಣ ಮಾಡಿಸಿದರು." (ಪು.4)

ಜಗನ್ಮಾತೆ ಶ್ರೀಲಲಿತಾಂಬಿಕೆ ಎಂಬ ಲೇಖನದಲ್ಲಿ ಶ್ರೀಕಂಠಕುಮಾರರು ಲಲಿತಾ ಸಹಸ್ರನಾಮ ಸ್ತೋತ್ರದ ವೈಶಿಷ್ಟ್ಯವನ್ನು ವಿವರಿಸಿದ್ದಾರೆ. ಬ್ರಹ್ಮಾಂಡ ಪುರಾಣದಲ್ಲಿ ಹಯಗ್ರೀವಾಗಸ್ತ್ಯ ಸಂವಾದದಲ್ಲಿ ಲಲಿತಾಸಹಸ್ರನಾಮ ಸ್ತೋತ್ರವಿದೆ. ಎಲ್ಲ ಸಹಸ್ರನಾಮ ಸ್ತೋತ್ರಗಳಲ್ಲಿ ಅತ್ಯಂತ ಕಾವ್ಯಗುಣಗಳಿಂದ ತುಂಬಿರುವುದು ಲಲಿತಾ ಸಹಸ್ರನಾಮ ಸ್ತೋತ್ರವೇ. ಇದು ಬರಿಯ ಸ್ತೋತ್ರವಲ್ಲ, ಶ್ರೇಷ್ಠ ಶಾಸ್ತ್ರವೂ ಆಗಿದೆ ಎಂದು ಲೇಖಕರು ನಿರೂಪಿಸಿದ್ದಾರೆ.

**ಶ್ರೀ ಮಾತಾ ಶ್ರೀ ಮಹಾರಾಜ್ಞೀ ಶ್ರೀಮತ್ಸಿಂಹಾಸನೇಶ್ವರೀ।
ಚಿದಗ್ನಿಕುಂಡಸಂಭೂತಾ ದೇವಕಾರ್ಯ ಸಮುದ್ಯತಾ॥**

ಎಂದು ಆರಂಭಗೊಳ್ಳುವ ಲಲಿತಾಸಹಸ್ರನಾಮ ಸ್ತೋತ್ರದ ಒಂದೊಂದು ನಾಮವೂ ಆಧ್ಯಾತ್ಮಿಕ ಅರ್ಥಗಳಿಂದ ತುಂಬಿದೆ. ಇದರಲ್ಲಿ ಶ್ರೀ ವಿದ್ಯೆಯ ರಹಸ್ಯಗಳೂ ಶ್ರೀ ಚಕ್ರಾರ್ಚನೆಯ ವಿಧಾನಗಳೂ ಇರುವುದನ್ನು ಶ್ರೀಕಂಠಕುಮಾರರು ತಿಳಿಸಿದ್ದಾರೆ.

ರುದ್ರಾಕ್ಷಿ, ಚಾತುರ್ಮಾಸ್ಯ, ಧನುರ್ಮಾಸ ಮುಂತಾದ ವಿಷಯಗಳಲ್ಲಿ ಅವರು ಸಾಮಯಿಕವಾಗಿ ಬರೆದ ಲೇಖನಗಳೂ ಈ ಪುಸ್ತಕದಲ್ಲಿವೆ. ಶಾಲಗ್ರಾಮ (ಅಥವಾ ಸಾಲಿಗ್ರಾಮ)ದ ಬಗೆಗೆ ಇಲ್ಲಿರುವ ಲೇಖನ ಒಳ್ಳೆಯ ವೈಜ್ಞಾನಿಕ ಮಾಹಿತಿಗಳನ್ನು ಒಳಗೊಂಡಿದೆ. "ಇದು ನೇಪಾಳ ರಾಷ್ಟ್ರದಿಂದ ಪವಿತ್ರ ಪರ್ವತ ಶ್ರೇಣಿಯಲ್ಲಿ ಹರಿದು ಬರುವ ಕಾಲಿಗಂಡಕೀ ನದಿಯಲ್ಲಿ ಮಾತ್ರ ಲಭ್ಯವಾಗುವ ಅಮೋನಿಯಾಯುಕ್ತ ಪ್ರಾಣಿ ಅವಶೇಷಗಳಿಂದ ಕೂಡಿದ ಶಿಲೆ. ಅಲ್ಲದೇ ಹಿಮವತ್ಪರ್ವತದಲ್ಲಿ ಮತ್ತು ಭೂಗರ್ಭಗಳಲ್ಲಿಯೂ ಸಹ ಅಪರೂಪವಾಗಿ ಶಾಲಗ್ರಾಮವು ಲಭ್ಯವಿದೆ." (ಪು. 74)

ಪ್ರಸ್ತುತ ಪುಸ್ತಕವನ್ನು ಪ್ರಾತಃಸ್ಮರಣೀಯ ಬಿ.ಎನ್.ವಿ.ಸುಬ್ರಹ್ಮಣ್ಯ ಅವರಿಗೆ ಅರ್ಪಿಸಲಾಗಿದೆ. ಇದನ್ನು ಪರಮಪೂಜ್ಯ ಜಗದ್ಗುರು ಶ್ರೀ ಶೃಂಗೇರಿ ಸನ್ನಿಧಾನ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳು ತಮ್ಮ ಅಮೃತ ಹಸ್ತ ಕಮಲಗಳಿಂದ ಲೋಕಾರ್ಪಿತವನ್ನಾಗಿ ಮಾಡಿರುವುದು ಪುಸ್ತಕಕ್ಕೆ ಪಾವನತ್ವವನ್ನು ತಂದಿದೆ. ಲೇಖಕ ಶ್ರೀ ನಂ.ಶ್ರೀಕಂಠಕುಮಾರ್ ಅವರು ಪುಸ್ತಕವನ್ನು ಸ್ವಯಂ ಪ್ರಕಟಿಸಿದ್ದಾರೆ. ಪುಸ್ತಕ ಪ್ರಕಟನೆಯ ಪ್ರತಿಯೊಂದು ಪದಾರ್ಥದ ಬೆಲೆ ಆಕಾಶವನ್ನು ಮುಟ್ಟಿರುವುದು ಎಲ್ಲರಿಗೂ ಗೊತ್ತು. ಆದರೂ ಅವರು ಪುಸ್ತಕಕ್ಕೆ ಹಣದ ಬೆಲೆಯನ್ನಿಟ್ಟಿಲ್ಲ. ವಿಶ್ವಾಸವೇ ಬೆಲೆ ಎಂದು ಮುದ್ರಿಸಿದ್ದಾರೆ. ಇಂತಹ ಔದಾರ್ಯ ಅನ್ಯತ್ರ ದುರ್ಲಭ. ಅವರಿಗೆ ಓದುಗರ ಪರವಾಗಿ ಕೃತಜ್ಞತೆಯನ್ನು ಮಾತ್ರ ನಾವು ಹೇಳಬಹುದು.

(ಸಂಸ್ಕೃತೋತ್ಸವ ಎಂಬ ಲೇಖನದಲ್ಲಿ ಒಂದು ತಪ್ಪು ಮಾಹಿತಿ ಇದೆ. "2021ರಲ್ಲಿ ಶ್ರೀ ವರದರಾಜ ಅಯ್ಯಂಗಾರ್‌ರವರು ನಿಧನಾನಂತರ ಪತ್ನಿ ಶ್ರೀಮತಿ ಜಯಲಕ್ಷ್ಮಿಯವರು ಆರ್ಥಿಕ ಸಂಕಷ್ಟದ ನಡುವೆಯೂ ಪತ್ರಿಕೆಯ ಪ್ರಸಾರವನ್ನು ಮುಂದುವರೆಸಿದ್ದು ಸಂತಸದ ವಿಷಯವಾದರೂ ಪತ್ರಿಕೆಯ ಪ್ರಸಾರಕ್ಕೆ ಸಂಸ್ಕೃತ ಪ್ರೇಮಿಗಳ ಸಹಕಾರವೂ ಅಗತ್ಯವಾಗಿದೆ." ಪು.84. ವರದರಾಜ ಅಯ್ಯಂಗಾರ್ 1990ರಲ್ಲೇ ನಿಧನ ಹೊಂದಿದರು. ಅವರ ಪುತ್ರ ಸಂಪತ್‌ಕುಮಾರ್ ಸುಧರ್ಮಾ ಪತ್ರಿಕೆಯನ್ನು ಮುಂದುವರಿಸಿ ನಡೆಸುತ್ತಿದ್ದು, 2021ರಲ್ಲಿ ನಿಧನ ಹೊಂದಿದರು. ಅವರ ಪತ್ನಿ ಶ್ರೀಮತಿ ಜಯಲಕ್ಷ್ಮಿ ಈ ಪತ್ರಿಕೆಯನ್ನು ಮುನ್ನಡೆಸುತ್ತಿದ್ದಾರೆ ಎಂಬುದು ಸರಿಯಾದ ಮಾಹಿತಿ).

ಆತ್ಮಕ್ಕೆ ಸಾವಿಲ್ಲವೆಂದ ಮೇಲೆ ಆತ್ಮಹತ್ಯೆ ಏಕೆ?



ಆತ್ಮಹತ್ಯೆ ಎಂಬುದೊಂದು ಯುವ ಜನಾಂಗದ ಅಧಃಪತನ. ಇಂದು ಹಳ್ಳಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಹದಿಹರೆಯದ ಹುಡುಗ–ಹುಡುಗಿಯರು ಹೆಚ್ಚಿನ ಸಂಖ್ಯೆಯಲ್ಲಿ ಹತಾಶ ಮನೋಭಾವದಿಂದಾಗಿ ಆತ್ಮಹತ್ಯೆ ಎಂಬ ಮಹಾಪಾಪದ ಪಿಡುಗಿಗೆ ಬಲಿಯಾಗುತ್ತಿದ್ದಾರೆ. ನಾನಾ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವುದಿದೆ.

ಚೆನ್ನಾಗಿ ಬಾಳಿ, ಬದುಕಿ ನಾಡಿನ ನಾಳಿನ ನೇತಾರರಾಗಬೇಕಾಗಿರುವ ಯುವ ಜನಾಂಗವು ಆತ್ಮಹತ್ಯೆಯಂತಹ ಘೋರ ಪಿಡುಗಿಗೆ ಬಲಿಯಾಗುವ ದುಸ್ಸಾಹಸಕ್ಕಿಳಿದಿದ್ದಾರೆ. ಆದ್ದರಿಂದ, ಇಂದು ಆತ್ಮಹತ್ಯೆಯಂತಹ ಘೋರ ಪಾಪದ ಬಗ್ಗೆ ವ್ಯಾಪಕ ಜನ ಜಾಗೃತಿಯ ಅವಶ್ಯಕತೆ ಇದೆ. ಇಂತಹ ದುಷ್ಕೃತ್ಯಕ್ಕೆ ಏಕೆ ಮುಂದಾಗುತ್ತಾರೆ ಎಂಬ ಬಗ್ಗೆ ಅಧ್ಯಯನದ ಅವಶ್ಯಕತೆಯಿದೆ. ಅವರಿಗೆ ದೊರೆಯಬೇಕಾದ ಸಹನೆ, ಸಹಾನುಭೂತಿಗಳು ಸಾಕಷ್ಟು ಪ್ರಮಾಣದಲ್ಲಿ ದೊರೆತಿವೆಯೇ ಇಲ್ಲವೇ, ದೊರೆಯುತ್ತಿದ್ದರೂ ಅರಿಯುತ್ತಿಲ್ಲವೇ ಎಂದು ಪರಿಶೀಲಿಸಬೇಕಾದ ಮಹಾಕಾರ್ಯ ತುರ್ತಾಗಿ ಆಗಬೇಕಿದೆ.

ಸಂಸಾರದಲ್ಲಿ ತಾಯಿ, ತಂದೆಯರು ಪರಿಶ್ರಮ ವಹಿಸುವುದು ತಮ್ಮ ಮಕ್ಕಳ ಸುಂದರ ಜೀವನವನ್ನು ರೂಪಿಸುವುದಕ್ಕಾಗಿ. ಅದಕ್ಕಾಗಿ ಅವರು ಪಡುವ ಪರಿಪಾಟಲು ಅವರಿಗಷ್ಟೇ ಪ್ರೀತಿ. ತಮ್ಮ ಕರುಳ ಕುಡಿಗಳ ವಿದ್ಯಾಭ್ಯಾಸಕ್ಕೆ, ಇನ್ನಿತರ ಅಗತ್ಯ–ಅನಗತ್ಯ ಬೇಡಿಕೆಗಳ ಪೂರೈಕೆಗೆ ಪೋಷಕರು ತಮ್ಮ ಜೀವನದ ಬಹುಪಾಲನ್ನು ಮೀಸಲಾಗಿಡುತ್ತಾರೆ.

ವಯಸ್ಸಿಗೆ ಬಂದಾಗ ಪೋಷಕರ ಬಗ್ಗೆ ದೂರುವ ಮಕ್ಕಳು ಅವರ ಪರಿಶ್ರಮದತ್ತ, ಕಷ್ಟ–ನಷ್ಟಗಳತ್ತ ಲಕ್ಷ್ಯ ಹರಿಸುತ್ತಿಲ್ಲ. ತಮ್ಮ ಭವಿಷ್ಯವನ್ನು ಹಸನಾಗಿಸಲು ತಂದೆ–ತಾಯಂದಿರು ಅವರ ಜೀವನವನ್ನೇ ಮುಡಿಪಾಗಿಸಿದ್ದಾರೆ ಎಂಬ ಅರಿವು ಅವರಿಗೆ ಮೂಡುತ್ತಿಲ್ಲ. ಮನೆಯ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ತಮ್ಮ ಬೇಡಿಕೆಗಳನ್ನು ಮುಂದೊಡ್ಡಬೇಕು ಎಂಬ ವಿವೇಚನೆ ಕಡಿಮೆ. ಪದೇ ಪದೆ ಜೊತೆಗಾರ ಸ್ನೇಹಿತರೊಡನೆ ಹಾಗೂ ಇತರರೊಡನೆ ಹೋಲಿಸಿಕೊಳ್ಳದೆ, 'ಹಾಸಿಗೆ ಇದ್ದಷ್ಟು ಕಾಲು ಚಾಚು'ವ ಬುದ್ಧಿಯಂತೂ ಮಾರು ದೂರ. ಇದರ ಬದಲು ಹಿರಿಯರೊಡನೆ, ಅವರ ಮಾರ್ಗದರ್ಶನದಂತೆ ತಾವು ಸಣ್ಣಪುಟ್ಟ ಕೆಲಸಗಳಲ್ಲಿ ಹಿರಿಯರಿಗೆ ಸಹಾಯ ಮಾಡಿದ್ದೇ ಆದರೆ ಅದೇ ನಾವು ಅವರಿಗೆ ಸಲ್ಲಿಸುವ ಗೌರವ, ಪ್ರೀತಿ.

ಓದುವ ಸಮಯದಲ್ಲಿ ವಿದ್ಯಾರ್ಥಿಗಳು ಓದುವ ಬಗ್ಗೆ ಹೆಚ್ಚು ಮಹತ್ವವನ್ನು ಕೊಡಬೇಕು. ಜೊತೆಗೆ ಯೋಗ್ಯ ಹಾಗೂ ಉಪಯುಕ್ತ ಹವ್ಯಾಸ, ಶಿಸ್ತುಗಳನ್ನು ರೂಢಿಸಿಕೊಳ್ಳಬೇಕು. ನಮ್ಮ ಜೀವನದಲ್ಲಿ ನಮಗೆ ಸಿಕ್ಕಿರುವ ಸಮಯವನ್ನು ಹಾಳು ಮಾಡದೆ, ಮತ್ತೆಂದೂ ದೊರೆಯದ ಸುವರ್ಣಾವಕಾಶವನ್ನು ಪ್ರೀತಿ–ಪ್ರೇಮ, ಮೋಜು, ಮಸ್ತಿ ಹೆಸರಿನಲ್ಲಿ ವ್ಯರ್ಥಗೊಳಿಸಬಾರದು.

ಸಾಮಾನ್ಯವಾಗಿ ಹಿರಿಯರು, ಹದಿಹರೆಯದವರ ಸಂಘರ್ಷಕ್ಕೆ ಕೆಲವು ಕಾರಣಗಳಿವು;

- ಹಿರಿಯರ ನಡವಳಿಕೆಯ ಮಟ್ಟ ಹದಿಹರೆಯದವರಿಗೆ 'ಅಜ್ಜ ಹಾಕಿದ ಆಲದ ಮರದಂತೆ ತೋರುತ್ತದೆ'.
- ಹಿರಿಯರ ಶಿಸ್ತಿನ ಮಟ್ಟ, ಜೀವನಶೈಲಿ ಬೇಸರ ಮೂಡಿಸುತ್ತದೆ.
- ಎಲ್ಲದಕ್ಕೂ ತಾನೊಬ್ಬನೇ ಬಲಿಪಶುವೆಂಬ, ಇಲ್ಲಸಲ್ಲದ ಭಾವನೆ, ಅಸಹನೆ.
- ಹಿರಿಯರು ತಮ್ಮ ಜೀವನದ ಅನುಭವವನ್ನು ಹೇಳುವುದು ಕಿರಿಯರಲ್ಲಿ ಕೆಲವೊಮ್ಮೆ ಕಿರಿಕಿರಿ ಉಂಟುಮಾಡಬಹುದು.

ನೆನಪಿರಲಿ, ಆತ್ಮಹತ್ಯೆ ಎಂಬ ಪಿಡುಗಿಗೆ ಬಲಿಯಾಗುತ್ತಿರುವ ಯುವ ಜನಾಂಗದ ವಿನಾಶಕ್ಕೆ ಕೆಲ ಸಂದರ್ಭಗಳಲ್ಲಿ ಮನೆಯ ದೊಡ್ಡವರೂ ಕಾರಣರಾಗಿರುತ್ತಾರೆ. ಅದಕ್ಕೆ ಕೆಲ ನಿಜ ಕಾರಣಗಳಿವು;

- ಪರೀಕ್ಷೆಯಲ್ಲಿ ಇಂತಿಷ್ಟೇ ಶೇಕಡಾವಾರು ಅಂಕಗಳನ್ನು ಗಳಿಸಬೇಕೆಂದು ಮಕ್ಕಳಿಗೆ ತೀವ್ರ ಒತ್ತಡ ಹೇರುವುದು.
- ಸಂಸಾರದ ಪ್ರತಿ ಮಕ್ಕಳು ಡಾಕ್ಟರೋ, ಇಂಜಿನಿಯರೋ ಆಗುವಂತೆ ಪದೇ ಪದೆ ಒತ್ತಡ ಹಾಕುವುದು.
- ಇತರ ಮಕ್ಕಳೊಡನೆ ತಮ್ಮ ಮಕ್ಕಳನ್ನು ಅನಗತ್ಯವಾಗಿ ಎಲ್ಲಾ ವಿಷಯಗಳಲ್ಲಿ ಆಗಾಗ್ಗೆ ಹೋಲಿಸುವುದು.
- ಮಕ್ಕಳ ಬೇಕು–ಬೇಡಗಳನ್ನು, ಆಸಕ್ತಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಗಿರುವುದು.

ಮಕ್ಕಳು ಸತ್ಪ್ರಜೆಗಳಾಗಿ ತಂದೆ–ತಾಯಿ, ಸಮಾಜ ಹಾಗೂ ದೇಶಸೇವೆ ಮಾಡಲು ನೂರಾರು ಕಾಯಕಗಳಿವೆ. ಸನ್ಮಾರ್ಗದಲ್ಲಿ ನಡೆಯುವ ಎಲ್ಲಾ ಕಾಯಕಗಳಿಗೂ ಗೌರವ ಇದ್ದೇ ಇರುತ್ತದೆ. ಇದನ್ನು ಹಿರಿಯರು ಮನಗಂಡು, ಕಿರಿಯರಿಗೂ ಅದನ್ನು ತಿಳಿಯಪಡಿಸಬೇಕು. ಅತಿಯಾದ ಮಾನಸಿಕ ಒತ್ತಡವಿಲ್ಲದೆ ಮಕ್ಕಳು ಪರೀಕ್ಷೆಯನ್ನು ಎದುರಿಸುವಂತೆ ಹುರಿದುಂಬಿಸಬೇಕು. ವ್ಯತಿರಿಕ್ತ ಫಲಿತಾಂಶಗಳು ಬಂದರೂ ಮಕ್ಕಳ ಮೇಲಿನ ಕಾಳಜಿ ಮೊದಲಿನಂತೆಯೇ ಇರುತ್ತದೆಯೆಂದು ಅರಿವು ಮೂಡಿಸಬೇಕು.

ಹಿರಿಯರು ಅಥವಾ ದೊಡ್ಡವರು ಮಕ್ಕಳನ್ನು ಹಿಯ್ಯಾಳಿಸಿದರೆ ಪ್ರಯೋಜನವಿಲ್ಲ. ಕೆಲಸಗಳನ್ನು ಹಾಗೂ ಪರಿಣಾಮಗಳನ್ನು ಪ್ರೀತಿಯಿಂದ ವಿವರಿಸಿದರೆ ಅವರೂ ಕೇಳಿಯಾರು. ಆದ್ದರಿಂದ ಪರೀಕ್ಷಾ ಫಲಿತಾಂಶಗಳಾಗಲೀ, ಪ್ರೇಮ ಪ್ರಸಂಗಗಳಾಗಲೀ ಮುಂತಾದ ಸಮಸ್ಯೆಗಳನ್ನು ಸಂಬಂಧಿಸಿದ ಎಲ್ಲರೂ ಸಂಯಮದಿಂದ ಬಗೆಹರಿಸಲು ಪ್ರಯತ್ನಿಸಬೇಕು. ಆಗ ನೂರಾರು ಆತ್ಮಹತ್ಯಾ ಪ್ರಕರಣಗಳು ಕಡಿಮೆಯಾದಾವು. ಹಿರಿಯ– ಕಿರಿಯ ಎಂಬ ಎರಡು ಕೈಗಳು ಸೇರಿದರೆ ಅರ್ಥಪೂರ್ಣವಾದ ಚಪ್ಪಾಳೆ. ಆಗಲೇ 'ಮಾನವ ಜನ್ಮ ದೊಡ್ಡದು, ಅದನ್ನು ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' ಎಂದು ದಾಸರು ಹಾಡಿರುವುದು ಸಾರ್ಥಕವಾಗುವುದು. ■



ಪ್ರಶಾಂತ್ ಕುಮಾರ್ ಎ.ಪಿ.
ಸಹಾಯಕ ಪ್ರಾಧ್ಯಾಪಕರು
ಮೊ: 9844859950

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವೀರ ಸಾವರ್ಕರ್ ಜಯಂತಿ ಆಚರಣೆ



ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಸಾವರ್ಕರ್ ಅವರ 144ನೇ ಜಯಂತಿಯನ್ನು ಮಂಗಳವಾರ ಆಚರಿಸಲಾಯಿತು.

ಮೈಸೂರು, ಮೇ 28–ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಸಾವರ್ಕರ್ ಅವರ 144ನೇ ಜಯಂತಿಯನ್ನು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಮಂಗಳವಾರ ವೀರ ಸಾವರ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಈ ವೇಳೆ ಶ್ರೀರಾಮಸೇನೆಯ ರಾಜ್ಯ ಕಾರ್ಯದರ್ಶಿ ಸಂಜಯ್ ಮಾತನಾಡಿ, ವೀರ ಸಾವರ್ಕರ್ ಅವರು ಎರಡು ಬಾರಿ ಅನುಭವಿಸಿದ ಕರಿನೀರ ಶಿಕ್ಷೆಯನ್ನು ಇಂದಿನ ಯುವಪೀಳಿಗೆ ನೆನೆಯಬೇಕಿದೆ. ಹಾಗೆ ಸ್ವಾತಂತ್ರ್ಯ ಹೋರಾಟಕ್ಕೆ ಕ್ರಾಂತಿಕಾರಿಗಳ ಕೊಡುಗೆ ಮರೆಯಬಾರದು ಎಂದು ಹೇಳಿದರು.

ಯುವ ಮುಖಂಡ ಮಧು ಸೋಮಶೇಖರ್ ಮಾತನಾಡಿ, ಇಂದಿನ ಯುವಕರು ಸ್ವಾತಂತ್ರ್ಯಕ್ಕೆ ಹೋರಾಡಿದವರ ಬಗ್ಗೆ ತಿಳಿಯಬೇಕು. ಅವರ ಪುಸ್ತಕಗಳನ್ನು ಖರೀದಿಸಿ ಓದಬೇಕು ಎಂದರು.

ವೀರ ಸಾವರ್ಕರ್ ಯುವ ಬಳಗದ ಸಂದೇಶ್ ಪವಾರ್, ಮಹೇಶ್ ರಾಜೇಅರಸ್, ವಿಕ್ರಂ ಅಯ್ಯಂಗಾರ್, ಮನೋಜ್, ಪ್ರಮೋದ್‌ಗೌಡ, ಅಭಿಷೇಕ್‌ಗೌಡ, ರವಿ, ಕಾರ್ತಿಕ್ ಸಿದ್ದೇಗೌಡ, ಚಂದನ್‌ಗೌಡ, ರಂಗರಾಜು ಇತರರು ಉಪಸ್ಥಿತರಿದ್ದರು.

ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರ ಪರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆಯ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರ ಪರ ನಿವೇದಿತಾನಗರದ ಅಕ್ಕಿ ಶಾಲೆಯಲ್ಲಿ ಪ್ರಚಾರ ನಡೆಸಲಾಯಿತು. ಈ ವೇಳೆ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಜೆಡಿಎಸ್ ಮುಖಂಡರಾದ ಸಿ.ಶೇಖರ್, ಈರೇಗೌಡ, ಸೋಮಶೇಖರ್, ವಿರೂಪಾಕ್ಷ, ಚೆಲುವರಾಜ್, ಗಂಗಾಧರ್, ಕುಮಾರ್, ನವೀನ್ ಇನ್ನಿತರರಿದ್ದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಗರ್ಭಿಣಿ, ಹೆರಿಗೆ ಆರೈಕೆ ಅಭಿಯಾನ

ಮೈಸೂರು, ಮೇ 28(ಜಿಎ)– ಜೆಎಸ್‌ಎಸ್ ಮಹಾ ವಿದ್ಯಾಪೀಠದ 70ನೇ ವರ್ಷಾಚರಣೆ ಹಾಗೂ ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಜೂ.30ರವರೆಗೆ ಗರ್ಭಿಣಿ ಮತ್ತು ಹೆರಿಗೆ ಆರೈಕೆ ಅಭಿಯಾನ ನಡೆಸಲಾಗುತ್ತಿದೆ ಎಂದು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಚಾರ್ಯ ಡಾ.ಎಚ್.ಬಸವನಗೌಡಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಭಿಯಾನದಲ್ಲಿ ಉಚಿತ ಸಾಮಾನ್ಯ ಹೆರಿಗೆ ಸೌಲಭ್ಯ ಹಾಗೂ ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆ ಮತ್ತು ಉಚಿತ ಪ್ರಯಾಣದ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಾಮಾನ್ಯ ಹೆರಿಗೆ ಮತ್ತು ಔಷಧಿಗಳು ಸಂಪೂರ್ಣ ಉಚಿತವಾಗಿರುತ್ತವೆ. ಅಲ್ಲದೆ, ಸಿಸೇರಿಯನ್‌ಗೆ ಶೇ.40ರಿಂದ 50ರಷ್ಟು ರಿಯಾಯಿತಿ ಇರಲಿದೆ. ಜನಿಸಿದ ಮಗು ಹೆಚ್ಚಿನ ಚಿಕಿತ್ಸೆಗೆ ದಾಖಲಾದರೆ ಚಿಕಿತ್ಸೆ ವೆಚ್ಚದಲ್ಲಿ ರಿಯಾಯಿತಿ ಹಾಗೂ ಆಸ್ಪತ್ರೆಯಿಂದ 50 ಕಿಮೀ ವ್ಯಾಪ್ತಿಯಲ್ಲಿ ಉಚಿತ ಪ್ರಯಾಣ ವ್ಯವಸ್ಥೆ ಇರಲಿದೆ. ಜೂ.30ರೊಳಗೆ ನೋಂದಣಿ ಆದವರಿಗೂ ಈ ಸೌಲಭ್ಯ ದೊರೆಯಲಿದೆ. ಸಾಮಾನ್ಯ ವಾರ್ಡ್‌ಗೆ ಮಾತ್ರ ಈ ಸೌಲಭ್ಯ ಇದ್ದು, ಹೆಚ್ಚಿನ ಮಾಹಿತಿಗೆ ದೂ. 82966 73241 ಅನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸಿ.ಪಿ.ಮಧು, ಡಾ.ಮಮತಾ, ಡಾ.ನವೀನ್ ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ 19 ಬೆಳೆಗಳಿಗೆ ವಿಮೆ

ಮೈಸೂರು, ಮೇ 28(ಜಿಎ)–2023–24ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ–ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯ ಸರ್ಕಾರದ ವತಿಯಿಂದ ಜಾರಿಗೊಳಿಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ 19 ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಬಹುದಾಗಿದೆ. ಎಳ್ಳು ಸೂರ್ಯಕಾಂತಿ, ಉದ್ದು, ಹೆಸರು, ಅಲಸಂದೆ (ನೋಂದಾಯಿಸಲು ಅಂತಿಮ ದಿನಾಂಕ ಜೂ.1), ನೆಲಗಡಲೆ, ಎಲೆಕೋಸು, ಆಲೂಗೆಡ್ಡೆ, ಟೊಮೆಟೋ, ಜೋಳ(ನೋಂದಾಯಿಸಲು ಅಂತಿಮ ದಿನಾಂಕ ಜೂ.15), ಹತ್ತಿ, ಮುಸುಕಿನ ಜೋಳ, ತೊಗರಿ, ಅರಿಶಿನ, ರಾಗಿ (ನೋಂದಾಯಿಸಲು ಅಂತಿಮ ದಿನಾಂಕ ಜೂ.31), ಭತ್ತ, ಉರುಳಿ (ನೋಂದಾಯಿಸಲು ಅಂತಿಮ ದಿನಾಂಕ ಜು.16) ಬೆಳೆಗಳಿಗೆ ವಿಮೆ ಮಾಡಿಸಬಹುದಾಗಿದ್ದು, ಜಿಲ್ಲೆಗೆ ಟಾಟಾ ಎ.ಐ.ಜಿ. ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ವಿಮಾ ಕಂಪನಿ ಆಯ್ಕೆಯಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತು ಸಕಾಲದಲ್ಲಿ ಬೆಳೆ ವಿಮೆಗೆ ನೋಂದಾಯಿಸಲು ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಬ್ಯಾಂಕ್ ಅಥವಾ ನಾಗರಿಕ ಸೇವಾ ಕೇಂದ್ರಗಳನ್ನು ಸಂಪರ್ಕಿಸಿ ಎಂದು ಮೈಸೂರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಡಿತ್ ಡಾ.ರಾಜೀವ್ ತಾರಾನಾಥ್ ಆರೋಗ್ಯ ವಿಚಾರಣೆ



ಅನಾರೋಗ್ಯ ನಿಮಿತ್ತ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಖ್ಯಾತ ಸರೋದ್ ವಾದಕ ಪಂಡಿತ್ ಡಾ.ರಾಜೀವ್ ತಾರಾನಾಥ್ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಹಾಗೂ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಭೇಟಿಯಾಗಿ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಶುಭ ಹಾರೈಸಿದರು.

ಇಂದು ನೇರ ಫೋನ್–ಇನ್ ಕಾರ್ಯಕ್ರಮ

ಮೈಸೂರು, ಮೇ 28–2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದ ಒಂದು ವಿಶ್ಲೇಷಣೆ ಮತ್ತು ಶಾಲಾ ಪುನರ್ ಆರಂಭದ ರೂಪುರೇಷೆಗಳ ಕುರಿತ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ನಾಳೆ (ಮೇ 29) ಬೆಳಗ್ಗೆ 11:30ರಿಂದ 12:30 ರವರೆಗೆ ಆಯೋಜಿಸಿದ್ದು, ಮೈಸೂರು ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ (ಆಡಳಿತ), ಉಪನಿರ್ದೇಶಕ ಹೆಚ್.ಕೆ.ಪಾಂಡು ಭಾಗವಹಿಸಲಿದ್ದಾರೆ.



ಹೆಚ್.ಕೆ.ಪಾಂಡು

ಸಾರ್ವಜನಿಕರು 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಮೈಸೂರಿನ ಸ್ಥಾನಮಾನದ ವಿಶ್ಲೇಷಣೆ ಮತ್ತು ಸರ್ಕಾರಿ ಶಾಲೆಗಳ ಶಿಕ್ಷಣದ ಅಭಿವೃದ್ಧಿಗಾಗಿ ಈ ಶೈಕ್ಷಣಿಕ ವರ್ಷದಲ್ಲಿ ಇಲಾಖೆ ಕೈಗೊಂಡಿರುವ ವಿಶೇಷ ಯೋಜನೆಗಳ ಕುರಿತಂತೆ ಯಾವುದೇ ಪ್ರಶ್ನೆಗಳು ಅಥವಾ ಸಲಹೆಗಳು ಇದ್ದಲ್ಲಿ ಕರೆ ಮಾಡಿ ನೇರವಾಗಿ ಉಪ ನಿರ್ದೇಶಕರೊಂದಿಗೆ ಮಾತನಾಡಬಹುದು. ಕರೆ ಮಾಡಬೇಕಾದ ದೂ.ಸಂಖ್ಯೆ: 8296725912 / 0821–2546563. ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಾದರೂ ಆಲಿಸಬಹುದು.

ಮೈಸೂರು ಜಿಲ್ಲೆಯಲ್ಲಿ ಜನರ ಮನೆ ಬಾಗಿಲಿಗೆ ತಲುಪಿದ ಕಂದಾಯ ಸೇವೆಗಳು

ಗ್ರಾಮೀಣ ಜನತೆ ನೆಮ್ಮದಿ ನಿಟ್ಟುಸಿರು

ಮೈಸೂರು, ಮೇ 28–ಮೈಸೂರು ಜಿಲ್ಲಾಡಳಿತದ ವತಿಯಿಂದ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಮೇ 13 ರಿಂದ 27ರವರೆಗೆ 15 ದಿನಗಳ ಕಾಲ ಕಂದಾಯ ಇಲಾಖೆಯ ವಿವಿಧ ಅವಶ್ಯಕ ಸೇವೆಗಳನ್ನು ತ್ವರಿತಗತಿಯಲ್ಲಿ ತಲುಪಿಸಲು ಕಂದಾಯ ಸೇವೆಗಳ ವಿಶೇಷ ಆಂದೋಲನ ಆಯೋಜಿಸಲಾಗಿತ್ತು.

ಜಿಲ್ಲೆಯ ವ್ಯಾಪ್ತಿಯಲ್ಲಿನ 9 ತಾಲೂಕುಗಳಲ್ಲಿ ಸದರಿ ಆಂದೋಲನವು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ರೈತರಿಗೆ ಮತ್ತು ಸಾರ್ವಜನಿಕರಿಗೆ ಸಾಕಷ್ಟು ರೀತಿಯಲ್ಲಿ ಇದರಿಂದ ಅನುಕೂಲವಾಗಿದೆ. ಈ ಅಂದೋಲನದಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಬಾಕಿ ಪ್ರಕರಣಗಳ ವಿಲೇವಾರಿ ಆಗಿದ್ದು ಕಡಿಮೆ ಅವಧಿಯಲ್ಲಿ ರೈತರ ಮನೆ ಬಾಗಿಲಿಗೆ ಅಧಿಕಾರಿಗಳೇ ತೆರಳಿ ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಪ್ರಕರಣಗಳ ವಿಲೇವಾರಿ ಮಾಡಿ ಪ್ರಗತಿ ತೋರಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಆರ್‌ಟಿಸಿ–ಆಧಾರ್ ಸೀಡಿಂಗ್ 2,20,529, ಲ್ಯಾಂಡ್ ಬೀಟ್ 7,933, ಫ್ರೂಟ್ಸ್ ಐಡಿ 6,528, ಬರ ಪರಿಹಾರ 3,337, ಬಗರ್ ಹುಕುಂ 1,897 ಇವುಗಳ ಜೊತೆಗೆ ಕಂದಾಯ ಗ್ರಾಮಗಳ ರಚನೆ, ಪೌತಿ ಖಾತೆ ಅರ್ಜಿ ಸ್ವೀಕಾರ, ಸಕಾಲ ಅರ್ಜಿಗಳ ವಿಲೇವಾರಿ, ಅಭಿಲೇಖಾಲಯ ದಾಖಲೆಗಳ ಗಣಕೀಕರಣ ಮುಂತಾದ ಹಲವಾರು ಸೇವೆಗಳನ್ನು ಕಲ್ಪಿಸಲಾಗಿದೆ.

ಈ ಸೇವೆಗಳ ಜೊತೆಗೆ ಕಂದಾಯ ಗ್ರಾಮಗಳ ರಚನೆ, ಪೌತಿ ಖಾತೆ ಅರ್ಜಿ ಸ್ವೀಕಾರ, ಸಕಾಲ ಅರ್ಜಿಗಳ ವಿಲೇವಾರಿ, ಅಭಿಲೇಖಾಲಯ ದಾಖಲೆಗಳ ಗಣಕೀಕರಣ ಮುಂತಾದ ಹಲವಾರು ಸೇವೆಗಳನ್ನು ಸಹ ಕೈಗೊಳ್ಳಲಾಗಿದೆ. ಲೋಕಸಭಾ ಸಾರ್ವತ್ರಿಕ ಚುನಾವಣೆಯ ಬಿಡುವಿಲ್ಲದ ಸಮಯದಲ್ಲಿಯೂ ಯಾವುದೇ ರೀತಿ ವಿಳಂಬ ಮಾಡದೇ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಸದರಿ ಆಂದೋಲನವನ್ನು ಮೈಸೂರು ಜಿಲ್ಲೆಯಲ್ಲಿ ವಿಶೇಷವಾಗಿ ಆಯೋಜಿಸಲಾಗಿದ್ದು, ವಿವಿಧ ಸೇವೆಗಳಲ್ಲಿ ಜಿಲ್ಲೆಯ ಸಾರ್ವಜನಿಕರಿಗೆ ತ್ವರಿತಗತಿಯಲ್ಲಿ ಸೇವೆ ಲಭ್ಯವಾಗಿದೆ. ಇನ್ನು ಮುಂದೆಯೂ ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಸಮರ್ಪಕವಾಗಿ ಕಾರ್ಯ ತತ್ಪರವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಿಐಐಎಲ್‌ನಲ್ಲಿ 'ಭಾಷಿಕ ಕ್ಷೇತ್ರವಾಗಿ ಭಾರತ' ಪೋರ್ಟಲ್ ಲೋಕಾರ್ಪಣೆ



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (CIIL)ದಲ್ಲಿ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, 'ಭಾಷಿಕ ಕ್ಷೇತ್ರವಾಗಿ ಭಾರತ' ವೆಬ್ ಪೋರ್ಟಲ್ ಅನ್ನು ಲೋಕಾರ್ಪಣೆ ಮಾಡಿದರು.

ಮೈಸೂರು, ಮೇ 28(ಆರ್‌ಕೆ)– ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನ (CIIL)ದಲ್ಲಿ ಮಂಗಳವಾರ 'ಭಾರತೀಯ ಭಾಷೆಗಳು ಮತ್ತು ಒಂದು ಭಾಷಿಕ ಪ್ರದೇಶವಾಗಿ ಭಾರತ' ವಿಷಯ ಕುರಿತ ಸಮ್ಮೇಳನ ನಡೆಯಿತು.

ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮ್ಮೇಳನವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಅದೇ ವೇಳೆ 'ಭಾಷಿಕ ಕ್ಷೇತ್ರವಾಗಿ ಭಾರತ' ವೆಬ್ ಪೋರ್ಟಲ್ ಅನ್ನೂ ಲೋಕಾರ್ಪಣೆ ಮಾಡಿದರು.

ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಭಾಷಾ ತಜ್ಞರನ್ನುದ್ದೇಶಿಸಿ ಮಾತನಾಡಿದ ಅವರು, ಹಿಂದಿನಿಂದಲೂ ಭಾರತ ಬಹುಭಾಷೆಗಳನ್ನೊಳಗೊಂಡ ದೇಶವಾಗಿದ್ದು, ಯಾರು ಯಾವುದೇ ಭಾಷೆಯನ್ನೂ ರಾಷ್ಟ್ರದ ಯಾವುದೇ ಭಾಗದಲ್ಲಾದರೂ ಮಾತನಾಡುವ ಅವಕಾಶವಿದೆ ಎಂದರು.

> ಹಲವು ಪದಗಳನ್ನು ಬೇರೆ ಭಾಷೆಗಳಲ್ಲಿ ಯಾವ ರೀತಿ ಉಚ್ಚಾರಣೆ ಮಾಡಲಾಗುತ್ತದೆ ಎಂಬುದನ್ನು ವೆಬ್ ಪೋರ್ಟಲ್‌ನಲ್ಲಿ ಕಾಣಬಹುದಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪದಗಳನ್ನು ಹಂತ ಹಂತವಾಗಿ ಸೇರಿಸಲಾಗುವುದು. **–ಪ್ರೊ.ಶೈಲೇಂದ್ರ ಮೋಹನ್**

ಭಾರತೀಯ ಭಾಷೆಗಳನ್ನು ಬೆಸೆಯುವ ಉದ್ದೇಶದಿಂದಲೇ ವೆಬ್ ಪೋರ್ಟಲ್ (Parivar.ciil.org) ಅನ್ನು ಸಿದ್ಧಪಡಿಸಲಾಗಿದೆ. ಮೂರು ವರ್ಷಗಳ ಹಿಂದೆ ಅಭಿವೃದ್ಧಿಪಡಿಸಲಾರಂಭಿಸಿದ ಈ ಪೋರ್ಟಲ್ ಈಗ ಲೋಕಾರ್ಪಣೆಗೊಂಡಿದ್ದು, ಇದರಲ್ಲಿ ಎಲ್ಲಾ ಭಾಷೆಗಳ ಸಂಕ್ಷಿಪ್ತ ಇತಿಹಾಸ, ಹಿನ್ನೆಲೆಯ ಮಾಹಿತಿಯನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದ ಪ್ರೊ.ಪ್ರಮೋದ್ ಪಾಂಡೆ 'India as One Linguistic Area: Sociolinguistic and Linguistic Issues' ಕುರಿತು, ಪ್ರೊ. ಚಂದ್ರಭೂಷಣ್ ಶರ್ಮಾ 'ಭಾರತ ಒಂದು ಸಾಂಸ್ಕೃತಿಕ ಪ್ರದೇಶ' ಕುರಿತು, ಪ್ರೊ. ಮೊಹಮದ್ ಜಹಂಗೀರ್ ವಾರ್ಸಿ ಮತ್ತು ಪ್ರೊ. ಜ್ಞಾನೇಶ್ವರ ಚೌಬೆ ಭಾಷಾ ವೈವಿಧ್ಯತೆ ಕುರಿತಂತೆ ವಿಷಯ ಮಂಡನೆ ಮಾಡಿದರು.

ಜೂ.2ರಂದು ಮೈಸೂರಲ್ಲಿ ಪೌರಾಣಿಕ ಯಕ್ಷೋತ್ಸವ

ಮೈಸೂರು, ಮೇ 28(ಆರ್‌ಕೆ)–ಯಕ್ಷ ರಾಘವ ಬನ್ನಾಲೆ ಪ್ರತಿಷ್ಠಾನ ಹಾಗೂ ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಕಲಾವಿದರ ಸಂಯುಕ್ತಾಶ್ರಯದಲ್ಲಿ ಜೂ. 2ರಂದು ಮಧ್ಯಾಹ್ನ 2.30 ಗಂಟೆಗೆ ಮೈಸೂರಿನ ಕಲಾಮಂದಿರದಲ್ಲಿ 'ಕವಿರತ್ನ ಕಾಳಿದಾಸ' ಮತ್ತು 'ವೀರ ಭರ್ಬರೀಕ' ಪೌರಾಣಿಕ ಯಕ್ಷೋತ್ಸವವನ್ನು ಆಯೋಜಿಸಲಾಗಿದೆ.

ರಾಘವೇಂದ್ರ ಆಚಾರ್ಯ, ರಾಮಕೃಷ್ಣ ಹೆಗಡೆ, ಪರಮೇಶ್ವರ ಭಂಡಾರಿ, ಸುನಿಲ್ ಭಂಡಾರಿ, ಶಿವಾನಂದ ಕೋಟ, ಸುಜನ್ ಹಾಲಾಡಿ ಅವರ ಹಿಮ್ಮೇಳ, ಸುಬ್ರಹ್ಮಣ್ಯ, ಉದಯ, ಕಾರ್ತಿಕ, ವಿನಯ್, ಕಾರ್ತಿಕ್ ಕಣ್ಣೆ, ನಿರಂಜನ, ಪ್ರಣವ್ ಭಟ್ ಅವರ ಮುಮ್ಮೇಳದಲ್ಲಿ ಪ್ರದರ್ಶನಗೊಳ್ಳುವ ಯಕ್ಷಗಾನದಲ್ಲಿ ಸುಬ್ರಮಣ್ಯ ಯಲಗುಪ್ಪ, ಸುಧೀರ್ ಉಪ್ಪೂರು, ಸಂತೋಷ್ ಕುಲಾಲ್ ಅವರು ಸ್ತ್ರೀ ವೇಷದಲ್ಲಿ ಹಾಗೂ ರವೀಂದ್ರ ದೇವಾಡಿಗ, ಪುರಂದರ ಮೂಡ್ಕಣಿ ಅವರು ಹಾಸ್ಯ ಪಾತ್ರ ನಿರ್ವಹಿಸುವರು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮುಖಂಡರಿಂದ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮೈಸೂರಿನ ಬೇಡನ್ ಪೊವೆಲ್ ಸ್ಕೂಲ್‌ನಲ್ಲಿ ಕಾಂಗ್ರೆಸ್ ಮುಖಂಡರು ಮತಯಾಚಿಸಿದರು. ಈ ವೇಳೆ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ಮಂಚೇಗೌಡನಕೊಪ್ಪಲು ರವಿ, ಶಾಲೆಯ ಸದಸ್ಯೆ ಶ್ರೀಮತಿ ಪುಷ್ಪವಲ್ಲಿ, ಕಾರ್ಯದರ್ಶಿ, ಪಾಲಿಕೆ ಮಾಜಿ ಸದಸ್ಯ ಜಮಿಲ್, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಮಾದೇಶ್, ಪಡುವಾರಹಳ್ಳಿ ವಾರ್ಡ್ ಅಧ್ಯಕ್ಷ ಕುಮಾರ, ಬಿಎಂಎಲ್ ಜಗದೀಶ್ ಹಾಗೂ ಶಾಲಾ ಶಿಕ್ಷಕರು ಇದ್ದರು.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಮೇ 28(ಜಿಎ)– ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.85 ಕ್ಕಿಂತ ಹೆಚ್ಚಿನ ಅಂಕ ಪಡೆದ ವಿಶ್ವಕರ್ಮ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಅಲ್ಲದೆ, ಅದಕ್ಕಿಂತಲೂ ಕಡಿಮೆ ಅಂಕ ಪಡೆದವರಿಗೂ ಶಿಕ್ಷಣ ಪ್ರೋತ್ಸಾಹಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವೇದಿಕೆ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಮೈಸೂರು ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಅರ್ಹರು ಜೂ. 30ರ ಮುನ್ನ ವೇದಿಕೆಯ ಕಚೇರಿಗೆ ಅಂಚೆ ವಿಳಾಸ ಪೊಲೀಸ್ ಲೇಔಟ್ 2ನೇ ಹಂತ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ, 80 ಅಡಿ ಮುಖ್ಯ ರಸ್ತೆ ಸಂಖ್ಯೆ 512ರ ವಿಳಾಸಕ್ಕೆ ಅಗತ್ಯ ದಾಖಲಾತಿಗಳೊಡನೆ ಹಾಗೂ ಮೊಬೈಲ್ ನಂಬರ್ ಸಹಿತ ಅರ್ಜಿ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ ದೂ. 99026 58188 ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟಿ.ಎಸ್.ಸಿದ್ದರಾಜು, ಶ್ರೀಲಕ್ಷ್ಮಿ, ಸಿದ್ದೇಶ್, ಮಹಾಂತೇಶ್, ಮಂಜು, ಮಾವಳ್ಳಿ ಲೋಕೇಶ್ ಉಪಸ್ಥಿತರಿದ್ದರು.

ದತ್ತಸೇನೆ, ವಿಪ್ರ ವಕೀಲರ ಪರಿಷತ್ ವತಿಯಿಂದ ಶೋಭಾಯಾತ್ರೆ; ನ್ಯಾಯಾಲಯದಲ್ಲಿ ಲಡ್ಡು ವಿತರಣೆ



ಮೈಸೂರು, ಮೇ 28–ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 82ನೇ ವರ್ಧಂತ್ಯುತ್ಸವದ ಅಂಗವಾಗಿ ಮೈಸೂರಿನ ದತ್ತಸೇನೆ ಮತ್ತು ವಿಪ್ರ ವಕೀಲರ ಪರಿಷತ್ ವತಿಯಿಂದ ಚಾಮುಂಡಿಪುರಂ ವೃತ್ತದಿಂದ ಆಶ್ರಮದವರೆಗೆ ಶೋಭಾಯಾತ್ರೆಯನ್ನು ಆಯೋಜಿಸಲಾಗಿತ್ತು.

ಮೆರವಣಿಗೆಯಲ್ಲಿ ಮೇಲುಕೋಟೆ ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಂ.ಎನ್.ನವೀನ್ ಕುಮಾರ್, ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಹೆಚ್.ವಿ.ಭಾಸ್ಕರ್, ಸಹಕಾರಿ ಧುರೀಣ ಹೆಚ್.ವಿ.ರಾಜೀವ್, ದತ್ತಸೇನೆ ಅಧ್ಯಕ್ಷ ಆರ್.ಎಸ್.ಸತ್ಯನಾರಾಯಣ, ಎಂ.ಡಿ.ಪಾರ್ಥಸಾರಥಿ, ವಿನಯ್ ಕುಮಾರ್ (ದತ್ತಸೇನೆ) ಹಾಗೂ ಇತರರು ಭಾಗವಹಿಸಿದ್ದರು. ಇದೇ ವೇಳೆ ಮೈಸೂರು ನ್ಯಾಯಾಲಯದಲ್ಲಿ ವಕೀಲರು, ನೋಟರಿ ಹಾಗೂ ನ್ಯಾಯಾಧೀಶರಿಗೆ ಲಡ್ಡುವನ್ನು ಉಚಿತವಾಗಿ ಪ್ರಸಾದದ ರೂಪದಲ್ಲಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ದತ್ತಸೇನೆ ಅಧ್ಯಕ್ಷ ಆರ್.ಎಸ್.ಸತ್ಯನಾರಾಯಣ, ವಿಪ್ರ ವಕೀಲ ಪರಿಷತ್ ಅಧ್ಯಕ್ಷ ರವೀಂದ್ರ, ಜಯನಗರ ಶ್ರೀರಾಮಮಂದಿರದ ಸಮಿತಿ ಸದಸ್ಯ ಮುರಳಿ, ವಕೀಲ ಬಾಲು, ಹೊಯ್ಸಳ ಸಂಘದ ಸುಂದರಮೂರ್ತಿ, ಟಿ.ರಮೇಶ್, ವಿನಯ್ ಬಾಬು ಮತ್ತಿತರಿದ್ದರು.

19 ವರ್ಷಗಳಿಂದ ಪಿತ್ತಕೋಶದಲ್ಲಿದ್ದ ಸ್ಟಂಟ್ ಯಶಸ್ವಿಯಾಗಿ ಹೊರಕ್ಕೆ

ಮೈಸೂರು, ಮೇ 28(ಜಿಎ)–ಮೈಸೂರಿನ ಎನ್‌ಜೆ ಆಸ್ಪತ್ರೆಯಲ್ಲಿ ತಮಿಳುನಾಡು ಮೂಲದ ಮಹಿಳೆಯೊಬ್ಬರಿಗೆ ತುರ್ತು ಎಂಡೋಸ್ಕೋಪಿಕ್ ರೆಟ್ರೊಗ್ರೇಡ್ ಕೊಲಾಂಜಿಯೋಪಾಂಕ್ರಿಯಾಟಿಕೋಗ್ರಾಫಿ ಮೂಲಕ ಪಿತ್ತಕೋಶದಲ್ಲಿದ್ದ ಸ್ಟಂಟ್ ತೆಗೆಯುವಲ್ಲಿ ಆಸ್ಪತ್ರೆಯ ವೈದ್ಯರ ತಂಡ ಯಶಸ್ವಿಯಾಗಿದೆ ಎಂದು ಉದರ ಸಂಬಂಧಿ ರೋಗ ತಜ್ಞರಾದ ಡಾ. ಸುದೀಶ್ ದುರ್ಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಗೆ ಸುಮಾರು 18–19 ವರ್ಷ ಹಿಂದೆ ಪಿತ್ತಕೋಶ ತೆಗೆಯುವ ಶಸ್ತ್ರಚಿಕಿತ್ಸೆ ನೆರವೇರಿಸಿದಾಗ ತಾತ್ಕಾಲಿಕವಾಗಿ ಪಿತ್ತರಸದ ಸ್ಟಂಟ್ ಅಳವಡಿಸಲಾಗಿತ್ತು. ಆ ವಿಷಯವನ್ನು ಮಹಿಳೆಗೆ ಯಾರೂ ತಿಳಿಸಿರಲಿಲ್ಲ. ಹೀಗಾಗಿ ಇದರ ಅರಿವು ಅವರಿಗೆ ಬಾರದೇ ಇಷ್ಟೂ ವರ್ಷ ಅದನ್ನು ತೆಗೆಸದೇ ಇದ್ದ ಕಾರಣ ಸಿಸ್ಟ್ ಹಾಗೂ ಇನ್ನಿತರ ಉದರ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದರು ಎಂದರು.

ಎಲ್ಲೇ ಚಿಕಿತ್ಸೆ ಪಡೆದರೂ ಗುಣವಾಗದ ಸಮಸ್ಯೆ ಎದುರಿಸುತ್ತಿದ್ದರು. ಆದರೆ ತಮ್ಮ ಆಸ್ಪತ್ರೆಗೆ ಬಂದಾಗ ಕೂಲಂಕಷವಾಗಿ ಪರಿಶೀಲಿಸಿದ ಬಳಿಕ ಸ್ಟಂಟ್ ಹಾಗೇ ಉಳಿದಿರುವುದು ಹಾಗೂ ಆಕೆ ಸಿಸ್ಟ್ ಸಮಸ್ಯೆಯಿಂದ ಬಳಲುತ್ತಿರುವುದು ಪತ್ತೆ ಹಚ್ಚಲಾಯಿತು. ನಂತರ ಯಶಸ್ವಿಯಾಗಿ ಸ್ಟಂಟ್ ಹೊರ ತೆಗೆದುಹಾಕಿ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಸತೀಶ್, ಡಾ.ಮಮತಾ, ಆಸ್ಪತ್ರೆ ನಿರ್ದೇಶಕ ಡಾ. ದುರ್ಗೇಶ್ ಉಪಸ್ಥಿತರಿದ್ದರು.

ರಾಷ್ಟ್ರ ಸೇವಿಕಾ ಸಮಿತಿಯಿಂದ ಹೆಣ್ಣು ಮಕ್ಕಳಲ್ಲಿ ಸ್ವ–ಸಂರಕ್ಷಣಾ ಕ್ಷಮತೆ ಬೆಳೆಸುವ ಸ್ತುತ್ಯಾರ್ಹ ಕಾರ್ಯ

ಮೈಸೂರು, ಮೇ 28–ರಾಷ್ಟ್ರ ಸೇವಿಕಾ ಸಮಿತಿ, ಹೊಯ್ಸಳ ಪ್ರಾಂತದ ವತಿಯಿಂದ ಹೆಣ್ಣು ಮಕ್ಕಳಿಗಾಗಿ 15 ದಿನಗಳು ಆಯೋಜಿಸಲಾಗಿದ್ದ ವಿಶೇಷ ವರ್ಗ, ಪ್ರವೇಶ, ಹಾಗೂ ಪ್ರಬೋಧ ಶಿಕ್ಷಾ ವರ್ಗ ಮೈಸೂರಿನ ಶ್ರೀನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು.



ಅಖಿಲ ಭಾರತ ಮಹಿಳಾ ಸಂಘಟನೆಯಾದ ರಾಷ್ಟ್ರ ಸೇವಿಕಾ ಸಮಿತಿಯು ವಿಶ್ವದ ಬೃಹತ್ ಸಂಘಟನೆಯಾಗಿದೆ. ವಂದನೀಯ ಲಕ್ಷ್ಮೀಬಾಯಿ ಕೇಳ್ಕರ್ (ವಂ. ಮೌಶಿಜೀ) ಹಿಂದೂ ಮಹಿಳೆಯರನ್ನು ಸಂಘಟಿಸಿ ಅವರನ್ನು ಸಶಕ್ತಗೊಳಿಸಿ ತನ್ಮೂಲಕ ಭಾರತವನ್ನು ತೇಜಸ್ವಿ ರಾಷ್ಟ್ರವನ್ನಾಗಿ ಮಾಡುವ ಧ್ಯೇಯದಿಂದ ರಾಷ್ಟ್ರ ಸೇವಿಕಾ ಸಮಿತಿಯನ್ನು 1936ರ ವಿಜಯದಶಮಿಯಂದು ಮಹಾರಾಷ್ಟ್ರದ ನಾಗಪುರದ ಬಳಿಯ ವಾರ್ಧಾದಲ್ಲಿ ಪ್ರಾರಂಭಿಸಿದರು.

ಹೆಣ್ಣು ಮಕ್ಕಳಲ್ಲಿ ಸ್ವಸಂರಕ್ಷಣಾ ಕ್ಷಮತೆಯನ್ನು ಬೆಳೆಸುವುದರ ಜೊತೆಗೆ, ಶಾರೀರಿಕ ದೃಢತೆ, ಮಾನಸಿಕ ಬಲ, ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುವುದು, ಕೌಟುಂಬಿಕ ಜವಾಬ್ದಾರಿಯ ಜೊತೆಗೆ ರಾಷ್ಟ್ರೀಯ ಜವಾಬ್ದಾರಿಗಳ ಕುರಿತು ಮಹಿಳೆಯರು ಜಾಗೃತರಾಗಿರುವಂತೆ ಮಾಡುವುದು ಸಮಿತಿಯ ಮುಖ್ಯ ಉದ್ದೇಶವಾಗಿದೆ. ಈ ಎಲ್ಲಾ ಕಾರ್ಯಗಳಿಗೆ ಕಾರ್ಯಕರ್ತೆಯರನ್ನು ನಿರ್ಮಾಣ ಮಾಡಲು ಸಮಿತಿಯು ಪ್ರಾರಂಭಿಕ, ಪ್ರವೇಶ, ಪ್ರಬೋಧ, ಪ್ರವೀಣ ಎಂಬ ನಾಲ್ಕು ಹಂತದ ಶಿಕ್ಷಣಕ್ಕೆ ಆದ್ಯತೆ ನೀಡುತ್ತದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಾಂಶುಪಾಲರಾದ ಶ್ರೀಮತಿ ಅನಿತಾ ಮಾತನಾಡುತ್ತಾ, ಸಮಿತಿಯ ವರ್ಗಗಳು ಶಿಸ್ತುಬದ್ಧವಾಗಿ ನಡೆಯುತ್ತಿರುವುದು ತುಂಬಾ ಸಂತೋಷದಾಯಕ, ಶಿಕ್ಷಾರ್ಥಿಗಳು ಈ ವರ್ಗಗಳಿಂದ ಸ್ಫೂರ್ತಿ ಪಡೆದು ರಾಷ್ಟ್ರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ಹೊಯ್ಸಳ ಪ್ರಾಂತ ಕಾರ್ಯವಾಹಿಕಾ ಹಾಗೂ ಪ್ರಬೋಧ್ ವರ್ಗಾಧಿಕಾರಿ ಮಾನನೀಯ ವಸಂತಾ ಸ್ವಾಮಿ ಮಾತನಾಡುತ್ತಾ, ವರ್ಗದಲ್ಲಿ ಒಟ್ಟು 15 ದಿನಗಳ ತರಬೇತಿ ನಡೆಯಲಿದೆ. ವಿಶೇಷ ವರ್ಗ, ಪ್ರವೇಶ ಹಾಗೂ ಪ್ರಬೋಧ ಶಿಕ್ಷಾ ವರ್ಗಗಳಲ್ಲಿ ತರುಣಿಯರು ಹಾಗೂ ಮಾತೆಯರು ಯೋಜಿತ ಮತ್ತು ಅನುಶಾಸಿತ ರೀತಿಯಲ್ಲಿ ಶಿಕ್ಷಣ ಪಡೆಯುತ್ತಾರೆ ಎಂದು ವರ್ಗಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಂತ ಸಹ ಕಾರ್ಯವಾಹಿಕಾ ಹಾಗೂ ಪ್ರಬೋಧ ವರ್ಗಾಧಿಕಾರಿ ಮಾನನೀಯ ಪೂರ್ಣಿಮಾ ರವಿಶಂಕರ್, ವಿಶೇಷ ವರ್ಗಾಧಿಕಾರಿ ಮಾನನೀಯ ಸುನಿತಾ, ಪ್ರಾಂತ ಶಾರೀರಿಕ ಪ್ರಮುಖ್ ಮಾನನೀಯ ಶಿಲ್ಪಾ ಭಾರ್ಗವ, ಪ್ರಾಂತ ಕಾರ್ಯಾಲಯ ಪ್ರಮುಖ್ ಮಾನನೀಯ ಅರುಣಾ ಪುರೋಹಿತ್, ಪ್ರಾಂತ ತರುಣಿ ಪ್ರಮುಖ್ ಮಾನನೀಯ ಸುಮಂಗಲಾ ಬಾಪಟ್ ಹಾಗೂ ಪ್ರಾಂತ ಪ್ರಚಾರ ಪ್ರಮುಖ್ ಮಾನನೀಯ ಮಯೂರ ಲಕ್ಷ್ಮೀ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರ ಕಾರ್ಯಕಾರಿಣಿ ಸದಸ್ಯರಾದ ವಿ.ನಾಗರಾಜ್, ವಕೀಲರಾದ ಕ್ಷಮಾ ನರಗುಂದ್, ಆರೋಗ್ಯ ಭಾರತೀಯ ಪ್ರಾಂತ ಕಾರ್ಯದರ್ಶಿ ಡಾ.ಎ.ಎಸ್. ಚಂದ್ರಶೇಖರ್ ಉಪಸ್ಥಿತರಿದ್ದರು.

ಸಮಾರೋಪ ಕಾರ್ಯಕ್ರಮದಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಸುಧಾ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ನಮ್ಮ ಸಂಸ್ಕೃತಿಯ ಆಹಾರ ಹಾಗೂ ವಿಚಾರಗಳು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಬದಲಾಗುತ್ತಿದೆ. ನಮ್ಮ ಸಂಸ್ಕೃತಿಯನ್ನು ನಾವು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಉತ್ತಮ ಸಂಸ್ಕಾರವನ್ನು ಪಡೆಯಬೇಕು. ಶಿಕ್ಷಾ ವರ್ಗ ಅತ್ಯಂತ ಸ್ಫೂರ್ತಿದಾಯಕವಾಗಿದ್ದು ಇಲ್ಲಿನ ಶಿಕ್ಷಣದಿಂದ ಇನ್ನಷ್ಟು ಪ್ರೇರಣೆ ಪಡೆದು ತರುಣಿಯರು ಹಾಗೂ ಮಾತೆಯರು ಸಮಾಜ ಮತ್ತು ದೇಶಕ್ಕೆ ಉತ್ತಮ ಕೊಡುಗೆ ನೀಡಬೇಕೆಂದು ತಿಳಿಸಿದರು.

> ಸೀತೆ, ಝಾನ್ಸಿ ರಾಣಿ, ಅಹಲ್ಯಾ ಬಾಯಿ ಹೋಳ್ಕರ್, ಭಗಿನಿ ನಿವೇದಿತಾ, ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕ ಮುಂತಾದವರು ಧರ್ಮ ರಕ್ಷಣೆಗಾಗಿ ಶ್ರಮಿಸಿದರು. ಅವರ ನೇತೃತ್ವ, ಕರ್ತೃತ್ವ ಮತ್ತು ಮಾತೃತ್ವ ನಮಗೆ ಆದರ್ಶವಾಗಬೇಕು. ಸಮಿತಿಯ ಶಿಕ್ಷಾ ವರ್ಗದಲ್ಲಿ ಪಡೆದ ಶಿಕ್ಷಣದಿಂದ ಸ್ಫೂರ್ತಿ ಪಡೆದು ನಾವೆಲ್ಲರೂ ನಮ್ಮ ಕ್ಷೇತ್ರವನ್ನು ಹೆಚ್ಚು ಕಾರ್ಯಶೀಲಗೊಳಿಸಬೇಕು.
> **–ಕ್ಷೇತ್ರ ಕಾರ್ಯವಾಹಿಕಾ ಮಾನನೀಯ ಸಾವಿತ್ರಿ ಸೋಮಯಾಜಿ**

ಕಾವೇರಿಗೆ ಕಲುಷಿತ ನೀರು; ತಾಂತ್ರಿಕ ಪರಿಣತರ ತಂಡ ರಚಿಸಿ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕೈಗಾರಿಕಾ ಸಚಿವರಿಗೆ ಪತ್ರ ಬರೆದು ಶಾಸಕ ದಿನೇಶ್ ಗೂಳಿಗೌಡ ಮನವಿ

ಬೆಂಗಳೂರು, ಮೇ 28– ರಾಜ್ಯದ ಜೀವ ನದಿ ಕಾವೇರಿಗೆ ಕಲುಷಿತ ನೀರು ಬಂದು ಸೇರುತ್ತಿದ್ದು, ಅನಾಹುತ ತಡೆಯಲು ತಾಂತ್ರಿಕ ಪರಿಣತರ ತನಿಖಾ ತಂಡವನ್ನು ರಚಿಸಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಈ ಸುಬಂಧ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರಿಗೆ ಪತ್ರ ಬರೆದಿರುವ ಅವರು, ತ್ಯಾಜ್ಯ ಮಿಶ್ರಿತ ನೀರಿನಿಂದ ಕಾವೇರಿ ನದಿ ನೀರು ಕಲುಷಿತಗೊಳ್ಳುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿಗಳು ಈ ಬಗ್ಗೆ ತುರ್ತು ಗಮನಹರಿಸಬೇಕಿದೆ. ಕೂಡಲೇ ತಾಂತ್ರಿಕ ಪರಿಣತರ ತನಿಖಾ ತಂಡವನ್ನು ರಚನೆ ಮಾಡಬೇಕಿದೆ ಎಂದು ಅವರು ಮನವಿ ಮಾಡಿದ್ದಾರೆ.

ಸಮಿತಿಯಲ್ಲಿ ಯಾರೆಲ್ಲ ಇರಬೇಕು?: ಪರಿಸರ ಇಲಾಖೆ, ಕೈಗಾರಿಕಾ ಇಲಾಖೆ, ನೀರಾವರಿ ಇಲಾಖೆ, ಅರಣ್ಯ ಇಲಾಖೆ ಸೇರಿದಂತೆ ವಿವಿಧ ವರ್ಗದ ತಜ್ಞರನ್ನೊಳಗೊಂಡ ಸಮಿತಿಯನ್ನು ರಚನೆ ಮಾಡಬೇಕು. ಈ ಸಮಿತಿ ಕೂಲಂಕಷವಾಗಿ ಅಧ್ಯಯನ ಮಾಡಿ ಸೂಕ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.



ಕಲುಷಿತಗೊಳ್ಳುತ್ತಿರುವ ನೀರು.

ಮನವಿ ಪತ್ರದಲ್ಲೇನಿದೆ?: ರಾಜ್ಯದ ರಾಜಧಾನಿ ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರಗಳ ಸಾಲಿನಲ್ಲಿ ಅಗ್ರಸ್ಥಾನ ಗಳಿಸಿದೆ. ಪ್ರಸ್ತುತ ಬೆಂಗಳೂರು ನಗರ ಸುಮಾರು 1.5 ಕೋಟಿಗೂ ಹೆಚ್ಚಿನ ಜನಸಂಖ್ಯೆ ಹೊಂದಿದ್ದು, ಬೆಂಗಳೂರಿನ ವಿಸ್ತೀರ್ಣ 741 ಚ.ಕಿ.ಮೀ ವ್ಯಾಪ್ತಿಯನ್ನು ಮೀರಿದೆ. ಕಾವೇರಿ ನದಿಯಿಂದ ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗಾಗಿ 19 ಟಿಎಂಸಿ ನೀರನ್ನು ಬಳಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದ್ದು, ಪ್ರಸ್ತುತ ಬೆಂಗಳೂರು ಜಲಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆಯ ಮೂಲಕ 1440 ಎಂಎಲ್ಡಿಯಷ್ಟು ನೀರನ್ನು ನಗರಕ್ಕೆ ಪೂರೈಸುತ್ತಿದೆ.



ದಿನೇಶ್ ಗೂಳಿಗೌಡ

> “ ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಉಗಮಿಸುವ ಕಾವೇರಿ ಹರಿಯುವ ಮಾರ್ಗದ ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ನಂಜನಗೂಡು, ಟಿ.ನರಸೀಪುರ, ಕೊಳ್ಳೇಗಾಲ ಮುಂತಾದ ಪ್ರಮುಖ ನಗರ–ಪಟ್ಟಣಗಳ ಭಾಗದಲ್ಲಿ ಹಲವು ಕಾರ್ಖಾನೆಗಳು ತಲೆ ಎತ್ತಿದ್ದು ಅದರ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸದೆ ನೇರವಾಗಿ ನದಿಗೆ ಬಿಡುತ್ತಿರುವುದರಿಂದ ನದಿಯ ನೀರು ಕಲುಷಿತಗೊಂಡು ಮಲಿನಗೊಳ್ಳುತ್ತಿದೆ. ಕೈಗಾರಿಕಾ ಪ್ರದೇಶದಿಂದ ಶುದ್ಧೀಕರಿಸದ ತ್ಯಾಜ್ಯ ನೀರು ನದಿ ಸೇರುತ್ತಿದ್ದು ಕೆಮಿಕಲ್ ಮಿಶ್ರಿತ ನೀರಿನಿಂದ ಜಲಚರಗಳಿಗೆ ಮಾರಣಾಂತಿಕವಾಗುತ್ತಿದೆ.

ಬೆಂಗಳೂರು ನಗರ ಮಾತ್ರವಲ್ಲದೆ ಬೆಂಗಳೂರು ಗ್ರಾಮಾಂತರ, ಮೈಸೂರು ಮತ್ತು ಮಂಡ್ಯ, ಚಾಮರಾಜನಗರ, ರಾಮನಗರ ಜಿಲ್ಲೆಯ ಜನತೆಗೆ ಕುಡಿಯುವ ನೀರಿನ ದಾಹವನ್ನು ನೀಗಿಸುತ್ತಿರುವ ಕಾವೇರಿ ನದಿ ನೀರು ಇಂದು ಹಾಲಾಹಲವಾಗಿ ಮಾರ್ಪಡುತ್ತಿದೆ. ಒಳಚರಂಡಿ ನೀರು ಹಾಗೂ ಹಲವು ಕೈಗಾರಿಕೆಗಳ ತ್ಯಾಜ್ಯದಿಂದ ನದಿಯು ನೈಸರ್ಗಿಕ ಗುಣ ಕಳೆದುಕೊಳ್ಳುತ್ತಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ 2023ರಲ್ಲಿ ನದಿಗಳ ಮಾಲಿನ್ಯದ ಬಗ್ಗೆ ವರದಿ ಬಿಡುಗಡೆ ಮಾಡಿದ್ದು, ಅದರಲ್ಲಿ ಕಾವೇರಿ ಕೂಡ ಸೇರಿದೆ. ನದಿ ನೀರನ್ನು ಪರೀಕ್ಷೆಗೆ ಒಳಪಡಿಸಬೇಕು. ಅದರ ಗುಣಮಟ್ಟದ ಬಗ್ಗೆ ಸಮಗ್ರ ಅಧ್ಯಯನ ನಡೆಸಬೇಕಿದೆ ಎಂದು ಕೂಡ ಸದರಿ ವರದಿ ತಿಳಿಸಿದೆ.

ಸಿಪಿಸಿಬಿ ವರದಿ ಪ್ರಕಾರ, ಶುದ್ಧ ನೀರಿನಲ್ಲಿ ಪ್ರತಿ ಲೀಟರ್ ನೀರಿನಲ್ಲಿ 1 ಎಂಜಿಗಿಂತ ಕಡಿಮೆ ಬಯೋ ಕೆಮಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಒಡಿ) ಪ್ರಮಾಣ ಇರಬೇಕು. ಆದರೆ, ಕಾವೇರಿ ನದಿಯಲ್ಲಿ ಹೆಚ್ಚು ಇದೆ ಎಂಬುದನ್ನು ತಿಳಿಸಿದೆ. ಇದು ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರಲಿದೆ.

ತನಿಖಾ ತಂಡ ರಚನೆಯಾಗಲಿ: ಕೈಗಾರಿಕೆ ತ್ಯಾಜ್ಯ, ಘನ ತ್ಯಾಜ್ಯ ಅಪಾಯದ ಪ್ರಮಾಣ ಮೀರಿ ನದಿ ನೀರಿಗೆ ಸೇರ್ಪಡೆಯಾಗುತ್ತಿರುವುದರಿಂದ ಇದರ ತಡೆಗೆ ಸರ್ಕಾರ ಕ್ರಮವಹಿಸಬೇಕಿದೆ. ಇದಕ್ಕಾಗಿಯೇ ತಾಂತ್ರಿಕ ಪರಿಣತರ ತನಿಖಾ ತಂಡವನ್ನು ರಚನೆ ಮಾಡುವುದರಿಂದ ಕೈಗಾರಿಕಾ ಪ್ರದೇಶ, ಯುಜಿಡಿ ಮಿಕ್ಸಿಂಗ್ ಲಿಂಕ್, ಹೋಟೆಲ್ ಹಾಗೂ ರೆಸಾರ್ಟ್ ಇತರ ಪ್ರದೇಶಗಳಿಂದ ಬರುವ ಮಲಿನ ನೀರು ಪವಿತ್ರ ಕಾವೇರಿ ನದಿ ಒಡಲು ಸೇರದಂತೆ ನಿಗಾವಹಿಸಬಹುದಾಗಿದೆ.

ಇದರಿಂದ ಸರ್ಕಾರ ಜನತೆಗೆ ಶುದ್ಧ ಕುಡಿಯುವ ನೀರು ಪೂರೈಸುವ ಮೂಲಕ ಆರೋಗ್ಯವನ್ನು ಕಾಪಾಡಲು ಸಹಾಯಕವಾಗಲಿದೆ. ನದಿ ನೀರು ಸ್ವಚ್ಛವಾಗಿ ಜಲಚರಗಳು, ನದಿ ನೀರು ಅವಲಂಬಿತ ಪ್ರದೇಶಗಳ ಜನರ ಆರೋಗ್ಯ ಕೂಡ ಸುಧಾರಿಸಲಿದೆ ಎಂದು ಶಾಸಕರಾದ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಬೆಳ್ಳೂರಿನಲ್ಲಿ ಹಿಂದೂ ಯುವಕನ ಮೇಲೆ ಹಲ್ಲೆ

ಠಾಣೆ ಮುಂದೆ ಹಿಂದೂ ಪರ ಸಂಘಟನೆಗಳ ಪ್ರತಿಭಟನೆ, ಪ್ರಕ್ಷುಬ್ಧ ವಾತಾವರಣ

- ಹಿರಿಯ ಅಧಿಕಾರಿಗಳ ಮಧ್ಯಪ್ರವೇಶದಿಂದ ಪ್ರಕರಣ ದಾಖಲು
- ಬೈಕ್ ಓವರ್‌ಟೇಕ್ ಮಾಡುವ ವಿಚಾರಕ್ಕೆ ನಡೆದ ಹಲ್ಲೆ, ಮನೆ ಮೇಲೆ ದಾಂಧಲೆ
- ಬೆಳ್ಳೂರಿನಲ್ಲಿ ಬಿಗುವಿನ ವಾತಾವರಣ, ಬಿಗಿ ಬಂದೋಬಸ್ತ್



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ಅಭಿಲಾಶ್



ಹಲ್ಲೆಯನ್ನು ಖಂಡಿಸಿ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸುತ್ತಿರುವುದು.

ನಾಗಮಂಗಲ, ಮೇ 28– ಬೈಕ್ ಓವರ್ ಟೇಕ್ ಮಾಡುವ ವಿಚಾರಕ್ಕೆ ಹಿಂದೂ ಯುವಕನ ಮೇಲೆ ಅನ್ಯ ಕೋಮಿನ ಗುಂಪು ಮಾರಣಾಂತಿಕ ಹಲ್ಲೆ ನಡೆಸಿದ್ದು, ಘಟನೆ ಖಂಡಿಸಿ ಹಿಂದೂಪರ ಸಂಘಟನೆಯ ಕಾರ್ಯಕರ್ತರು ಬೆಳ್ಳೂರು ಠಾಣೆಯ ಮುಂದೆ ಪ್ರತಿಭಟನೆ ನಡೆಸಿದ ಪರಿಣಾಮ ಠಾಣೆ ಮುಂದೆ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು.

ಬೆಳ್ಳೂರಿನ ಅಭಿಲಾಶ್ ಹಲ್ಲೆಗೊಳಗಾದ ಯುವಕನಾಗಿದ್ದು, ಬೆಳ್ಳೂರಿನ ಬಿಜಿಎಸ್ ಆಸ್ಪತ್ರೆಯಲ್ಲಿ ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾನೆ.

ಘಟನೆಯ ವಿವರ: ಕಳೆದ ಶುಕ್ರವಾರ ಸಂತೆ ಬೀದಿ ರಸ್ತೆಯಲ್ಲಿ ಅಭಿಲಾಶ್, ನಾಗೇಶ್ ಮತ್ತು ಅನ್ಯ ಕೋಮಿನ ಯುವಕರ ನಡುವೆ ಬೈಕ್ ಓವರ್‌ಟೇಕ್ ಮಾಡುವ ವಿಚಾರಕ್ಕೆ ಮಾತಿನ ಚಕಮಕಿ ನಡೆದಿತ್ತು ಇದಾದ ಬಳಿಕ ನಿನ್ನೆ ಸೋಮವಾರ ಸಂಜೆ ಅನ್ಯ ಕೋಮಿನ ಗುಂಪು ಹಿಂದೂ ಯುವಕನನ್ನು ಬೈಕ್ ಓವರ್ ಟೇಕ್ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೆ ಜಗಳ ತೆಗೆದು ಹಲ್ಲೆ ನಡೆಸಿ, ಆತನ ಮನೆ ಮೇಲು ದಾಂಧಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಇದಾದ ಬಳಿಕ ಬೆಳ್ಳೂರು ಪೊಲೀಸ್ ಠಾಣೆಗೆ ಆಗಮಿಸಿದ ಯುವಕನ ಪೋಷಕರು ಹಾಗೂ ಹಿಂದೂಪರ ಸಂಘಟನೆ ಕಾರ್ಯಕರ್ತರು ದೂರು ನೀಡಲು ಮುಂದಾಗಿದ್ದಾರೆ. ಈ ವೇಳೆ ಆರಂಭದಲ್ಲಿ ಪೊಲೀಸರು ದೂರು ಸ್ವೀಕರಿಸಲು ಮುಂದಾಗದಿದ್ದಾಗ ಯುವಕನ ಪರ ಪೋಷಕರು ಹಾಗೂ ಹಿಂದೂಪರ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಪೊಲೀಸರು, ಅನ್ಯಕೋಮಿನ ಗುಂಪು ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದಾಗ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಠಾಣೆ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು

ಪ್ರಕರಣದ ಬಗ್ಗೆ ಮಾಹಿತಿ ಪಡೆದ ದಕ್ಷಿಣ ವಲಯ ಡಿಐಜಿಪಿ ಅಮಿತ್ ಸಿಂಗ್, ಬೆಳ್ಳೂರು ಠಾಣೆ ಬಳಿಗೆ ಆಗಮಿಸಿ, ಎಸ್ಪಿ ಯತೀಶ್ ಬಳಿ ಮಾಹಿತಿ ಪಡೆದುಕೊಂಡರು. ಬಳಿಕ ಎಸ್ಪಿ ಸಮ್ಮುಖದಲ್ಲಿ ಘಟನೆಗೆ ಸಂಬಂಧಿಸಿದಂತೆ ದೂರು ದಾಖಲಾಯಿತು.

ಬೆಳ್ಳೂರು ಪಟ್ಟಣದಲ್ಲಿ ಹಿಂದೂ ಯುವಕರ ಮೇಲೆ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದ್ದು, ಗಾಯಾಳು ಅಭಿಲಾಷ್ ತಂದೆ ರಾಮು, ಅತ್ತೆ ರಶ್ಮಿ ಅವರು ದೂರು ನೀಡಿದ್ದಾರೆ. ಹಿಂದೂ ಸಂಘಟನೆ ಮುಖಂಡರೊಂದಿಗೆ ಠಾಣೆಗೆ ತೆರಳಿ ದೂರು ಸಲ್ಲಿಕೆಯಾಗಿದ್ದು, ಸಮೀರ್ ಸೂಫಿಯಾನ್, ಮಹಮದ್ ಇರ್ಫಾನ್, ಮಹಮದ್ ಹುಜೈಫ್, ಇಮ್ರಾನ್, ಸೈಯದ್ ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಾಗಿದೆ. ಪಟ್ಟಣದಲ್ಲಿ ಬಿಗುವಿನ ವಾತಾವರಣವಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಬಳಿಕ ಮಾತನಾಡಿದ ಎಸ್ಪಿ ಯತೀಶ್, ಗಾಯಾಳು ತಂದೆ ನೀಡಿದ್ದ ದೂರಿನನ್ವಯ ಪ್ರಕರಣ ದಾಖಲಾಗಿದ್ದು, ಆರೋಪಿಗಳ ವಿರುದ್ಧ ಶೀಘ್ರ ಕಾನೂನು ಕ್ರಮ ಕೈಗೊಳ್ಳಲಾಗುವುದು. ದೂರು ಪಡೆಯಲು ನಿರಾಕರಿಸಿದ ಪೊಲೀಸರ ಮೇಲೂ ವಿಚಾರಣೆ ನಡೆಸಲಾಗುವುದು. ಹಲವು ವರ್ಷಗಳಿಂದ ಈ ರೀತಿಯ ಘಟನೆ ನಡೆದಿಲ್ಲ. ಬೆಳ್ಳೂರು ಪಟ್ಟಣ ಶಾಂತ ವಾತಾವರಣದಲ್ಲಿದೆ ಯಾರಾದರೂ ಕ್ರಿಮಿನಲ್ ಆಕ್ಟಿವಿಟಿಯಲ್ಲಿ ಭಾಗಿಯಾದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ತುಂಡಾದ ವಿದ್ಯುತ್ ತಂತಿ ತುಳಿದು ರೈತ ಸಾವು

ಕಿಕ್ಕೇರಿ, ಮೇ 28– ಸಮೀಪದ ಬೆಡದಹಳ್ಳಿ ಗ್ರಾಮದಲ್ಲಿ ವಿದ್ಯುತ್ ತಂತಿ ತುಳಿದು ರೈತನೋರ್ವ ಸ್ಥಳದಲ್ಲಿಯೇ ಸಾವಿಗೀಡಾಗಿರುವ ಪ್ರಕರಣ ಮಂಗಳವಾರ ಸಂಭವಿಸಿದೆ.

ಸಿಂಗನಹಳ್ಳಿ ಗ್ರಾಮದ ಶಿವೇಗೌಡ (60) ಮೃತ ದುರ್ದೈವಿ. ಮಂಗಳವಾರ ಮಧ್ಯಾಹ್ನ ಶಿವೇಗೌಡರು ತಮ್ಮ ತೋಟದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾಗ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಕಾಣದೆ ತುಳಿದಿದ್ದಾರೆ. ಇದರಿಂದ ವಿದ್ಯುತ್ ಪ್ರವಹಿಸಿ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಬಹಳ ಹೊತ್ತಾದರೂ ಕಾಣದ ತಂದೆಯನ್ನು ಈತನ ಮಗ ಹುಡುಕಾಟ ನಡೆಸಿದಾಗ ತುಂಡಾಗಿ ಬಿದ್ದಿರುವ ವಿದ್ಯುತ್ ತಂತಿ ತುಳಿದು ಸಾವನ್ನಪ್ಪಿರುವುದನ್ನು ಕಂಡಿದ್ದಾರೆ.



ತುಂಡಾಗಿದ್ದ ವಿದ್ಯುತ್ ತಂತಿ ತುಳಿದು ಮೃತಪಟ್ಟ ರೈತ ಶಿವೇಗೌಡ.

ಕಿಕ್ಕೇರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನಾ ಸ್ಥಳಕ್ಕೆ ಇನ್‌ಸ್ಪೆಕ್ಟರ್ ರೇವತಿ ಆಗಮಿಸಿ ಸ್ಥಳ ಪರಿಶೀಲನೆ ನಡೆಸಿದರು. ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಕಳೆದೆರಡು ದಿನಗಳ ಹಿಂದೆ ಇದೇ ರೀತಿ ರೈತ ಮಹಿಳೆಯೋರ್ವಳು ಲಕ್ಷ್ಮೀಪುರ ಗ್ರಾಮದ ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಮೃತಳಾಗಿದ್ದಳು. ಪ್ರಕರಣ ಮಾಸುವ ಮುನ್ನ ಮತ್ತೊಂದು ಪ್ರಕರಣ ಜರುಗಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಸೆಸ್ಕಾಂ ಇಲಾಖೆಯ ಬೇಜವಾಬ್ದಾರಿಯಿಂದ ರೈತರು ಸಾವಿಗೀಡಾಗುವಂತಾಗಿದೆ. ಸೆಸ್ಕಾಂ ಇಲಾಖೆಯವರು ಸೂಕ್ತ ಪರಿಹಾರವನ್ನು ತ್ವರಿತವಾಗಿ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಗ್ರಾಪಂ. ಅಧ್ಯಕ್ಷ ಕುಬೇರ, ಬೆಡದಹಳ್ಳಿ ಸುನಿಲ್, ಕಾಂತರಾಜು ಹಾಜರಿದ್ದರು.

ಕ್ಯಾಂಟರ್ ಬ್ರೇಕ್ ಫೇಲ್: ಸಾರಿಗೆ ಬಸ್ಸುಗಳಿಗೆ ಡಿಕ್ಕಿ

ಶ್ರೀರಂಗಪಟ್ಟಣ, ಮೇ 28– ಹೆದ್ದಾರಿಯಲ್ಲಿ ಕ್ಯಾಂಟರ್ ವಾಹನದ ಬ್ರೇಕ್ ವಿಫಲವಾಗಿ ಎರಡು ಸಾರಿಗೆ ಬಸ್‌ಗಳಿಗೆ ಡಿಕ್ಕಿ ಹೊಡೆದು ನಿಂತ ಘಟನೆ ವರದಿಯಾಗಿದ್ದು, ಯಾವುದೇ ಅಹಿತಕರ ಘಟನೆ ಸಂಭವಿಸಿಲ್ಲ. ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಘಟನೆ ಸಂಭವಿಸಿದ್ದು, ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಆಗಬಹುದಾಗಿದ್ದ ಭಾರಿ ದುರಂತ ತಪ್ಪಿದಂತಾಗಿದೆ. ಘಟನೆಯಲ್ಲಿ ಮೂರು ವಾಹನ ಚಾಲಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕ್ಯಾಂಟರ್ ವಾಹನದ ವೇಗ ಕಡಿಮೆ ಇದ್ದ ಕಾರಣ ಎರಡು ಸಾರಿಗೆ ಬಸ್‌ಗೆ ಡಿಕ್ಕಿಯಾದರು ಬಸ್‌ನಲ್ಲಿದ್ದ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.


ಶ್ರೀಬೊಮ್ಮಲಿಂಗೇಶ್ವರ ದೇವಸ್ಥಾನದ ಬೀಗ ಮುರಿದು ಪರಾರಿ

ಭಾರತೀನಗರ, ಮೇ 28– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದ ಶ್ರೀ ಬೊಮ್ಮಲಿಂಗೇಶ್ವರ ದೇವಸ್ಥಾನದ ಬಾಗಿಲಿಗೆ ಹಾಕಲಾಗಿದ್ದ ಬೀಗವನ್ನು ಯಾರೋ ಕಿಡಿಗೇಡಿಗಳು ಹೊಡೆದು ಪರಾರಿಯಾಗಿರುವ ಘಟನೆ ಜರುಗಿದೆ.

ಅಣ್ಣೂರು ಗ್ರಾಮದ ಹೊರವಲಯದಲ್ಲಿರುವ ಶ್ರೀಬೊಮ್ಮಲಿಂಗೇಶ್ವರ ದೇವಸ್ಥಾನ ಮತ್ತು ಶ್ರೀಬೋರಪ್ಪನ ದೇವಸ್ಥಾನದ ಬಾಗಿಲನ್ನು ಯಾರೋ ಕಿಡಿಗೇಡಿಗಳು ಕಲ್ಲಿನಿಂದ ಹೊಡೆದು ಬೀಗವನ್ನು ಕದ್ದು ಪರಾರಿಯಾಗಿದ್ದಾರೆ.

ದೇವಸ್ಥಾನದಲ್ಲಿ ದೇವರ ಮೂರ್ತಿಯನ್ನು ಬಿಟ್ಟು ಯಾವುದೇ ಬೆಲೆಬಾಳುವ ವಸ್ತು ಇಲ್ಲದ ಕಾರಣ ಬೀಗವನ್ನೇ ಹೊತ್ತೊಯ್ದಿದ್ದಾರೆ. ವಿಷಯ ತಿಳಿದ ತಕ್ಷಣ ಅರ್ಚಕ ದೇವಸ್ಥಾನಕ್ಕೆ ಭೇಟಿ ನೀಡಿ ಗ್ರಾಮದ ಯಜಮಾನರಿಗೆ ಮಾಹಿತಿ ನೀಡಿದ್ದಾರೆ.

ಚುನಾವಣಾ ವೀಕ್ಷಕರಿಂದ ಮತಗಟ್ಟೆ ಪರಿಶೀಲನೆ



ಮಂಡ್ಯ, ಮೇ 28– ಕರ್ನಾಟಕ ವಿಧಾನಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆ–2024 ಕ್ಕೆ ಸಂಬಂಧಿಸಿದಂತೆ ನೇಮಕವಾಗಿರುವ ಚುನಾವಣಾ ವೀಕ್ಷಕರಾದ ಡಾ. ರವಿಶಂಕರ್ ಅವರು ಇಂದು ಮತಗಟ್ಟೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮಂಡ್ಯ ಜಿಲ್ಲೆಯಲ್ಲಿ ಜೂನ್ 3 ರಂದು ನಡೆಯಲಿರುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ 9 ಮತಗಟ್ಟೆಗಳನ್ನು ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದ್ದು, ವೀಕ್ಷಕರು ಇಂದು ಮಂಡ್ಯ ತಾಲೂಕು ಪಂಚಾಯತ್ ಹಾಗೂ ತಾಲೂಕು ಕಚೇರಿಯಲ್ಲಿ ತೆರೆಯಲಾಗುವ ಮತಗಟ್ಟೆಯಲ್ಲಿ ಮಾಡಿಕೊಂಡಿರುವ ಸಿದ್ಧತೆಗಳನ್ನು ಪರಿಶೀಲಿಸಿದರು. ಇದಕ್ಕೂ ಮುನ್ನ ಚುನಾವಣೆಯ ಸಹಾಯಕ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಡಾ. ಕುಮಾರ ಅವರಿಂದ ಚುನಾವಣೆಗೆ ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಪರಿಶೀಲನೆಯ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್. ನಾಗರಾಜು, ಮಂಡ್ಯ ತಹಶೀಲ್ದಾರ್ ಶಿವಕುಮಾರ ಬಿರಾದಾರ್ ಉಪಸ್ಥಿತರಿದ್ದರು.

ಆರತಿ ಉಕ್ಕಡದಲ್ಲಿ ನೀರಿಗೆ ಹಾಹಾಕಾರ

ಶ್ರೀರಂಗಪಟ್ಟಣ, ಮೇ 28– ತಾಲೂಕಿನ ಶಕ್ತಿ ದೇವತೆ ಅಹಲ್ಯಾ ದೇವಿ ಆರತಿ ಉಕ್ಕಡ ಮಾರಮ್ಮನ ದೇವಾಲಯದ ಬಳಿ ನೀರಿನ ಸಮಸ್ಯೆ ಉದ್ಭವಿಸಿದ್ದು, ಈ ಸಮಸ್ಯೆ ನಿವಾರಿಸಲು ಸ್ಥಳೀಯರು ಹಾಗೂ ವ್ಯಾಪಾರಸ್ಥರು ಆಗ್ರಹಿಸಿ ದೇವಾಲಯದ ಆವರಣದ ಬಳಿ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ದೇವಾಲಯ ಸಮಿತಿ ಅಧ್ಯಕ್ಷ ಚಂದ್ರು ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಮುಜರಾಯಿ ಇಲಾಖೆ ವಹಿಸಿಕೊಂಡಾಗಿನಿಂದಲೂ ದೇವಾಲಯದ ಬಳಿ ಮೂಲ ಸೌಕರ್ಯಗಳು ಒದಗಿಸುವಲ್ಲಿ ವಿಫಲವಾಗಿದೆ. ಇದರಿಂದ ದೇವಾಲಯಕ್ಕೆ ಬರುವ ಭಕ್ತಾದಿಗಳು ಹಾಗೂ ಇಲ್ಲಿನ ವ್ಯಾಪಾರಸ್ಥರಿಗೆ ಕುಡಿಯಲು, ಕೈಕಾಲು ತೊಳೆದುಕೊಳ್ಳಲು ಹಾಗೂ ಶೌಚಾಲಯಕ್ಕೆ ಬಳಸಲು ನೀರಿನ ಸಮಸ್ಯೆಯಾಗಿದೆ. ಬಂದ ಭಕ್ತರೂ ಸಹ ಶೌಚಾಲಯದಲ್ಲಿ ನೀರಿಲ್ಲದೆ ಬಾಟಲು ನೀರನ್ನು ಹಣ ಕೊಟ್ಟು ಬಳಸುವಂತಾಗಿದೆ. ಅಧಿಕಾರಿಗಳು ಇಲ್ಲಿನ ಜನರ ಸಮಸ್ಯೆಗಳನ್ನು ಆಲಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.



ತಾಲೂಕಿನ ಶಕ್ತಿ ದೇವತೆ ಅಹಲ್ಯಾ ದೇವಿ ಆರತಿ ಉಕ್ಕಡ ಮಾರಮ್ಮನ ದೇವಾಲಯದ ಬಳಿ ಸ್ಥಳೀಯರು ಹಾಗೂ ವ್ಯಾಪಾರಸ್ಥರು ಪ್ರತಿಭಟನೆ ನಡೆಸಿದರು.

ದೇವಾಲಯದ ಆವರಣದಲ್ಲಿ ದೇವಾಲಯಕ್ಕೆ ಸೇರಿದ ಶಾಲೆಯಲ್ಲಿದ್ದ ಬೋರ್‌ವೆಲ್ ಕೆಟ್ಟು ನಿಂತು, ಅದು ದುರಸ್ತಿಯಾಗದೆ ಮಕ್ಕಳಿಗೆ ಒಂದು ತೊಟ್ಟು ನೀರಿಲ್ಲದೆ ಹಾಹಾಕಾರ ಉಂಟಾಗಿದೆ ಕೆಟ್ಟು ನಿಂತ ಬೋರ್‌ವೆಲ್ ಕೂಡ ದುರಸ್ತಿ ಮಾಡದ ಅಧಿಕಾರಿಗಳು ದೇವಾಲಯದ ಹುಂಡಿ ತುಂಬಿದ ನಂತರ ಬಂದು ಹುಂಡಿ ಒಡೆದು ಹಣ ಎಣಿಸಿ ಖಜಾನೆಗೆ ಜಮಾ ಮಾಡಲು ತೆಗೆದುಕೊಂಡು ಹೋಗುತ್ತಿದ್ದಾರೆ. ಇದನ್ನು ಬಿಟ್ಟು ಇಲ್ಲಿನ ಅಭಿವೃದ್ಧಿಗೆ ಯಾವ ಪೂರಕವಾದ ಕೆಲಸಗಳು ನಡೆಯುತ್ತಿಲ್ಲ. ಕೂಡಲೇ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಇಲ್ಲಿನ ಜನರ ಕಷ್ಟಗಳನ್ನು ಆಲಿಸಬೇಕು ಎಂದು ಒತ್ತಾಯಿಸಿದರು. ಸ್ಥಳೀಯರಾದ ಕುಮಾರ್, ಭೂತಯ್ಯ, ಕೆ.ಕುಮಾರ್, ಲೋಕೇಶ್, ರವಿ, ವೆಂಕಟೇಶ್, ಶಿವು, ಸುನಂದಮ್ಮ, ಮಾಸ್ತಮ್ಮ, ಮಂಜುಳಮ್ಮ, ಇಂದ್ರಮ್ಮ, ಶಾಂತಮ್ಮ, ಬೋರಮ್ಮ, ರತ್ನಮ್ಮ ಸೇರಿದಂತೆ ಸ್ಥಳೀಯರು, ಗ್ರಾಮಸ್ಥರು, ಭಕ್ತರು ಉಪಸ್ಥಿತರಿದ್ದರು.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

ಪತಿಯ ಅಂಗಾಂಗ ದಾನ ಮಾಡಿ ಮಾನವೀಯತೆ ಮೆರೆದ ಪತ್ನಿ

ಶ್ರೀರಂಗಪಟ್ಟಣ, ಮೇ 28– ತಾಲೂಕಿನ ಕೆ.ಆರ್.ಸಾಗರದ ಸಂತೆಮಾಳದ ಮುಖ್ಯ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಬೆಳಗ್ಗೆ ಸಾವನ್ನಪ್ಪಿದ್ದು, ಆತನ ಪತ್ನಿ ಪತಿಯ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.



ಹುಲಿಕರೆ ಗ್ರಾಮದ ರವಿಚಂದ್ರ (39) ಮೃತ ದುರ್ದೈವಿ. ಈತನ ಪತ್ನಿ ರಂಜಿತ ಪತಿಯ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಹಲವರ ಪಾಲಿಗೆ ಸಂಜೀವಿನಿಯಾಗಿದ್ದಾರೆ. ಈತ ಕೆಆರ್‌ಎಸ್ ಗ್ರಾಮದಲ್ಲಿ ಸಲೂನ್ ನಡೆಸುತ್ತಿದ್ದು, ಶುಕ್ರವಾರ ರಾತ್ರಿ ಎಂದಿನಂತೆ ಅಂಗಡಿ ಕೆಲಸ ಮುಗಿಸಿ ವಾಪಸ್ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ನಾಯಿಯೊಂದು ಬೈಕ್‌ಗೆ ಅಡ್ಡಬಂದು ಅಪಘಾತವಾಗಿತ್ತು. ಇದರಿಂದ ಕೆಳಗೆ ಬಿದ್ದು ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದ ಅವರನ್ನು ಮೈಸೂರು ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮೃತಪಟ್ಟಿದ್ದಾರೆ.

ಅಂಗಾಂಗ ದಾನ: ಚಿಕಿತ್ಸೆ ಫಲಕಾರಿಯಾಗದ ಕಾರಣ ರವಿಚಂದ್ರ ದೇಹ ನಿಷ್ಕ್ರಿಯಗೊಂಡ ಕಾರಣ ಅವರ ಪತ್ನಿ ರಂಜಿತ ತನ್ನ ಪತಿ ದೇಹದ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ರವಿಚಂದ್ರ ಅವರ ಕಿಡ್ನಿ, ಚರ್ಮ, ಹೃದಯ ಸೇರಿದಂತೆ ದೇಹದ ಹಲವು ಭಾಗಗಳನ್ನು ಆಸ್ಪತ್ರೆಯವರು ಪಡೆದುಕೊಂಡಿದ್ದಾರೆ. ಕೆ.ಆರ್.ಸಾಗರ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿದ್ದಾರೆ. ಮೃತರು ಪತ್ನಿ ರಂಜಿತ ಮತ್ತು ಇಬ್ಬರು ಪುಟ್ಟ ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದು, ಮೃತರ ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಬನ್ನೂರು ಗ್ರಾಮದಲ್ಲಿ ನಡೆಯಿತು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಕಾರ್ಯವನ್ನು ಯಶಸ್ವಿಗೊಳಿಸಿ

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ವೀಕ್ಷಕ ಡಾ.ಜೆ.ರವಿಶಂಕರ್

ಮಂಡ್ಯ, ಮೇ 28– ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯು ಜೂನ್ 3 ರಂದು ನಡೆಯಲಿದ್ದು, ಚುನಾವಣಾ ಕಾರ್ಯವನ್ನು ಯಶಸ್ವಿಗೊಳಿಸಿ ಎಂದು ಅಬಕಾರಿ ಆಯುಕ್ತ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ವೀಕ್ಷಕ ಡಾ.ಜೆ.ರವಿಶಂಕರ್ ಚುನಾವಣಾ ಅಧ್ಯಕ್ಷಾಧಿಕಾರಿ ಹಾಗೂ ಮತಗಟ್ಟೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಕರ್ನಾಟಕ ವಿಧಾನಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ– 2024ರ ಸಂಬಂಧ ಆಯೋಜಿಸಲಾಗಿದ್ದ ಅಧ್ಯಕ್ಷಾಧಿಕಾರಿ ಹಾಗೂ ಮತಗಟ್ಟೆ ಅಧಿಕಾರಿಗಳಿಗೆ ಚುನಾವಣಾ ತರಬೇತಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆಗೆ ತಹಶೀಲ್ದಾರ್ ಹಾಗೂ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳನ್ನು, ಅಧ್ಯಕ್ಷಾಧಿಕಾರಿ ಹಾಗೂ ಮತಗಟ್ಟೆ ಅಧಿಕಾರಿಗಳಾಗಿ ನೇಮಕ ಮಾಡಲಾಗಿದ್ದು, ಇವರಿಗೆ ಚುನಾವಣೆ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ಅನುಭವ ಇರುವುದರಿಂದ ಬಹಳ ಅನುಕೂಲಕರ ಹಾಗೂ ಸುಲಭವಾಗಿ ಚುನಾವಣಾ ಕಾರ್ಯವನ್ನು ನಿರ್ವಹಿಸಬಹುದು ಎಂದು ಅಭಿಪ್ರಾಯಪಟ್ಟರು.

17 ವರ್ಷಗಳ ಹಿಂದೆ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದು, ಇಂದು ಜಿಲ್ಲೆಗೆ ಚುನಾವಣಾ ವೀಕ್ಷಕನಾಗಿ ಬಂದಿರುವುದು ಸಂತೋಷದ ವಿಷಯವಾಗಿದೆ.



ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ವೀಕ್ಷಕ ಡಾ.ಜೆ.ರವಿಶಂಕರ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಾತನಾಡಿ, ಚುನಾವಣಾ ಅಧ್ಯಕ್ಷಾಧಿಕಾರಿ, ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಚುನಾವಣೆಯ ಮಾರ್ಗಸೂಚಿಯನ್ನು ತಿಳಿದುಕೊಂಡು ಅದರಂತೆಯೇ ಕಾರ್ಯ ನಿರ್ವಹಿಸಿ ಎಂದರು.


ಮಂಡ್ಯ ಜಿಲ್ಲೆಯಲ್ಲಿ ಜೂನ್ 3 ರಂದು ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆ ನಡೆಯಲಿದೆ. ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ಪ್ರಕ್ರಿಯೆಯೂ ಜರುಗಲಿದೆ. ಎಲ್ಲಾ ಚುನಾವಣಾ ಸಿಬ್ಬಂದಿಗಳು ನಿಗದಿಪಡಿಸಿದ ಸಮಯಕ್ಕೆ ಮತಗಟ್ಟೆಯಲ್ಲಿ ಹಾಜರಿರಬೇಕು. ಚುನಾವಣಾ ಅಧಿಕಾರಿ ಹಾಗೂ ಸಿಬ್ಬಂದಿಗಳು ಮತಗಟ್ಟೆಗೆ ಸಂಬಂಧಿಸಿದ ಎಲ್ಲಾ ಸಾಮಗ್ರಿಗಳನ್ನು ಪಡೆದುಕೊಂಡು ಯಾವುದೇ ಲೋಪದೋಷ ಬಾರದಂತೆ ನೋಡಿಕೊಳ್ಳಿ ಎಂದು ತಿಳಿಸಿದರು.

ಮತಗಟ್ಟೆ ಸಂಪೂರ್ಣ ಜವಾಬ್ದಾರಿ ಪ್ರಿಸೈಡಿಂಗ್ ಅಧಿಕಾರಿಗಳ ಮೇಲಿದ್ದು, ಪ್ರಿಸೈಡಿಂಗ್ ಅಧಿಕಾರಿ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿ. ಮತದಾನದಲ್ಲಿ NOTA (None of the above) ಗೆ ಅವಕಾಶವಿರುವುದಿಲ್ಲ. ಮತಗಟ್ಟೆಗಳಲ್ಲಿ ವಿಡಿಯೋ ಚಿತ್ರೀಕರಣಕ್ಕೆ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 5403 ಮತದಾರರಿದ್ದು, 3127 ಗಂಡಸರು ಹಾಗೂ 2276 ಹೆಂಗಸರಿದ್ದಾರೆ. ಚುನಾವಣೆಯಲ್ಲಿ ಮತ ಚಲಾಯಿಸುವವರು ಶಿಕ್ಷಕರಾಗಿದ್ದು, ಎಲ್ಲಾ ಮತದಾರರಿಗೆ ಮತದಾನದ ಬಗ್ಗೆ ಸರಿಯಾದ ಮಾಹಿತಿ ನೀಡಿ ಗೌರವದಿಂದ ವರ್ತಿಸಿ. ಯಾವುದೇ ಸಮಸ್ಯೆ ಬಾರದಂತೆ ಕಾರ್ಯ ನಿರ್ವಹಿಸಿ ಎಂದರು.

ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಓಬಿಸಿ ನಾಯಕ ರಘು ಆರ್.ಕೌಟಿಲ್ಯರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಲು ಆಗ್ರಹ

ಮೈಸೂರು, ಮೇ 28(ಜಿಎ)–ವಿಧಾನ ಪರಿಷತ್ ಸದಸ್ಯರ ಆಯ್ಕೆಯಲ್ಲಿ ಓಬಿಸಿ ನಾಯಕ ರಘು ಆರ್. ಕೌಟಿಲ್ಯ ಅವರನ್ನು ಪರಿಗಣಿಸುವಂತೆ ಮೈಸೂರು ಜಿಲ್ಲಾ ವೀರ ಮಡಿವಾಳರ ಜಾಗೃತಿ ಯುವ ಬಳಗ ಆಗ್ರಹಿಸಿದೆ.


ರಘು ಕೌಟಿಲ್ಯ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಸಂಸ್ಥಾಪಕ ಅಧ್ಯಕ್ಷ ಮಾದುರಾಜು ಮಡಿವಾಳ ಮಾತನಾಡಿ, ದಶಕಗಳಿಂದ ರಘು ಆರ್.ಕೌಟಿಲ್ಯ ಅವರು ಹಳೆ ಮೈಸೂರು ಭಾಗದಲ್ಲಿ ಅತ್ಯಂತ ಪ್ರಭಾವಿ ಹಿಂದುಳಿದ ವರ್ಗಗಳ ನಾಯಕರಾಗಿ ಗುರುತಿಸಿಕೊಂಡಿದ್ದು, ಎರಡು ಬಾರಿ ಯಡಿಯೂರಪ್ಪ ಅವರು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದರು. ಆದರೆ, ಅಲ್ಪ ಮತಗಳಿಂದ ಸೋಲನ್ನು ಅನುಭವಿಸಿದ್ದಾರೆ. ಆದ್ದರಿಂದ ಈ ಬಾರಿ ಅವರನ್ನು ಆಯ್ಕೆ ಮಾಡಿದರೆ, ಅವರಿಂದ ಹಿಂದುಳಿದ ವರ್ಗಗಳ ಮತಗಳನ್ನು ಹಳೆ ಮೈಸೂರು ಭಾಗದಲ್ಲಿ ಕ್ರೋಢಿಕರಿಸಲು ಬಿಜೆಪಿಗೆ ಹೆಚ್ಚಿನ ಅನುಕೂಲವಾಗುವುದರಲ್ಲಿ ಅನುಮಾನವಿಲ್ಲ ಎಂದು ಹೇಳಿದರು.

ಮಡಿವಾಳ ಸಮುದಾಯಕ್ಕೆ ಗೆಲುವು, ಸೋಲನ್ನು ತೀರ್ಮಾನಿಸುವ ಸಾಮರ್ಥ್ಯವಿದೆ ಹೊರತು ಸಮುದಾಯದ ಮತಗಳಿಂದಲೇ ಶಾಸಕರಾಗಿ ಆಯ್ಕೆ ಮಾಡುವಷ್ಟು ಪ್ರಬಲವಾಗಿಲ್ಲ. ಕಳೆದ 75 ವರ್ಷಗಳಿಂದ ಯಾರೊಬ್ಬರು ಎಂಎಲ್‌ಎ ಆಗಿಲ್ಲ. 2009ರಲ್ಲಿ ಶಂಕರಪ್ಪ ಅವರು ಎಂಎಲ್‌ಸಿ ಸ್ಥಾನವನ್ನು ಸದಾನಂದಗೌಡರಿಗೆ ಬಿಟ್ಟುಕೊಟ್ಟು ಅವರು ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟಿದರು. ಆದ್ದರಿಂದ ಈ ಬಾರಿ ರಘು ಕೌಟಿಲ್ಯರಿಗೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ರವಿ, ದುದ್ದಗೆರೆ ಶಿವಣ್ಣ, ರಾಜೇಂದ್ರ ಪ್ರಸಾದ್ ರಮ್ಮನಹಳ್ಳಿ ಉಪಸ್ಥಿತರಿದ್ದರು.

ಡಾ.ಯತೀಂದ್ರರಿಗೆ ಎಂಎಲ್ಸಿ ಸ್ಥಾನ ನೀಡಿ

ಮೈಸೂರು, ಮೇ 28–ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿಗಳಿಗೆ ವರುಣ ಕ್ಷೇತ್ರ ತ್ಯಾಗ ಮಾಡಿದ ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡುವಂತೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆಗ್ರಹಿಸಿದ್ದಾರೆ.


ಡಾ.ಯತೀಂದ್ರ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಐದು ವರ್ಷಗಳ ಕಾಲ ವರುಣ ಕ್ಷೇತ್ರವನ್ನು ಸರ್ವತೋಮುಖ ಅಭಿವೃದ್ಧಿ ಮಾಡಿ, ನಾಡಿನ ಹಿತದೃಷ್ಟಿಯಿಂದ ಅವರ ತಂದೆ, ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಷೇತ್ರ ಬಿಟ್ಟುಕೊಟ್ಟರು. ಹೀಗಾಗಿ ಪಕ್ಷ ಮತ್ತೊಮ್ಮೆ ಅವರಿಗೆ ಅವಕಾಶ ನೀಡಿದ್ದಲ್ಲಿ ಅನುಕೂಲವಾಗುತ್ತದೆ ಎಂದಿದ್ದಾರೆ. ತಾವು ವರುಣ ಕ್ಷೇತ್ರವನ್ನು ತ್ಯಾಗ ಮಾಡಿಯೂ ಕ್ಷೇತ್ರದ ನಂಟು ಬಿಡದೆ ಜನರ ಕಷ್ಟ–ಸುಖಗಳಿಗೆ ಸ್ಪಂದಿಸುತ್ತಿದ್ದಾರೆ. ವರುಣ ಆಶ್ರಯ ಸಮಿತಿ ಅಧ್ಯಕ್ಷರಾಗಿ ಇಂದಿಗೂ ಜನರೊಂದಿಗೆ ಒಡನಾಟ ಬಲಪಡಿಸಿಕೊಂಡಿದ್ದಾರೆ. ಅಲ್ಲದೆ, ಈ ಹಿಂದೆ ನಡೆದ ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಯಲ್ಲೂ ನಾಡಿನಾದ್ಯಂತ ಸಂಚರಿಸಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ. ಅವರು ಪಕ್ಷಕ್ಕೆ ನೀಡುತ್ತಿರುವ ಕೊಡುಗೆ ಗಮನಿಸಿ, ಮುಂದಿನ ದಿನಮಾನಗಳಲ್ಲಿ ಕಾಂಗ್ರೆಸ್, ಯುವ ನಾಯಕರನ್ನು ಬೆಳೆಸಬೇಕಾಗಿದೆ ಎಂದು ಸಲಹೆ ನೀಡಿದ್ದಾರೆ.

ಡಾ.ಯತೀಂದ್ರ, ಡಾ.ವಿಜಯಕುಮಾರ್ ಅವರನ್ನು ಪರಿಷತ್‌ಗೆ ಆಯ್ಕೆ ಮಾಡಿ

ಮೈಸೂರು, ಮೇ 28(ಜಿಎ)–ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಲು ಸಹಕರಿಸಬೇಕೆಂದು ಈ ಪಿರಿಯಾಪಟ್ಟಣ, ಕೆ.ಆರ್.ನಗರ ಭೋವಿ ಸಮುದಾಯದ ಮುಖಂಡರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬೆಟ್ಟದಪುರದ ರವಿಕುಮಾರ್ ಮಾತನಾಡಿ, ಇವರಿಬ್ಬರೂ ಕಾಂಗ್ರೆಸ್ ಸಂಘಟನೆಗೆ ದುಡಿಯುತ್ತಿದ್ದಾರೆ. ಇವರ ಆಯ್ಕೆಯಿಂದಾಗಿ ಪಕ್ಷ ಈ ಭಾಗದಲ್ಲಿ ಇನ್ನಷ್ಟು ಬಲಗೊಳ್ಳಲಿದೆ. ಜೊತೆಗೆ ಭೋವಿ ಸಮುದಾಯವೂ ಈ ಇಬ್ಬರ ಬೆಂಬಲಕ್ಕಿದೆ. ಆದ್ದರಿಂದ ಇವರು ವಿಧಾನ ಪರಿಷತ್ ಪ್ರವೇಶಿಸಲು ಅನುವು ಮಾಡಿಕೊಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಿದ್ದಲಿಂಗಪುರ ಪ್ರವೀಣ್, ವೆಂಕಟೇಸ್, ಮಹೇಶ್, ಮೂರ್ತಿ ಉಪಸ್ಥಿತರಿದ್ದರು.

ಕೆ.ಸಾಲುಂಡಿ ಕಲುಷಿತ ನೀರು ಪ್ರಕರಣ ಸರ್ಕಾರಿ ಪ್ರಾಯೋಜಿತ ಕೊಲೆ

ಆಗಾಗ ಅವಘಡಗಳು ಸಂಭವಿಸುತ್ತಿದ್ದರೂ ಎಚ್ಚೆತ್ತುಕೊಳ್ಳದ ಸರ್ಕಾರ

ಮೈಸೂರು, ಮೇ 28(ಜಿಎ)–ಮೈಸೂರಿನ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಹಲವರು ಅಸ್ವಸ್ಥರಾಗಿ, ಓರ್ವ ಸಾವನ್ನಪ್ಪಿದ ಘಟನೆ ಸರ್ಕಾರಿ ಪ್ರಾಯೋಜಿತ ಕೊಲೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ ಸುಂದರ್ ಪ್ರೇಮ್‌ಕುಮಾರ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಆಗಸ್ಟ್‌ನಲ್ಲಿ ಚಿತ್ರದುರ್ಗ ನಗರಸಭೆಯ ಕಾವಾಡಿಗರ ಹಟ್ಟಿಯಲ್ಲಿ ಇದೇ ರೀತಿ ಕಲುಷಿತ ನೀರು ಸೇವಿಸಿ ಐವರು ಸಾವನ್ನಪ್ಪಿದ್ದರು. ಕೆಲವೇ ವಾರ ಹಿಂದೆ ವರುಣ ಕ್ಷೇತ್ರ ವ್ಯಾಪ್ತಿಯ ತಗಡೂರಲ್ಲಿಯೂ 110 ಜನ ವಾಂತಿ ಭೇದಿಯಿಂದ ಬಳಲಿದ್ದರು. ಈಗ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನಲ್ಲಿಯೂ ಇದೇ ರೀತಿ ಜನತೆ ಅಸ್ವಸ್ಥರಾದ ಬಗ್ಗೆ ವರದಿಯಾಗಿದೆ. ಈ ರೀತಿಯ ಅವಘಡಗಳು ನಡೆಯುತ್ತಿದ್ದರೂ ಸಂಬಂಧಿಸಿದ ಅಧಿಕಾರಿ ವರ್ಗ, ಗ್ರಾಪಂ ಸದಸ್ಯರು ಎಚ್ಚೆತ್ತುಕೊಂಡಿಲ್ಲ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಿ.ವೈ.ನಾಗರಾಜು, ರವಿಕುಮಾರ್, ರಾಜೇಗೌಡ ಉಪಸ್ಥಿತರಿದ್ದರು.

ಮೈಸೂರು ಸೈನ್ಸ್ ಫೌಂಡೇಷನ್‌ನಿಂದ ಬೀಜದ ಉಂಡೆ ತಯಾರಿಕಾ ಚಟುವಟಿಕೆ



ಮೈಸೂರು, ಮೇ 28– ಪ್ರತಿ ವರ್ಷ ಜೂನ್ 5ರಂದು ನಡೆಯುವ ಪರಿಸರ ದಿನಾಚರಣೆಯ ಪೂರ್ವಭಾವಿಯಾಗಿ ಸರಸ್ವತಿಪುರಂನ ಜ್ಞಾನೋದಯ ಪಿಯು ಕಾಲೇಜಿನಲ್ಲಿ ಮೈಸೂರು ಸೈನ್ಸ್ ಫೌಂಡೇಷನ್ ಸಹಯೋಗದಲ್ಲಿ ಪ್ರಾಕೃತಿಕ ಇತಿಹಾಸದ ಪ್ರಾದೇಶಿಕ ವಸ್ತು ಸಂಗ್ರಹಾಲಯದ ಹಿರಿಯ ಶಿಕ್ಷಣಾಧಿಕಾರಿ ಬಿ.ಎಸ್. ಯೋಗೇಂದ್ರ ಅವರ ಮಾರ್ಗದರ್ಶನದಲ್ಲಿ ಬೀಜದ ಉಂಡೆ ತಯಾರಿಕಾ ಚಟುವಟಿಕೆಯನ್ನು ಆಯೋಜಿಸಲಾಗಿತ್ತು.

ಯೋಗೇಂದ್ರ ಅವರು ಬೀಜದ ಉಂಡೆ ಸಿದ್ಧಪಡಿಸುವ ಪ್ರಕ್ರಿಯೆ ಮತ್ತು ಬೀಜದ ಉಂಡೆಗಳ ಮಹತ್ವದ ಕುರಿತು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು. ಎಲ್ಲಿ ನಾವು ಗಿಡಗಳನ್ನು ನೆಟ್ಟು ನೀರು ಹಾಕಿ ಪೋಷಿಸಲು ಸಾಧ್ಯವಿಲ್ಲವೋ ಅಂತಹ ಸ್ಥಳಗಳಲ್ಲಿ ಈ ಬೀಜದ ಉಂಡೆ ಗಳು ಉಪಯೋಗಕ್ಕೆ ಬರುತ್ತವೆ. ಬೀಜದ ಉಂಡೆಗಳನ್ನು ತಯಾರಿಸಿ ಇಟ್ಟುಕೊಂಡು ಮಳೆಗಾಲದ ಸಂದರ್ಭದಲ್ಲಿ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಇವುಗಳನ್ನು ಎಸೆಯುವುದರ ಮೂಲಕ ಅಲ್ಲಿ ಮರಗಳು ಬೆಳೆಯುವಂತೆ ಮಾಡಬಹುದು ಎಂದು ತಿಳಿಸಿದರು.

ಬಳಿಕ ವಿದ್ಯಾರ್ಥಿಗಳು ಒಂದು ಸಾವಿರಕ್ಕೂ ಹೆಚ್ಚು ಬೀಜದ ಉಂಡೆ ತಯಾರಿಸುವ ಮೂಲಕ ಖುಷಿಪಟ್ಟರು. ಇವುಗಳನ್ನು ಪರಿಸರ ದಿನದಂದು ಪ್ರಕೃತಿ ಉದ್ಯಾನವನದಲ್ಲಿ ಹರಡಲಾಗುತ್ತದೆ ಎಂದು ಕಾರ್ಯಕ್ರಮ ಸಂಯೋಜಕ ವೆಂಕಟೇಶ್ ತಿಳಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪದ್ಮರವಿ, ಸೈನ್ಸ್ ಕ್ಲಬ್ ಸಂಯೋಜಕ ಶರತ್, ಎಲ್ಲಾ ಉಪನ್ಯಾಸಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

— ಪೊಲೀಸರ ವಿಶೇಷ ಕಾರ್ಯಾಚರಣೆ —

ಮೈಸೂರಲ್ಲಿ ಒಂದೇ ದಿನ 7,336 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲು



ಮೈಸೂರಿನ ಬಂಡೀಪಾಳ್ಯ ಎಪಿಎಂಸಿ ಮಾರುಕಟ್ಟೆ ಬಳಿ ನಂಜನಗೂಡು ರಸ್ತೆಯಲ್ಲಿ ವಾಹನ ತಡೆದು ತಪಾಸಣೆ ನಡೆಸುತ್ತಿರುವುದು.

ಮೇ 27ರಂದು ನಡೆದ ವಿಶೇಷ ತಪಾಸಣೆ ವೇಳೆ ದಾಖಲಿಸಿದ ಪ್ರಕರಣಗಳು

ಕ್ರ.ಸಂ.	ಸಂಚಾರ ನಿಯಮ ಉಲ್ಲಂಘನೆ	ದಾಖಲಾದ ಪ್ರಕರಣಗಳು
1	ಟ್ರಿಪಲ್ ರೈಡಿಂಗ್	169
2	ಹೆಲ್ಮೆಟ್ ಧರಿಸದ ಪ್ರಕರಣಗಳು	6680
3	ನಂಬರ್ ಪ್ಲೇಟ್ ಇಲ್ಲದ ವಾಹನಗಳು	113
4	ಸರಕು ಸಾಗಣೆ ವಾಹನದಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವುದು	22
5	ಡ್ರಂಕ್ ಅಂಡ್ ಡ್ರೈವ್	33
	ಒಟ್ಟು	7,336

ಮೈಸೂರು, ಮೇ 28(ಆರ್‌ಕೆ)–ಮೈಸೂರು ಸಂಚಾರ ಪೊಲೀಸರು ಸೋಮವಾರ ನಡೆಸಿದ ವಿಶೇಷ ತಪಾಸಣಾ ಕಾರ್ಯಾಚರಣೆಯಲ್ಲಿ ಮೈಸೂರು ನಗರದಾದ್ಯಂತ ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಸವಾರರ ವಿರುದ್ಧ 7,336 ಪ್ರಕರಣ ದಾಖಲಿಸಿ ದಂಡ ವಿಧಿಸಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನಿರ್ದೇಶನದಂತೆ ಡಿಸಿಪಿಗಳಾದ ಎಸ್.ಜಾಹ್ನವಿ, ಎಂ.ಮುತ್ತುರಾಜ್ ಮಾರ್ಗದರ್ಶನದಲ್ಲಿ ಮೈಸೂರಿನ ಎಲ್ಲಾ ವಿಭಾಗಗಳ ಎಸಿಪಿಗಳು, ಎಲ್ಲಾ ಸಿವಿಲ್ ಮತ್ತು ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ಸ್ ಹಾಗೂ ಸಿಬ್ಬಂದಿ ಸೋಮವಾರ ಬೆಳಗ್ಗೆಯಿಂದ ಮಧ್ಯರಾತ್ರಿವರೆಗೂ ವಾಹನಗಳ ತಪಾಸಣೆ ನಡೆಸಿದರು.

ವಿಶೇಷ ತಪಾಸಣಾ ಕಾರ್ಯಾಚರಣೆಗೆ ಕಮಾಂಡೋ ಪೊಲೀಸ್ ಸಿಬ್ಬಂದಿಗಳನ್ನೂ ಬಳಸಿಕೊಳ್ಳಲಾಯಿತು. ಇತ್ತೀಚೆಗೆ ಪೊಲೀಸರು ಲೋಕಸಭಾ ಸಾರ್ವತ್ರಿಕ ಚುನಾವಣೆ, ಗಣ್ಯ ವ್ಯಕ್ತಿಗಳ ಬಂದೋಬಸ್ತ್ ಕರ್ತವ್ಯದಲ್ಲಿ ನಿರತರಾಗಿದ್ದರಿಂದ ಜನರು ವ್ಯಾಪಕವಾಗಿ ಸಂಚಾರ ನಿಯಮ ಉಲ್ಲಂಘಿಸಿ ವಾಹನ ಚಾಲನೆ ಮಾಡುತ್ತಿದ್ದರು. ಅದರಿಂದ ಅಲ್ಲಲ್ಲಿ ರಸ್ತೆ ಅಪಘಾತಗಳಾಗುತ್ತಿದ್ದು, ಸಾವು–ನೋವುಗಳು ಸಂಭವಿಸುತ್ತಿದ್ದವು. ಅಲ್ಲದೇ, ಕಳವು, ಕೊಲೆ, ಗಲಭೆ, ಹಲ್ಲೆಯಂತಹ ಅಪರಾಧ ಪ್ರಕರಣಗಳೂ ಮೈಸೂರಲ್ಲಿ ಹೆಚ್ಚಾಗಿದ್ದವು. ಚುನಾವಣೆ ಮುಕ್ತಾಯಗೊಂಡ ಬಳಿಕ ಇದೀಗ ಪೂರ್ಣ ಪ್ರಮಾಣದಲ್ಲಿ ವಾಹನಗಳ ತಪಾಸಣಾ ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಸೋಮವಾರ ಒಂದೇ ದಿನ 7,336 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಿಸಿ ವಾಹನಗಳನ್ನು ವಶಕ್ಕೆ ಪಡೆದು ದಂಡ ವಸೂಲಿ ಮಾಡಿದ್ದಾರೆ.

ದ್ವಿಚಕ್ರ ವಾಹನದಲ್ಲಿ ಮೂವರು ಸವಾರಿ ಮಾಡುವುದು, ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆ, ಮೊಬೈಲ್‌ನಲ್ಲಿ ಮಾತನಾಡಿಕೊಂಡು ವಾಹನ ಚಾಲನೆ, ವ್ಹೀಲಿಂಗ್, ಸರಕು ಸಾಗಣೆಯಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವುದು, ಮದ್ಯಪಾನ ಮಾಡಿ ವಾಹನ ಚಾಲನೆಯಂತಹ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಹೆಲ್ಮೆಟ್ ಧರಿಸದವರು, ಅತೀ ವೇಗ ಮತ್ತು ಅಜಾಗರೂಕ ಚಾಲನೆ, ಟ್ರಿಪಲ್ ರೈಡಿಂಗ್, ಒನ್ ವೇ ಉಲ್ಲಂಘಿಸಿ ಚಾಲನೆ, ನಂಬರ್ ಪ್ಲೇಟ್ ಇಲ್ಲದಿರುವುದು, ದೋಷಪೂರಿತ ನಂಬರ್ ಪ್ಲೇಟ್, ಭಾರಿ ಶಬ್ದ ಬರುವ ಸೈಲೆನ್ಸರ್ ಅಳವಡಿಸಿಕೊಂಡು ವಾಹನ ಚಾಲನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಸ್ಥಳದಲ್ಲೇ ದಂಡ ವಸೂಲಿ ಮಾಡಲಾಯಿತು.

ಇನ್ಶೂರೆನ್ಸ್ ಚಾಲ್ತಿಯಲ್ಲಿಲ್ಲದ, ಕುಡಿದು ವಾಹನ ಚಾಲನೆ (ಡ್ರಂಕ್ ಅಂಡ್ ಡ್ರೈವ್) ಪ್ರಕರಣದಲ್ಲಿ ವಾಹನಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಿ ನೋಟಿಸ್ ಜಾರಿ ಮಾಡಿದರು. ಇಂದು ಕೆಲವರು ನ್ಯಾಯಾಲಯಕ್ಕೆ ಹೋಗಿ ದಂಡ ಪಾವತಿಸಿ ಪೊಲೀಸ್ ಠಾಣೆಗಳಿಂದ ವಾಹನಗಳನ್ನು ಬಿಡುಗಡೆ ಮಾಡಿಸಿದರು.

ಮೈಸೂರು ನಗರದಾದ್ಯಂತ ಪೊಲೀಸರು 500ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುತ್ತಿದ್ದಂತೆಯೇ ಕೆಲ ವಾಹನ ಮಾಲೀಕರು, ವಾಹನಗಳಿಗೆ ದೋಷಪೂರಿತ ನಂಬರ್ ಪ್ಲೇಟ್ ಹಾಕಿಕೊಂಡು ಓಡಾಡುತ್ತಾ, ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದರು. ನಂಬರ್ ಪ್ಲೇಟ್ ಇಲ್ಲದ ಹಾಗೂ ದೋಷಪೂರಿತ ನಂಬರ್ ಪ್ಲೇಟ್ ಹಾಕಿಕೊಂಡು ವಾಹನದಲ್ಲಿ ಅಪರಾಧ ಪ್ರಕರಣಗಳನ್ನು ಎಸಗುತ್ತಿದ್ದರು. ಅದಕ್ಕೆ ಪೊಲೀಸರು ವಾಹನಗಳ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಿದ್ದಾರೆ.

ಪ್ರಾಣ ರಕ್ಷಣೆಗೆ ಸಂಚಾರ ನಿಯಮ ಪಾಲಿಸಿ

ಮೈಸೂರು: ನಿಮ್ಮ ಪ್ರಾಣ ರಕ್ಷಿಸಿಕೊಳ್ಳಿ, ಹಾಗೆಯೇ ಇತರರ ಜೀವ ಉಳಿಸಲು ತಪ್ಪದೇ ಎಲ್ಲರೂ ಸಂಚಾರ ನಿಯಮವನ್ನು ಪಾಲಿಸಿ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.


ಬಿ.ರಮೇಶ್

ಸಂಚಾರ ನಿಯಮ ಉಲ್ಲಂಘನೆಯಾಗದಂತೆ ನಿಗಾ ವಹಿಸಿ, ಅಪಘಾತಗಳನ್ನು ತಡೆಗಟ್ಟಿ, ರಸ್ತೆ ಸಾವು–ನೋವುಗಳನ್ನು ತಡೆಯಬೇಕೆಂಬ ಉದ್ದೇಶದಿಂದ ಮೈಸೂರಲ್ಲಿ ಆಗಿಂದಾಗ್ಗೆ ವಿಶೇಷ ಕಾರ್ಯಾಚರಣೆ ಮಾಡುತ್ತಿದ್ದೇವೆಯೇ ಹೊರತು, ದಂಡ ವಸೂಲಿ ಮಾಡುವುದಕ್ಕಲ್ಲ ಎಂದು ಅವರು ಹೇಳಿದ್ದಾರೆ.

ಹೊರಗೆ ಹೋದವರು ಮನೆಗೆ ಸುರಕ್ಷಿತವಾಗಿ ಬರುತ್ತಾರೆಂದು ಇಡೀ ಕುಟುಂಬ ಸದಸ್ಯರು ಕಾಯುತ್ತಿರುತ್ತಾರೆ. ನಿಮ್ಮನ್ನು ನಂಬಿ ಜೀವಿಸುತ್ತಿರುವವರಿಗೆ ನೀವು ಆಧಾರ ಸ್ತಂಭವಾಗಿರುತ್ತೀರಿ. ರಸ್ತೆ ಅಪಘಾತದಲ್ಲಿ ಸಾವು–ನೋವುಗಳಾದರೆ, ಅವಲಂಬಿತರು ಜೀವನಪೂರ್ತಿ ನರಳುವಂತಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಅಪಘಾತ, ಅಪರಾಧ ಪ್ರಕರಣಗಳನ್ನು ನಿಯಂತ್ರಿಸುವ ಸಲುವಾಗಿ ಮೈಸೂರು ನಗರದಾದ್ಯಂತ ಹೆಚ್ಚುವರಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ. ಕ್ಯಾಮರಾ ಕಣ್ಣಿನಿಂದ ತಪ್ಪಿಸಿಕೊಳ್ಳಲು ಕೆಲವರು ನಂಬರ್ ಪ್ಲೇಟ್ ಹಾಕದೇ, ಇಲ್ಲವೇ ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿಕೊಂಡು ಅಪರಾಧ ಕೃತ್ಯ ನಡೆಸುವುದು ಕಂಡುಬಂದ ಹಿನ್ನೆಲೆಯಲ್ಲಿ ನಾವು ವಿಶೇಷ ತಪಾಸಣೆ, ಕಾರ್ಯಾಚರಣೆ ಮಾಡುತ್ತಿದ್ದೇವೆ. ವಾಹನ ತಡೆದು ತೊಂದರೆ ಕೊಡುವುದು, ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡುವುದು ನಮ್ಮ ಉದ್ದೇಶವಲ್ಲ. ಆದರೆ, ಎಷ್ಟೇ ಅರಿವು ಮೂಡಿಸಿದರೂ, ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಅನಿವಾರ್ಯವಾಗಿ ವಾಹನಗಳ ತಪಾಸಣೆ ಮಾಡಬೇಕಾಗಿದ್ದು, ಸಹಕರಿಸುವಂತೆ ಬಿ. ರಮೇಶ್ ಹೇಳಿದ್ದಾರೆ.

ಅರ್ಜುನನ ಹೆಸರಲ್ಲಿ ಯಾರನ್ನು ವಂಚಿಸಿಲ್ಲ


ತಮ್ಮ ಮೇಲಿನ ಆರೋಪ ನಿರಾಕರಿಸಿದ ಹೆಚ್.ಡಿ.ಕೋಟೆಯ ನವೀನ್

ತಾತ್ಕಾಲಿಕ ಸಮಾಧಿ ನಿರ್ಮಿಸಲು ಮುಂದಾಗಿದ್ದ, ಹಣದ ಬಗ್ಗೆ ದಾಖಲಾತಿ ಬಿಡುಗಡೆ

ಮೈಸೂರು, ಮೇ 28(ಜಿಎ)–ಅಂಬಾರಿ ಆನೆ ಅರ್ಜುನನ ಮೇಲಿನ ಪ್ರೀತಿಯಿಂದ ತಾತ್ಕಾಲಿಕ ಸಮಾಧಿ ನಿರ್ಮಿಸಲು ಮುಂದಾಗಿದ್ದೆ, ಹೊರತು ಅರ್ಜುನ ಆನೆ ಹೆಸರಲ್ಲಿ ಯಾರನ್ನು ವಂಚಿಸಿಲ್ಲ ಎಂದು ಹೆಚ್.ಡಿ.ಕೋಟೆ ನಿವಾಸಿ ಹೆಚ್.ಎನ್.ನವೀನ್ ತಮ್ಮ ಮೇಲಿನ ಆರೋಪವನ್ನು ನಿರಾಕರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಜುನ ಆನೆ ಹೆಸರಲ್ಲಿ ವಂಚಿಸಲಾಗುತ್ತಿದೆ ಎಂಬ ಆರೋಪಗಳಿಗೆ ಸ್ಪಷ್ಟನೆ ನೀಡಿ ದಾಖಲೆ ಬಿಡುಗಡೆ ಮಾಡಿದರು.

ತಾವು ಚಿಕ್ಕಂದಿನಿಂದಲೂ ಅರ್ಜುನ ಆನೆ ಜೊತೆಗೆ ಬಾಂಧವ್ಯ ಹೊಂದಿದ್ದರಿಂದಾಗಿ ಹಾಗೂ ದೂರದ ಪ್ರದೇಶದಲ್ಲಿ ಅದು ಸಾವನ್ನಪ್ಪಿದ ಕಾರಣ ಜನಮನದಿಂದ ಮರೆಯಾಗುತ್ತದೆ ಎಂಬ ಕಾರಣಕ್ಕಾಗಿ ಒಂದು ವಾಟ್ಸಪ್ ಗ್ರೂಪ್ ರಚಿಸಿದ್ದೆ. ಅದರಲ್ಲಿ ಇಂತಹುದೇ ಆಸಕ್ತಿಯ ಸುಮಾರು 900 ಮಂದಿ ಸದಸ್ಯರಾದರು ಎಂದರು.



ನಂತರ ಅರ್ಜುನನ ಬಗ್ಗೆ ಚರ್ಚೆ ನಡೆಯುವ ವೇಳೆ ನೀವೇ ಏಕೆ ಮುಂದಾಳತ್ವ ವಹಿಸಿ ಸಮಾಧಿ ನಿರ್ಮಿಸಬಾರದೆಂಬ ಸಲಹೆ ಬಂದವು. ಈ ನಿಟ್ಟಿನಲ್ಲಿ ತಾವು ಮುಂದಾದಾಗ ಕೆಲವರು ಹಣದ ನೆರವಿನ ವಿಷಯ ಎತ್ತಿದರು. ತಾವು ಇದಕ್ಕೆ ಸಮ್ಮತಿಸಲಿಲ್ಲ. ನಂತರ ನಟ ದರ್ಶನ್ ಅವರು ಸಮಾಧಿ ನಿರ್ಮಿಸಲು ಅಗತ್ಯವಾದ ಕಲ್ಲು ನೀಡಲಿದ್ದಾರೆ ಎಂದು ಹೇಳುವ ಮೂಲಕ ರಾಮನಗರದ ಸಂಪತ್ತು ಎಂಬುವರು ಕಲ್ಲುಗಳನ್ನು ತಂದೊಪ್ಪಿಸಿದರು. ಈ ನಂತರ ಸಮಾಧಿ ನಿರ್ಮಾಣಕ್ಕೆಂದು ಕೆಲವರು ಸ್ವತಃ ತಾವಾಗಿಯೇ ಹಣ ಕಳುಹಿಸಲು ಆರಂಭಿಸಿದರು. ಇದರ ಪ್ರತಿಯೊಂದೂ ಮಾಹಿತಿ ಸ್ಕ್ರೀನ್ ಶಾಟ್ ಮೂಲಕ ಎಲ್ಲರಿಗೂ ಗ್ರೂಪ್‌ನಲ್ಲಿ ತಿಳಿದಿದೆ ಎಂದರು.

ಅರಣ್ಯ ಇಲಾಖೆ ಅಧಿಕಾರಿಗಳ ಬಳಿ ಅನುಮತಿ ಕೋರಿದಾಗ ಮೌಖಿಕವಾಗಿ ಅನುಮತಿ ನೀಡಿದರು. ತದನಂತರ ಅರಣ್ಯ ಇಲಾಖೆಯವರು ನೀವು ನಿರ್ಮಿಸುವುದನ್ನು ನಿಲ್ಲಿಸಿ, ನಾವೇ ನಿರ್ಮಿಸುತ್ತೇವೆ. ಹೀಗಾಗಿ ಕಲ್ಲನ್ನು ವಾಪಸು ಕೊಂಡೊಯ್ಯಿರಿ ಅಥವಾ ಅದರ ಹಣ ಪಡೆಯಿರಿ ಎಂದು ತಿಳಿಸಿ, ತಮ್ಮ ಖಾತೆಗೆ ಸುಮಾರು 30 ಸಾವಿರ ಜಮಾ ಮಾಡಿದ್ದಾರೆ. ಈ ಎಲ್ಲರದ ಮಾಹಿತಿ ಗ್ರೂಪ್‌ನಲ್ಲಿ ಶೇರ್ ಆಗಿದೆ ಎಂದು ವಿವರಿಸಿದರು.

ಈಗ ಬ್ಯಾಂಕ್ ಖಾತೆಯಲ್ಲಿ ಒಟ್ಟು 80 ಸಾವಿರ ಮಾತ್ರ ಜಮಾ ಆಗಿದ್ದು, ನಾನು ಅರ್ಜುನನ ಹೆಸರಿನಲ್ಲಿ ಯಾರನ್ನೂ ವಂಚಿಸಿಲ್ಲ. ಬೇಕಿದ್ದರೆ ತಮ್ಮ ಬ್ಯಾಂಕ್ ಖಾತೆ ಯಾರು ಬೇಕಾದರೂ ಪರಿಶೀಲಿಸಬಹುದಾಗಿದೆ ಎಂದು ಬ್ಯಾಂಕ್ ಸ್ಟೇಟ್‌ಮೆಂಟ್ ಪ್ರದರ್ಶಿಸಿ, ಕೆಲವರು ಪ್ರಚಾರದ ಗೀಳಿನಿಂದಾಗಿ ತಮ್ಮ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಯಾರು ಬೇಕಾದರೂ ಬಂದು ಪರಿಶೀಲಿಸಬಹುದಾಗಿದೆ. ಬಾಕಿ ಉಳಿದಿರುವ ಹಣವನ್ನು ಏನು ಮಾಡಬೇಕೆಂದು ಗ್ರೂಪ್‌ನ ಸದಸ್ಯರೊಂದಿಗೆ ಚರ್ಚಿಸಿ ನಿರ್ಧರಿಸಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಚ್.ಡಿ.ಕೋಟೆಯ ಸಿದ್ದಪ್ಪಾಜಿ, ಚೇತನ್ ಉಪಸ್ಥಿತರಿದ್ದರು.

ಎಲ್ಲಾ ನೇಮಕಾತಿಗೆ ಹೈದರಾಬಾದ್–ಕರ್ನಾಟಕ ಮೀಸಲಾತಿ ಅನ್ವಯಿಸುವುದಕ್ಕೆ ಆಕ್ಷೇಪ

ಸರ್ಕಾರದ ಈ ನಿರ್ಧಾರ ಖಂಡಿಸಿ ಜೂ.1ರಂದು ಬೆಂಗಳೂರಲ್ಲಿ ಪ್ರತಿಭಟನೆ

ಮೈಸೂರು, ಮೇ 28(ಜಿಎ)–ಸಂವಿಧಾನದ ತಿದ್ದುಪಡಿ 371ಜೆನಲ್ಲಿ ಎಲ್ಲಾ ಹುದ್ದೆಗಳಿಗೆ ಹೈದರಾಬಾದ್–ಕರ್ನಾಟಕ ಭಾಗದ ಮೀಸಲಾತಿ ರೂಪಿಸಲು ಅವಕಾಶವಿಲ್ಲದಿದ್ದರೂ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಹೈದರಾಬಾದ್ ಕೋಟಾವನ್ನು ನಿಗದಿಪಡಿಸಿರುವ ಆದೇಶವನ್ನು ವಿರೋಧಿಸಿ ಹಸಿರು ಪ್ರತಿಷ್ಠಾನದ ವತಿಯಿಂದ ಜೂ.1ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ.ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ನಿಯಮಾವಳಿಗಳನ್ನು ರೂಪಿಸುವಾಗ ಸಂವಿಧಾನಾತ್ಮಕ ಮತ್ತು ಇತರೆ ಹಕ್ಕುಗಳಿಗೆ ತೊಂದರೆಯಾಗದಂತೆ ರೂಪಿಸಬೇಕಾಗುತ್ತದೆ. ಆದರೆ, ಹೈದರಾಬಾದ್–ಕರ್ನಾಟಕ ಮೀಸಲಾತಿ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವಾಗ ಸಂವಿಧಾನದ 98ನೇ ತಿದ್ದುಪಡಿಗೆ ವಿರುದ್ಧವಾಗಿ ರೂಪಿಸಿ, ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಹೈದರಾಬಾದ್–ಕರ್ನಾಟಕ ಕೋಟಾವನ್ನು ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ರಾಜ್ಯಮಟ್ಟದ ವ್ಯಾಪ್ತಿಗೆ ಬಾರದ ಬಿಡಿಎ, ಬಿಬಿಎಂಪಿ ಸೇರಿದಂತೆ ಬೆಂಗಳೂರಿನಲ್ಲಿರುವ ಇತರ ಕಚೇರಿಗಳಲ್ಲಿಯೂ ಹೈದರಾಬಾದ್–ಕರ್ನಾಟಕ ಕೋಟಾವನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ. ಇದರಿಂದ ಸರ್ಕಾರದಲ್ಲಿ ನೇಮಕಾತಿ ವೇಳೆ ಕರ್ನಾಟಕದಲ್ಲಿ ಜಾರಿಯಲ್ಲಿರುವ ಮೀಸಲಾತಿ ಅನ್ವಯ ಹೈದರಾಬಾದ್–ಕರ್ನಾಟಕ ನೌಕರರನ್ನು ಸಹ ನೇಮಕಾತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು.

ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, ಹೈದರಾಬಾದ್–ಕರ್ನಾಟಕ ಕೋಟಾವನ್ನು ನಿಗದಿಪಡಿಸಿರುವ ಆದೇಶದಿಂದ ಕರ್ನಾಟಕದ ಇತರ ಭಾಗದಲ್ಲಿರುವ ಅಧಿಕಾರಿಗಳಿಗೆ ಬಡ್ತಿ ಸಿಗುತ್ತಿಲ್ಲ. ರಾಜ್ಯದ ಮುಖ್ಯಕಾರ್ಯದರ್ಶಿಯ ಎಡವಟ್ಟಿನಿಂದ ಈ ರೀತಿ ಆದೇಶ ಅನುಷ್ಠಾನವಾಗಿದೆ. ಅಲ್ಲಿರುವವರಿಗೆ ಇಲ್ಲಿ ಕೆಲಸ ನೀಡುವ ಬದಲು ಅಲ್ಲಿ ಕೈಗಾರಿಕೆಗಳನ್ನು ಸೃಷ್ಟಿಸಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಲಕ್ಷ್ಮಿ ಶ್ರೀನಿವಾಸ್, ಮಂಜುನಾಥ್, ವಿಜೇಂದ್ರ, ಹೆಚ್.ಎಲ್.ಯಮುನಾ ಉಪಸ್ಥಿತರಿದ್ದರು.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಮೇ 28–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 30ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ನಡೆಯಲಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಮೇ 28–ಪ್ರತಿಭೆಗೆ ತಕ್ಕ ಪುರಸ್ಕಾರ ಮತ್ತು ಪ್ರೋತ್ಸಾಹದ ಗೌರವಾದರವನ್ನು ನೀಡುವ ಸದುದ್ದೇಶದ ಹಿನ್ನೆಲೆಯಲ್ಲಿ ಟೀಂ ಮೈಸೂರು ತಂಡದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕೂ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಮಾರಿಯಮ್ಮನ ಸಮುದಾಯ ಭವನದಲ್ಲಿ ಆಯೋಜಿಸಲಾಗಿತ್ತು.

ಎಸ್‌ಎಸ್‌ಎಲ್‌ಸಿಯ 30, ಪಿಯುಸಿಯ 20 ವಿದ್ಯಾರ್ಥಿಗಳಿಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ಮತ್ತು ಇತರೆ ಗಣ್ಯರು ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಈ ವೇಳೆ ಶಾಸಕ ಶ್ರೀವತ್ಸ ಮಾತನಾಡಿ, ಪ್ರತಿಭೆಗೆ ಮನ್ನಣೆ ನೀಡುವ ಇಂತಹ ವಿಶಿಷ್ಟ ಸೇವಾ ಕಾರ್ಯ ಮತ್ತು ನಿಸ್ವಾರ್ಥ ಸಾಮಾಜಿಕ ಸೇವೆಯನ್ನು ಸಲ್ಲಿಸುತ್ತಿರುವ ಟೀಂ ಮೈಸೂರಿನ ಕಾರ್ಯವೈಖರಿಗಳ ಬಗ್ಗೆ ಸಂತಸ ವ್ಯಕ್ತಪಡಿಸಿದರು.



ಮುಂದುವರಿದು, 7,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಒಳ್ಳೆಯ ಫಲಿತಾಂಶ ಬರುವುದಿಲ್ಲ ಎಂಬ ಭಾವನೆ ಇತ್ತು. ಆದರೆ ಇತ್ತೀಚೆಗೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಸಹ ಅಲ್ಲಿನ ಪ್ರಾಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದ ಉತ್ತಮವಾದ ಫಲಿತಾಂಶ ಬರುತ್ತಿದೆ. ನಾನು ಅಶೋಕಪುರಂನಲ್ಲಿರುವ ಸರ್ಕಾರಿ ಶಾಲೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಪ್ರತಿ ವರ್ಷ 10 ಸಾವಿರಗಳನ್ನು ನನ್ನ ವೈಯಕ್ತಿಕ ಹಣದಿಂದ ನೀಡಲು ಪ್ರಾರಂಭಿಸಿದ್ದೇನೆ. ನಾನು ಶಾಸಕನಾದ ನಂತರ ಸರ್ಕಾರಿ ಶಾಲಾ ಕಾಲೇಜುಗಳ ಮುಖ್ಯಸ್ಥರೊಂದಿಗೆ ಸಭೆಗಳನ್ನು ಮಾಡಿ, ಅಲ್ಲಿಯ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸಲು ಏನೇನು ಕ್ರಮ ಕೈಗೊಳ್ಳಬೇಕು. ಒಳ್ಳೆಯ ಶಿಕ್ಷಣವನ್ನು ನೀಡಬೇಕೆಂದು ಅಧಿಕಾರಿಗಳಿಗೆ ವಿನಂತಿಸಿದ್ದೆ. ಮುಖ್ಯಮಂತ್ರಿಗಳು ಸಹ ಸರ್ಕಾರಿ ವಿದ್ಯಾಸಂಸ್ಥೆಗಳ ಮುಖ್ಯಸ್ಥರ ಸಭೆಗಳಲ್ಲಿ ಈ ವಿಚಾರವನ್ನು ಇಟ್ಟಿದ್ದ ಫಲವಾಗಿ, ಈ ಬಾರಿ ಮೈಸೂರಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಒಳ್ಳೆಯ ಮಟ್ಟಕ್ಕೆ ಏರಿದೆ ಎಂದು ಹೇಳಿದರು.

ಪ್ರೊ. ಶ್ರೀಕಂಠಸ್ವಾಮಿ, ನಗರಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಛಾಯಾದೇವಿ, ಕಾಂಗ್ರೆಸ್ ಮುಖಂಡ ಮಂಜಣ್ಣ, ನಾಮನಿರ್ದೇಶಿತ ಪಾಲಿಕೆ ಸದಸ್ಯ ಆರ್.ಎಚ್ ಕುಮಾರ್, ಬಿಜೆಪಿ ಹಿರಿಯ ಮುಖಂಡ ಸುಂದರಮೂರ್ತಿ, ಕಾಂಗ್ರೆಸ್ ಮುಖಂಡ ಧರ್ಮಕುಮಾರ್, ಬಿಜೆಪಿ ಮಹಿಳಾ ಮುಖಂಡರಾದ ಸುಗುಣ ಚಂದ್ರಶೇಖರ್, ಕಾರ್ಯಕ್ರಮದ ಸಂಯೋಜಕ ಗೋಕುಲ್ ಗೋವರ್ಧನ್, ಸಹ ಸಂಯೋಜಕ ಹರೀಶ್, ಸಹಸಂಚಾಲಕರಾದ ಯಶ್ವಂತ್, ಕಿರಣ್ ಜೈ ರಾಮೆಗೌಡ, ಹಿರಿಯಣ್ಣ, ಅನಿಲ್ ಜೈನ್, ಮುರಳಿ, ರಾಮಪ್ರಸಾದ್, ದಾಮೋದರ್, ಮನೋಹರ, ಯತೀಶ್, ಹರೀಶ್ ಶೆಟ್ಟಿ, ಅಮರ್, ಬಾಲಕೃಷ್ಣ, ಸುನಿಲ್, ಗಣೇಶ್, ಶೇಖರ್ ಬ್ಯಾಟರಿ, ರಾಘವೇಂದ್ರ, ಪರಮೇಶ, ಮೋಹನ್, ಸಚಿನ್, ಕೃಷ್ಣ, ರಘುಕಾಶಿ, ಮಂಜು, ಜಯಂತ್, ವೈಶಾಖ್, ಶಿವಪ್ರಸಾದ್, ಸಹನಾ, ಶಾಂತಕುಮಾರಿ, ಮಂಜುಳಾ, ಉಮಾ, ಜ್ಯೋತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

43 ಸಾವಿರ ಅತಿಥಿ ಉಪನ್ಯಾಸಕರ ಭರ್ತಿಗೆ ಕ್ರಮ

● ಹಳೇ ಪಿಂಚಣಿ ವ್ಯವಸ್ಥೆ ಜಾರಿ ● ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ



ಮಡಿಕೇರಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿದರು. ಶಾಸಕ ಡಾ.ಮಂತರ್‌ಗೌಡ, ಆಯನೂರು ಮಂಜುನಾಥ್ ಇದ್ದರು.

ಮಡಿಕೇರಿ, ಮೇ 28–ರಾಜ್ಯದಲ್ಲಿ 43 ಸಾವಿರ ಅತಿಥಿ ಉಪನ್ಯಾಸಕರ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ವಿಧಾನ ಪರಿಷತ್‌ನ ನೈರುತ್ಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ.ಮಂಜುನಾಥ್ ಕುಮಾರ್ ಮತ್ತು ಪದವೀಧರರ ಕ್ಷೇತ್ರದ ಅಭ್ಯರ್ಥಿ ಆಯನೂರು ಮಂಜುನಾಥ್ ಅವರ ಪರ ನಗರದ ಪಕ್ಷದ ಕಚೇರಿಯಲ್ಲಿ ಪ್ರಮುಖರು ಮತ್ತು ಕಾರ್ಯಕರ್ತರ ಸಭೆ ನಡೆಸಿ, ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರರ ನೂತನ ಪಿಂಚಣಿ ವ್ಯವಸ್ಥೆಯನ್ನು ಬದಲಿಸಿ ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಲಾಗುವುದು. ಲೋಕಸಭಾ ಚುನಾವಣೆ ನೀತಿ ಸಂಹಿತೆ ಮುಕ್ತಾಯವಾದ ಬಳಿಕ ಮುಖ್ಯಮಂತ್ರಿಗಳು ಈ ಕುರಿತು ಕ್ರಮ ಕೈಗೊಳ್ಳಲಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಸಂಪೂರ್ಣ ಪಾರದರ್ಶಕವಾಗಿ ನಡೆಸಲಾಗಿದೆ. ಇದೇ ಮಾದರಿಯಲ್ಲಿ ರಾಜ್ಯದ ವಿವಿಧೆಡೆ 600 ಕೆಪಿಎಸ್ ಶಾಲೆಗಳನ್ನು ತೆರೆಯಲು ಕೂಡ ನಿರ್ಧರಿಸಲಾಗಿದೆ. ಇದಕ್ಕೆ 2 ಸಾವಿರ ಕೋಟಿ ರೂ. ಅಗತ್ಯವಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇದರ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಈ ಯೋಜನೆಯನ್ನು ಮುಂದಿನ ವರ್ಷದಿಂದಲೇ ಕೈಗೆತ್ತಿಕೊಳ್ಳಲಾಗುವುದು ಎಂದರು. ಪದವೀಧರರಿಗೆ ಯುವನಿಧಿ ಮಾದರಿಯಲ್ಲಿ ರಾಷ್ಟ್ರ ಮಟ್ಟದಲ್ಲೇ ಯೋಜನೆ ಜಾರಿಯಾಗಲಿದೆ.

ಶಿಕ್ಷಕರು ಮತ್ತು ಪದವೀಧರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಅರಿವಿದ್ದು, ಹಂತ ಹಂತವಾಗಿ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಆದ್ದರಿಂದ ಶಿಕ್ಷಕರು ಮತ್ತು ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ. ಮಂಜುನಾಥ್ ಕುಮಾರ್ ಮಾತನಾಡಿ, ಶಿಕ್ಷಣ ಕ್ಷೇತ್ರದ ಗುಣಮಟ್ಟ ಹೆಚ್ಚಳಕ್ಕೆ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೆಚ್ಚು ಹಣ ಮೀಸಲಿಟ್ಟಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬದಲಿಸಿ, ರಾಜ್ಯ ಶಿಕ್ಷಣ ನೀತಿ ಜಾರಿಗೂ ಮುನ್ಸೂಚನೆ ಸಿಕ್ಕಿದೆ ಎಂದು ಹೇಳಿದರು.

ಹಿಂದೆ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸಿದ್ದವರು ಗೆದ್ದ ಬಳಿಕ ಕ್ಷೇತ್ರದ ಕಡೆ ತಿರುಗಿಯೂ ನೋಡಲಿಲ್ಲ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸದೇ ಅವರು ಕೇವಲ ವಿಧೂಷಿಯ ಪಾತ್ರ ನಿರ್ವಹಿಸಿದ್ದರು. ಶಿಕ್ಷಕರ ಸಮಸ್ಯೆಗಳನ್ನು ಅರಿತು ಅದನ್ನು ಪರಿಹರಿಸಲು ಓರ್ವ ಶಿಕ್ಷಕನಿಂದಲೇ ಸಾಧ್ಯ. ಈ ಹಿನ್ನೆಲೆಯಲ್ಲಿ ಜೂ.3ರಂದು ನಡೆಯುವ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ ನನ್ನನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಡಾ.ಮಂತರ್‌ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಕೆಪಿಸಿಸಿ ಮುಖಂಡರಾದ ಟಿ.ಪಿ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

7ನೇ ವೇತನ ಆಯೋಗ ಜಾರಿಗೆ ನಿರ್ಧಾರ

ಲೋಕಸಭಾ ಚುನಾವಣೆ ನೀತಿ ಸಂಹಿತೆ ಮುಗಿದ ಬಳಿಕ 7ನೇ ವೇತನ ಆಯೋಗ ಜಾರಿ ಕುರಿತು ನಿರ್ಧಾರವಾಗಲಿದೆ ಎಂದು ನೈರುತ್ಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ ಹೇಳಿದರು. ನಾನು ಕಾರ್ಮಿಕ ಸಂಘಟನೆಯ ಹಿನ್ನೆಲೆಯನ್ನು ಹೊಂದಿದ್ದು, ದುಡಿಯುವ ವರ್ಗದ ಸಮಸ್ಯೆಗಳ ಅರಿವಿದೆ. ರಾಜ್ಯದಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಸದನದಲ್ಲಿ ಪಟ್ಟುಹಿಡಿದು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿದ್ದೆ. ಇಂತಹ ಪ್ರಕರಣ ದೇಶದಲ್ಲೇ ಮೊದಲು. ಅತಿಥಿ ಉಪನ್ಯಾಸಕರ ವೇತನವನ್ನು ಏರಿಕೆ ಮಾಡಿರುವುದು, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಮಹಿಳೆ ಯರಿಗೆ ಗೃಹಲಕ್ಷ್ಮೀ, ಉಚಿತ ವಿದ್ಯುತ್ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಜನರು ಕೂಡ ಸರ್ಕಾರದ ಪರವಾಗಿದ್ದಾರೆ. 30 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ ವೇಳೆ ಉತ್ತಮ ಸ್ಪಂದನೆ ದೊರಕಿದ್ದು, ಗೆಲ್ಲುವ ವಿಶ್ವಾಸವಿದೆ ಎಂದರು.

ಪದವೀಧರರ ಧ್ವನಿಯಾಗಿ ಕೆಲಸ ಮಾಡುವೆ



ಮಡಿಕೇರಿ ಬಿಜೆಪಿ ಕಚೇರಿಯಲ್ಲಿ ನೈರುತ್ಯ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಧನಂಜಯ್ ಸರ್ಜಿ ಮಾತನಾಡಿದರು. ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್ ಇದ್ದರು.

ಮಡಿಕೇರಿ, ಮೇ 28–ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿರುವುದು ಈಗಾಗಲೇ ನನ್ನ ಗಮನಕ್ಕೆ ಬಂದಿದೆ. ಪದವೀಧರರ ಸಮಸ್ಯೆಯನ್ನು ಬಗೆಹರಿಸಲು ಹಾಗೂ ಅವರ ಧ್ವನಿಯಾಗಿ ವಿಧಾನ ಪರಿಷತ್‌ನಲ್ಲಿ ಕೆಲಸ ಮಾಡುವುದಾಗಿ ನೈರುತ್ಯ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಧನಂಜಯ್ ಸರ್ಜಿ ಭರವಸೆ ನೀಡಿದರು.

ಮಡಿಕೇರಿಯ ಇತಿಹಾಸ ಪ್ರಸಿದ್ಧ ಓಂಕಾರೇಶ್ವರ ದೇವಾಲಯದಲ್ಲಿ ಪಕ್ಷ ಪ್ರಮುಖರೊಂದಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೈರುತ್ಯ ಪದವೀಧರರ ಕ್ಷೇತ್ರದ ವ್ಯಾಪ್ತಿಯಲ್ಲಿ 14 ಮೆಡಿಕಲ್ ಕಾಲೇಜು, 30 ಇಂಜಿನಿಯರಿಂಗ್ ಕಾಲೇಜು, 100ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳಿವೆ. ಪದವೀಧರರು ಹಾಗೂ ಸರ್ಕಾರದ ಮಧ್ಯೆ ಕೊಂಡಿಯಾಗಿರುತ್ತೇನೆ ಎಂದರು.


ಧನಂಜಯ್ ಸರ್ಜಿಯಿಂದ ಸರ್ಕಾರ ರಚನೆಯಾಗಲ್ಲ ಎಂಬ ಪಕ್ಷೇತರ ಅಭ್ಯರ್ಥಿ ರಘುಪತಿ ಭಟ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಭಾರತೀತ ಜನತಾ ಪಾರ್ಟಿ ಕಾರ್ಯಕರ್ತರ ಬಲದಿಂದ ಸ್ಪರ್ಧಿಸಿದ್ದೇನೆ. ಬಿಜೆಪಿಗೆ ನಾನು ಹೊಸಬನಲ್ಲ. 10ನೇ ವಯಸಿನಿಂದಲೇ ಸ್ವಯಂ ಸೇವಕನಾಗಿದ್ದು, ಜೀವ ಇರುವ ತನಕ ನಾನು ಸ್ವಯಂ ಸೇವಕನಾಗಿಯೇ ಇರುತ್ತೇನೆ ಎಂದು ರಘುಪತಿ ಭಟ್‌ಗೆ ತಿರುಗೇಟು ನೀಡಿದರು.

ಬಿಜೆಪಿಯಿಂದ ಇರೋದು ಒಬ್ಬರೇ ಅಭ್ಯರ್ಥಿ. ಸೂಕ್ತ ಅಭ್ಯರ್ಥಿಯನ್ನು ಸಂಘಟನೆಯ ಹಿರಿಯರು ಸೂಚಿಸಿದ್ದಾರೆ. ಸಾಮಾಜಿಕ, ಆರೋಗ್ಯ ಕ್ಷೇತ್ರದಲ್ಲಿ ದುಡಿದ ಒಳ್ಳೆಯ ಅಭ್ಯರ್ಥಿಯನ್ನು ನಿಲ್ಲಿಸಿದ್ದಾರೆ. ರಘುಪತಿ ಭಟ್‌ಗೆ ಮೂರು ಬಾರಿ ಎಂಎಲ್‌ಎ ಸೀಟ್ ಕೊಟ್ಟಿರೋದು ಬಿಜೆಪಿ ಎಂಬುದು ಗೊತ್ತಿದೆಯಾ ಎಂದು ಪ್ರಶ್ನಿಸಿದರು? ಪಕ್ಷದಲ್ಲಿ ಹಿರಿಯರ ತೀರ್ಮಾನ ಅಂತಿಮ. ಅದರಂತೆ ಚುನಾಚಣಾ ಕೆಲಸ ನಡೆಯುತ್ತೆ ಎಂದು ಸ್ಪಷ್ಟಪಡಿಸಿದರು.

ನಿಷ್ಠಾವಂತ ಕಾರ್ಯಕರ್ತ: ನನ್ನ ಬಗ್ಗೆ ಮಾತನಾಡಲು ರಘುಪತಿ ಭಟ್‌ಗೆ ಬೇರೆ ಏನು ವಿಚಾರ ಇಲ್ಲ. ನಾನು ಉಡುಪಿಯ ಅವರ ಮನೆಗೆ ಹೋದಾಗ ಕೂಡ ಸೌಜನ್ಯಕ್ಕೂ ಮನೆಯ ಒಳಗೆ ಕರೆದಿಲ್ಲ. ಬಿಜೆಪಿ ಬರುವ ಮೊದಲೇ ಸಂಘಟನೆಯಲ್ಲಿ ಇದ್ದವನು. ಕಾಂಗ್ರೆಸ್‌ನಿಂದ ಟಿಕೆಟ್ ನೀಡುತ್ತೇವೆ ಅಂತ ಬಹಳ ಒತ್ತಡ ಇತ್ತು. ನಾನು ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತನಾಗಿದ್ದು, ಯಾವುದಕ್ಕೂ ಮಣಿಯದೆ ಬಿಜೆಪಿಯಲ್ಲೇ ಇದ್ದೇನೆ. ನನ್ನ ಬಗ್ಗೆ ಹೇಳಲು ಬೇರೆ ಏನು ಇಲ್ಲ, ಹೀಗಾಗಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ರಘುಪತಿ ಭಟ್‌ಗೆ ಟಾಂಗ್ ನೀಡಿದರು.

ಇದೇ ವೇಳೆ ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ಕಾಳಪ್ಪ, ಪಕ್ಷ ಪ್ರಮುಖರಾದ ಡಾ.ಬಿ.ಸಿ.ನವೀನ್, ಮಹೇಶ್ ಜೈನಿ ಮತ್ತಿತರರು ಹಾಜರಿದ್ದರು.

ಬಿಟಿ ಕಾಡು ತಲುಪಿದ ಕಾಡಾನೆಗಳ ಹಿಂಡು



ಸಿದ್ದಾಪುರ, ಮೇ 28–ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಗೊಳಿಸಿ, ಕಾರ್ಮಿಕರು ಹಾಗೂ ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿದ್ದ ಕಾಡಾನೆಗಳ ಹಿಂಡನ್ನು ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಅರಸಹಾಸದಿಂದ ಬಿಟಿ ಕಾಡು ವ್ಯಾಪ್ತಿಗೆ ಓಡಿಸಿದರು.

ಕೆಲ ದಿನಗಳಿಂದ ಗುಯ್ಯ ಗ್ರಾಮ ವ್ಯಾಪ್ತಿಯ ಕಾಫಿ ತೋಟಗಳಲ್ಲಿ 6 ಮರಿಯಾನೆಗಳೊಂದಿಗೆ 25ಕ್ಕೂ ಹೆಚ್ಚು ಕಾಡಾನೆಗಳು ಠಿಕ್ಕಾಣಿ ಹೂಡಿ ಗ್ರಾಮಸ್ಥರಿಗೆ ಕಾಣಿಸಿಕೊಳ್ಳುತ್ತಿದ್ದವು. ಕಾಡಾನೆ ಹಾವಳಿಯಿಂದ ಕಾರ್ಮಿಕರು, ಬೆಳೆಗಾರರು ತೋಟಕ್ಕೆ ತೆರಳಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಡಿಸಿಎಫ್ ಜಗನ್ನಾಥ್, ಎಸಿಎಫ್ ನೆಹರು ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ದೇವಯ್ಯ ನೇತೃತ್ವದಲ್ಲಿ ಉಪವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ ಹಾಗೂ ಆರ್‌ಆರ್‌ಟಿ ಸಿಬ್ಬಂದಿ ಆನೆಗಳನ್ನು ಗ್ರಾಮದಿಂದ ಓಡಿಸಲು ಯಶಸ್ವಿಯಾದರು.

ಆನೆಗಳು ವಿರಾಜಪೇಟೆ–ಸಿದ್ದಾಪುರ ಮುಖ್ಯರಸ್ತೆಯ ಇಂಜಲಗೆರೆ ಬಳಿ ರಸ್ತೆ ದಾಟಲು ಹಿಂದೇಟು ಹಾಕುತ್ತಿದ್ದವು. ಈ ವೇಳೆ ಕೆಲಕಾಲ ವಾಹನಗಳ ಸಂಚಾರ ನಿಲ್ಲಿಸಿ, ಆನೆಗಳನ್ನ ಕಾಡಿಗೆ ಅಟ್ಟಲಾಗಿದೆ. ಆನೆಗಳು ರಾತ್ರಿ ಅರಣ್ಯಕ್ಕೆ ಸೇರಲಿವೆ ಎಂದು ಅಧಿಕಾರಿಗಳು ತಿಳಿಸಿದರು. ಸಿದ್ದಾಪುರ, ಗುಯ್ಯ, ಕರಡಿಗೋಡು, ಅವ್ಮತ್ತಿ, ಪಾಲಿಬೆಟ್ಟ, ಹಿಂಜಲಗೆರೆ, ಸೇರಿದಂತೆ ಹಲವು ಕಾಫಿ ತೋಟಗಳಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಳ್ಳುತ್ತಿದ್ದು, ಕಾರ್ಮಿಕರು ಹಾಗೂ ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿವೆ. ಇದರಿಂದ ಜನರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಕಾಡಾನೆಗಳನ್ನು ಶಾಶ್ವತವಾಗಿ ತಡೆಗಟ್ಟಬೇಕು ಎಂದು ಕೊಡಗು ರೈತರ ಸಂಘದ ಅಮ್ಮತಿ ಹೋಬಳಿಯ ಅಧ್ಯಕ್ಷ ಮಂಡೆಪಂಡ ಪ್ರವೀಣ್ ಬೋಪಯ್ಯ ಒತ್ತಾಯಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 28–ಮಡಿಕೇರಿಯ ವಿದ್ಯುತ್ ಉಪ–ಕೇಂದ್ರದ ಫೀಡರ್‌ಗಳ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 29ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಮಡಿಕೇರಿ ನಗರ, ತಾಳತ್‌ಮನೆ, ಕಾಟಕೇರಿ, ಮದೆನಾಡು, ಜೋಡುಪಾಲ, ಬೋಯಿಕೇರಿ, ಮಕ್ಕಂದೂರು, ಗಾಳಿಬೀಡು, ಕುಂಡಮೇಸ್ತ್ರಿ, ಮೇಕೇರಿ, ಕಡಗದಾಳು, ಸಂಪಾಜೆ, ಭಾಗಮಂಡಲ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಇಇ ತಿಳಿಸಿದ್ದಾರೆ.

ನಾಳಿನ ಪ್ರತಿಭಟನೆಗೆ ಸಿಐಟಿಯು ಬೆಂಬಲ



ಮಡಿಕೇರಿ, ಮೇ 28–ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ರೇವಣ್ಣನನ್ನು ತಕ್ಷಣ ಬಂಧಿಸುವಂತೆ ಒತ್ತಾಯಿಸಿ ರಾಜ್ಯ ಜನಪರ ಚಳುವಳಿಗಳ ಒಕ್ಕೂಟದ ವತಿಯಿಂದ ಮೇ 30ರಂದು ಹಮ್ಮಿಕೊಂಡಿರುವ 'ನಮ್ಮೆಲ್ಲರ ಹೋರಾಟದ ನಡಿಗೆ ಹಾಸನದ ಕಡೆಗೆ' ಬೃಹತ್ ಪ್ರತಿಭಟನಾ ಮೆರವಣಿಗೆಗೆ ಕೊಡಗು ಜಿಲ್ಲಾ ಸಿಐಟಿಯು ಸಂಘಟನೆ ಬೆಂಬಲ ನೀಡಲಿದೆ ಎಂದು ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ಇಡೀ ದೇಶವೇ ತಲೆ ತಗ್ಗಿಸುವಂತಾಗಿದೆ. ಮಹಿಳೆಯರಿಗೆ ರಕ್ಷಣೆ ನೀಡಬೇಕಾದ ಜನಪ್ರತಿನಿಧಿಯೇ ಲೈಂಗಿಕ ದೌರ್ಜನ್ಯ ನಡೆಸಿರುವುದು ಅತ್ಯಂತ ಹೇಯ ಕೃತ್ಯವಾಗಿದೆ. ಆದಿವಾಸಿಗಳು, ಅಮಾಯಕರು ಯಾವುದೇ ದೊಡ್ಡ ತಪ್ಪು ಮಾಡದಿದ್ದರೂ ತಕ್ಷಣ ಬಂಧಿಸುವ ಆಡಳಿತ ವ್ಯವಸ್ಥೆ ಪ್ರಜ್ವಲ್ ವಿರುದ್ಧ ಗಂಭೀರ ಆರೋಪಗಳಿದ್ದರೂ ವಿದೇಶಕ್ಕೆ ಪಲಾಯನ ಮಾಡಲು ಅವಕಾಶ ನೀಡಲಾಗಿದೆ. ಎಲ್ಲೋ ಕುಳಿತು ರಾಜಾರೋಷವಾಗಿ ವಿಡಿಯೋ ಮಾಡಿ ಮೇ 31ಕ್ಕೆ ಬರುವುದಾಗಿ ಹೇಳಿಕೆ ನೀಡುತ್ತಿರುವ ಪ್ರಜ್ವಲ್‌ಗೆ ಕಾನೂನಿನ ಬಗ್ಗೆ ಭಯ ಅಥವಾ ಗೌರವವಿಲ್ಲವೇ ಎಂದು ಪ್ರಶ್ನಿಸಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು ಮಾತನಾಡಿ, ಪ್ರಜ್ವಲ್‌ನನ್ನು ಬಂಧಿಸುವಂತೆ ಒತ್ತಾಯಿಸಿ ಮೇ 30ರಂದು ಹಾಸನದ ಹೇಮಾವತಿ ಪ್ರತಿಮೆ ಬಳಿಯಿಂದ ಹೊಸ ಬಸ್ ನಿಲ್ದಾಣ ರಸ್ತೆಯ ಮೂಲಕ ಜಿಲ್ಲಾಧಿಕಾರಿ ಕಚೇರಿ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಎನ್.ಡಿ.ಕುಟ್ಟಪ್ಪ ಉಪಸ್ಥಿತರಿದ್ದರು.

ಇಂದು ಶಾಲೆಗಳತ್ತ ಮಕ್ಕಳ ಹೆಜ್ಜೆ

▶ ಜಿಲ್ಲೆಯ ಎಲ್ಲಾ ಶಾಲೆಗಳು ಆರಂಭ ▶ ವಿದ್ಯಾರ್ಥಿಗಳ ಸ್ವಾಗತಕ್ಕೆ ಸಜ್ಜು



ಮೊದಲ ದಿನವೇ ಪಠ್ಯ ಪುಸ್ತಕ ವಿತರಣೆ

ಈ ಬಾರಿ ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲು ಜಿಲ್ಲೆಗೆ ಅಗತ್ಯವಾದ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ಸರಬರಾಜಾಗಿದ್ದು, ಮಕ್ಕಳಿಗೆ ಶಾಲೆ ಆರಂಭದ ಮೊದಲ ದಿನವೇ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ನೀಡಲು ಶಿಕ್ಷಣ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ಈ ಬಗ್ಗೆ ಡಿಡಿಪಿಐ ರಾಮಚಂದ್ರರಾಜೇ ಅರಸ್ ಮಾತನಾಡಿ, ಈಗಾಗಲೇ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ಸರಬರಾಜು ಮಾಡಲಾಗಿದೆ. ಬುಧವಾರವೇ ವಿತರಣೆಗೆ ಸಿದ್ಧತೆ ಮಾಡಲಾಗಿದೆ. ಅಕ್ಷರ ದಾಸೋಹ ಕಾರ್ಯಕ್ರಮದ ಮೂಲಕ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಆಹಾರ ನೀಡಲು ಕ್ರಮವಹಿಸಲಾಗಿದೆ. ಶಾಲೆ ಪ್ರಾರಂಭದ ಮೊದಲ ಮೂರು ದಿನ ಮಕ್ಕಳಿಗೆ ಸಿಹಿ ನೀಡುವಂತೆ ಎಲ್ಲಾ ಶಾಲಾ ಮುಖ್ಯಶಿಕ್ಷಕರಿಗೆ ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಚಾಮರಾಜನಗರ, ಮೇ 28– ಜಿಲ್ಲೆಯಲ್ಲಿ ಬುಧವಾರದಿಂದ (ಮೇ 29) ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಆರಂಭವಾಗಲಿದ್ದು, ಒಂದೂವರೆ ತಿಂಗಳ ಕಾಲ ಬೇಸಿಗೆ ರಜೆಯ ಮಜಾ ಅನುಭವಿಸಿದ್ದ ಮಕ್ಕಳು ಶಾಲೆಗಳತ್ತ ಹೆಜ್ಜೆ ಹಾಕಲಿದ್ದಾರೆ.

ಪ್ರಸಕ್ತ ಶೈಕ್ಷಣಿಕ ವರ್ಷದ ಮೊದಲ ದಿನವಾದ ಮೇ 29ರಂದೇ ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳು ಸಿಗಲಿದ್ದು, ಹಬ್ಬದಂತೆ ಮಕ್ಕಳು ಸಂಭ್ರಮಿಸಲು ಶಿಕ್ಷಕರು ತಯಾರಿ ನಡೆಸಿದ್ದಾರೆ. ಶಾಲೆಗಳಿಗೆ ತಳಿರು ತೋರಣಗಳನ್ನು ಕಟ್ಟುವುದು, ಶಾಲಾ ಆವರಣ ಪ್ರವೇಶಿಸುವ ಮಕ್ಕಳಿಗೆ ಸಿಹಿ ತಿನಿಸುಗಳನ್ನು ನೀಡುವುದು, ಹೂ ಕೊಡುವ ಮೂಲಕ ಅವರನ್ನು ಆತ್ಮೀಯವಾಗಿ ಸ್ವಾಗತಿಸಲು ಸಜ್ಜಾಗಿದ್ದಾರೆ. ತರಗತಿ ಕೊಠಡಿ, ಶಾಲಾ ಆವರಣ ಶುಚಿತ್ವಕ್ಕಾಗಿ ಶಾಲಾ ಪ್ರಾರಂಭದ ಹಿಂದಿನ ದಿನ ಮಂಗಳವಾರವೇ ಶಿಕ್ಷಕರು ಶಾಲೆಗೆ ಹಾಜರಾಗಿ ಸಿದ್ಧತೆ ನಡೆಸಿದ್ದಾರೆ.

ಡಿಡಿಪಿಐ ಸೂಚನೆ: ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳಿಗೆ ಡಿಡಿಪಿಐ ರಾಮಚಂದ್ರರಾಜೇ ಅರಸ್ ಸೂಚನೆಗಳನ್ನು ನೀಡಿದ್ದು, ಶಾಲೆಯ ಪ್ರಾರಂಭೋತ್ಸವದಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಿದ್ದಾರೆ.

ಮೊದಲ ದಿನವೇ ತರಗತಿವಾರು ಮಕ್ಕಳ ನೋಂದಣಿ ಮಾಡಿಕೊಳ್ಳಬೇಕು. ಮಕ್ಕಳಿಗೆ ಬೇಸರವಾಗದ ಹಾಗೆ ಎಲ್ಲರೂ ಕಾರ್ಯನಿರ್ವಹಿಸಬೇಕು. ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳನ್ನು ನೀಡಬೇಕು ಎಂದು ತಿಳಿಸಿದ್ದಾರೆ.

ಮುಖ್ಯಶಿಕ್ಷಕರು, ಸಹಶಿಕ್ಷಕರು ವಿಶೇಷ ಆಹ್ವಾನಿತರಾಗಿ ಎಸ್‌ಡಿಎಂಸಿ ಹಾಗೂ ಪೋಷಕರನ್ನು ಶಾಲೆಗೆ ಕರೆಸಿ ಇಲಾಖೆ ತೆಗೆದುಕೊಂಡಿರುವ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿಕೊಡಲಾಗುವುದು. ಈಗಾಗಲೇ ಇಲಾಖೆಯಿಂದ 2024–25ನೇ ಸಾಲಿನ ಶೈಕ್ಷಣಿಕ ಮಾರ್ಗಸೂಚಿಯನ್ನು ಬಿಡುಗಡೆಗೊಳಿಸಿದ್ದು, ಅದರಂತೆ ಶಾಲೆಯಲ್ಲಿ ಅನುಪಾಲನೆಗೆ ಕ್ರಮವಹಿಸಲಾಗಿದೆ. ಅನುದಾನ ರಹಿತ ಶಾಲೆಗಳಲ್ಲಿ ಶುಲ್ಕವನ್ನು ಪ್ರಕಟಣಾ ಫಲಕ, ವೆಬ್‌ಸೈಟ್ ಮತ್ತು ಎಸ್‌ಎಟಿಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಪ್ರಕಟಿಸುವಂತೆ ಸೂಚಿಸಲಾಗಿದೆ

ಚಾ.ನಗರದಲ್ಲಿ ರೈತರ ಬೃಹತ್ ಪ್ರತಿಭಟನೆ

● ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೆರವಣಿಗೆ ● ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಕೆ



ನಗರದ ಭುವನೇಶ್ವರಿ ವೃತ್ತದಲ್ಲಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 28–ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಪ್ರವಾಸಿ ಮಂದಿರದ ಬಳಿ ನೂರಾರು ಸಂಖ್ಯೆಯಲ್ಲಿ ಸಮಾವೇಶಗೊಂಡ ರೈತರು, ಅಲ್ಲಿಂದ ಮೆರವಣಿಗೆ ಆರಂಭಿಸಿದರು. ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ, ಚಿಕ್ಕ ಅಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವೀಯೇಷನ್ ರಸ್ತೆ ಮಾರ್ಗವಾಗಿ ಮೆರವಣಿಗೆ ನಡೆಸಿ, ನಂತರ ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟಿಸಿದರು. ಇದರಿಂದ ಕೆಲಕಾಲ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಯಿತು. ಬಳಿಕ ಅಲ್ಲಿಂದ ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತಲುಪಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಅಧಿಕೃತಗೊಳಿಸಬೇಕು. ಹೊಸ ಸಂಪರ್ಕವನ್ನು ಪಡೆಯಲು ರೈತರೇ ಪೂರ್ಣ ವೆಚ್ಚವನ್ನು ಭರಿಸಬೇಕೆಂದು ಹೊರಡಿಸಿರುವ ಆದೇಶ ಕೈಬಿಟ್ಟು ಸಾಂಕೇತಿಕ ಮೊತ್ತವನ್ನು ಪಡೆದು ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ರಾಜ್ಯದಲ್ಲಿ ತಲೆದೋರಿರುವ ಬರಗಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಯ ಪೂರ್ಣ ಮೊತ್ತವನ್ನು ಕೇಂದ್ರ ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪೂರ್ವ ಮುಂಗಾರಿನಲ್ಲಿ ಜಿಲ್ಲಾದ್ಯಂತ ಪ್ರಧಾನ ಮಂತ್ರಿ ಫಸಲು ಭೀಮಾ ಯೋಜನೆಯಡಿ ರೈತರು ವಿವಿಧ ಬೆಳೆ ವಿಮೆ ಪಾಲಿಸಿ ಕಟ್ಟಿದ್ದು, ವಿಮಾ ಕಂಪನಿಯವರು ರೈತರ ಖಾತೆಗೆ ಪರಿಹಾರದ ಮೊತ್ತವನ್ನು ಕೂಡಲೇ ಪಾವತಿಸಬೇಕು. ಫಸಲು ಭೀಮಾ ಯೋಜನೆಯನ್ನು ರೈತರ ಎಲ್ಲಾ ಬೆಳೆಗಳಿಗೂ ವರ್ಷಪೂರ್ತಿ ಅನ್ವಯವಾಗುವಂತೆ ವಿಮಾ ಯೋಜನೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನೀಡುವ ನೀತಿ ಜಾರಿಯಾಗುವವರೆಗೂ ಸ್ವಾಮಿನಾಥನ್ ವರದಿಯನ್ವಯ ಕನಿಷ್ಠ ಬೆಂಬಲ ಬೆಲೆ ನೀಡಿ, ಎಲ್ಲಾ ಬೆಳೆಗಳನ್ನು ಸಕಾಲದಲ್ಲಿ ಖರೀದಿಸಬೇಕು. ಕಳೆದ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕೊಡಬೇಕಾಗಿರುವ ಉಪ ಉತ್ಪನ್ನಗಳ ಬಾಕಿ ಹಣವನ್ನು ಶೀಘ್ರ ಜಮಾಗೊಳಿಸಬೇಕು ಎಂದು ಒತ್ತಾಯಿಸಿದರು.

ಲೋಕಸಭಾ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಬಿಜೆಪಿ ಕೆಲ ಪುಂಡರು ರೈತ ಮುಖಂಡರ ಮೇಲೆ ಹಲ್ಲೆ ಮಾಡಿದ್ದು, ಈ ಪುಂಡರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಇವರು ರೈತ ಮುಖಂಡರ ಮೇಲೆ ದಾಖಲಿಸಿರುವ ಸುಳ್ಳು ಪ್ರಕರಣವನ್ನು ಕೈಬಿಡಬೇಕು. ರೈತರು ಅರಣ್ಯ ಪ್ರದೇಶಗಳ ವ್ಯಾಪ್ತಿಯಿಂದ ದೂರವಿರುವ ಕೃಷಿ ಭೂಮಿಗಳಿಗೂ ವನ್ಯಜೀವಿಗಳಿಂದ ಬೆಳೆಗಳ ರಕ್ಷಣೆಗಾಗಿ ಸೋಲಾರ್ ತಂತಿ ಬೇಲಿ ನಿರ್ಮಾಣಕ್ಕೆ ಸಹಾಯಧನ ನೀಡಬೇಕು ಎಂದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷರಾದ ಪರಶಿವಮೂರ್ತಿ, ರಾಜಣ್ಣ, ಮುಕುಂದಮೂರ್ತಿ, ನಾಗರಾಜು, ಮೀರೆ ಸಿದ್ದರಾಜು, ರಾಜಶೇಖರ್, ನೂರಾರು ರೈತರು ಪಾಲ್ಗೊಂಡಿದ್ದರು.

'ಆಶ್ರಯ' ನೀಡುವುದಾಗಿ ಗ್ರಾಪಂ ಅಧ್ಯಕ್ಷೆಯ ಪುತ್ರನಿಂದ ಮಹಿಳೆ ಮೇಲೆ ಅತ್ಯಾಚಾರ

ಚಾಮರಾಜನಗರ, ಮೇ 28–ಆಶ್ರಯ ಮನೆ ಕೊಡಿಸುವುದಾಗಿ ನಂಬಿಸಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಪುತ್ರ ಮಹಿಳೆ ಮೇಲೆ ನಿರಂತರವಾಗಿ ಅತ್ಯಾಚಾರವೆಸಗಿರುವ ಅಮಾನವೀಯ ಪ್ರಕರಣ ಜಿಲ್ಲೆಯ ಹನೂರು ತಾಲೂಕಿನ ಪೊನ್ನಾಚಿ ಗ್ರಾಮದಲ್ಲಿ ನಡೆದಿದೆ.

ಅತ್ಯಾಚಾರಕ್ಕೊಳಗಾದ ಗ್ರಾಮದ ಮಹಿಳೆ ಆತನ ಕಾಟ ತಾಳಲಾರದೆ ಮಹದೇಶ್ವರಬೆಟ್ಟದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊನ್ನಾಚಿ ಗ್ರಾಪಂ ಅಧ್ಯಕ್ಷೆ ನೀಲಾಂಬಿಕೆ ಪುತ್ರ ವೈದೇಶ್ ಅತ್ಯಾಚಾರವೆಸಗಿದ ಆರೋಪಿಯಾಗಿದ್ದು, ಈತನ ವಿರುದ್ಧ ಈಗ ಪ್ರಕರಣ ದಾಖಲಾಗಿದೆ.

ಪೊನ್ನಾಚಿ ಗ್ರಾಪಂ ವತಿಯಿಂದ ಆಶ್ರಮ ಮನೆ ನಿರ್ಮಾಣಕ್ಕೆ ಅರ್ಜಿ ಆಹ್ವಾನಿಸಲಾಗಿತ್ತು. ಸೂರು ಇಲ್ಲದೆ ಒದ್ದಾಡುತ್ತಿದ್ದ ಗ್ರಾಮದ ಮಹಿಳೆ ಆಶ್ರಯ ಮನೆಗಾಗಿ ಅರ್ಜಿ ಸಲ್ಲಿಸಿದ್ದರು. ಜೊತೆಗೆ ತನಗೆ ಮನೆ ಕೊಡಿಸುವಂತೆ ಗ್ರಾಮಂ ಅಧ್ಯಕ್ಷೆ ನೀಲಾಂಬಿಕೆ ಪುತ್ರ ವೈದೇಶ್‌ನಲ್ಲಿ ಮನವಿ ಮಾಡಿದ್ದಳು.

ಇದನ್ನೇ ಬಂಡವಾಳವಾಗಿಸಿಕೊಂಡ ವೈದೇಶ್ ನಾನು ಕರೆದಾಗಲೆಲ್ಲ ಬಂದರೆ ಆಶ್ರಯ ಮನೆ ಕೊಡಿಸುದಾಗಿ ಹೇಳಿ ನಿತ್ಯ ಪೀಡಿಸಲಾರಂಭಿಸಿದ್ದಾನೆ. ಕೊನೆಗೊಂದು ದಿನ ಮನೆಗೆ ಬಂದ ವೈದೇಶ್, ಆಕೆಯ ಮೇಲೆ ಅತ್ಯಾಚಾರವೆಸಗಿ, ಮಹಿಳೆಯ ಬೆತ್ತಲೆ ವಿಡಿಯೋ ಮಾಡಿಕೊಂಡಿದ್ದಾನೆ.

ಜೊತೆಗೆ ವಿಡಿಯೋ ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕಿ ನಿರಂತರವಾಗಿ ಅತ್ಯಾಚಾರವೆಸಗುತ್ತಾ ಬಂದಿದ್ದಾನೆ. ಕೊನೆಗೆ ಸಾಮಾಜಿಕ ಜಾಲತಾಣದಲ್ಲಿ ಈಕೆಯ ಬೆತ್ತಲೆ ವಿಡಿಯೋವನ್ನು ಹರಿಯಬಿಡಲಾಗಿದೆ.

ಇದನ್ನು ತಿಳಿದ ಈಕೆ ಮಹದೇಶ್ವರ ಬೆಟ್ಟದ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಆರೋಪಿ ತಲೆ ಮರೆಸಿಕೊಂಡಿದ್ದಾನೆ. ತನಗಾಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸುವಂತೆ ಆರೋಪಿಯ ತಾಯಿಯಾದ ಗ್ರಾಪಂ ಅಧ್ಯಕ್ಷೆ ನೀಲಾಂಬಿಕೆಯಲ್ಲಿ ಮನವಿ ಮಾಡಿದ ಮಹಿಳೆಗೆ ಆಕೆಯೂ ಅವಾಜ್ ಹಾಕಿ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸವಿತಾ ಸಮಾಜ ಜನಗಣತಿಗೆ ಮನವಿ



ಚಾಮರಾಜನಗರದ ಸವಿತಾ ಸಮಾಜ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ ಸಮಾಜ ಜಿಲ್ಲಾಧ್ಯಕ್ಷ ಕೆ.ವಿ.ವೆಂಕಟೇಶ್ ಪಣ್ಯದಹುಂಡಿ ಮಾತನಾಡಿದರು.

ಚಾಮರಾಜನಗರ, ಮೇ 28– ಜಿಲ್ಲೆಯಲ್ಲಿ ಸವಿತಾ ಜನಾಂಗದವರ ಸ್ಥಿತಿಗತಿಯನ್ನು ತಿಳಿಯುವ ಉದ್ದೇಶದಿಂದ ಜಿಲ್ಲಾದ್ಯಂತ ಸಮುದಾಯದ ಜನಗಣತಿ ನಡೆಸಬೇಕು ಎಂದು ಜಿಲ್ಲಾ ಸವಿತಾ ಸಮಾಜ ಅಧ್ಯಕ್ಷ ಕೆ.ವಿ.ವೆಂಕಟೇಶ್ ಪಣ್ಯದಹುಂಡಿ ಮನವಿ ಮಾಡಿದರು.

ನಗರದ ಶಿವಕುಮಾರಸ್ವಾಮಿ ಭವನ ಹಿಂಭಾಗದ ಸವಿತಾ ಸಮಾಜ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಸಮುದಾಯದ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಚಾಮರಾಜನಗರ ತಾಲೂಕಿನಲ್ಲಿ ಸವಿತಾ ಸಮಾಜದವರ ಜನಗಣತಿಯನ್ನು ಪೂರ್ಣಗೊಳಿಸಲಾಗಿದೆ. ಜಿಲ್ಲೆಯ ಉಳಿದ ತಾಲೂಕುಗಳಲ್ಲಿ ಸಮುದಾಯದ ಆಯಾ ತಾಲೂಕು ಘಟಕದ ಅಧ್ಯಕ್ಷರ ನೇತೃತ್ವದಲ್ಲಿ ಜನಗಣತಿಯನ್ನು ನಡೆಸಬೇಕು ಎಂದು ತಿಳಿಸಿದರು.

ಜನಗಣತಿಯಿಂದ ಸಮುದಾಯದ ಜನರ ಸ್ಥಿತಿಗತಿಯನ್ನು ತಿಳಿಯಲಾಗುವುದು. ಇದರಿಂದ ಸಮುದಾಯದವರಿಗೆ ಸರ್ಕಾರದ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಅನುಕೂಲವಾಗಲಿದೆ. ಚಾಮರಾಜನಗರದಲ್ಲಿ ಸವಿತಾ ಸಮಾಜದ ರುದ್ರಭೂಮಿಗಾಗಿ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ಸಮುದಾಯಕ್ಕೆ ರುದ್ರಭೂಮಿ ಕೊಡಿಸುವ ನಿಟ್ಟಿನಲ್ಲಿ ಜಿಲ್ಲಾ ಸಂಘದಿಂದ ನಿರಂತರ ಪ್ರಯತ್ನ ನಡೆಸಲಾಗುತ್ತಿದೆ ಎಂದರು.

ಸಭೆಯಲ್ಲಿ ಯಳಂದೂರು ತಾಲೂಕು ಅಧ್ಯಕ್ಷರಾದ ಶ್ರೀಕಂಠಸ್ವಾಮಿ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ವಿಠಲ, ಚಾಮರಾಜನಗರ ತಾಲೂಕು ಅಧ್ಯಕ್ಷ ಬಸವಣ್ಣ, ಮುಖಂಡರಾದ ರಾಮಚಂದ್ರ ರಂಗಸ್ವಾಮಿ, ಮುದ್ದುಮಾಧು, ವೆಂಕಟೇಶ್, ರಾಜು, ಪುರುಷೋತ್ತಮ್, ನಾಗು, ಮಹದೇವ್, ಮಲ್ಲಪ್ಪ, ಸಮುದಾಯದ ಮುಖಂಡರು, ಯುವಕರು ಹಾಜರಿದ್ದರು.

ಆಧಾರ್ ಜೋಡಣೆ ಪರಿಶೀಲನೆ



ಬೇಗೂರಿನಲ್ಲಿ ರೈತರ ಆರ್‌ಟಿಸಿಗೆ ಆಧಾರ್ ಜೋಡಣೆ ಮಾಡುತ್ತಿರುವುದನ್ನು ಉಪ ವಿಭಾಗಾಧಿಕಾರಿ ಶಿವಮೂರ್ತಿ ಪರಿಶೀಲನೆ ನಡೆಸಿದರು.

ಬೇಗೂರು, ಮೇ 28–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ರೈತರು ತಮ್ಮ ಆರ್‌ಟಿಸಿಗೆ ಆಧಾರ್ ಜೋಡಣೆ ಮಾಡುತ್ತಿವುದನ್ನು ಉಪವಿಭಾಗಾಧಿಕಾರಿ ಶಿವಮೂರ್ತಿ ಪರಿಶೀಲಿಸಿದರು. ಇದೇ ವೇಳೆ ಮಾತನಾಡಿದ ಉಪವಿಭಾಗಾಧಿಕಾರಿ, ರೈತರಿಗೆ ಬರ ಪರಿಹಾರ ನೀಡಲು ಹಾಗೂ ಸರ್ಕಾರದ ಸೌಲಭ್ಯ ಪಡೆಯಲು ಆರ್‌ಟಿಸಿಗೆ ಆಧಾರ್ ಜೋಡಣೆ ಮಾಡುವುದು ಕಡ್ಡಾಯವಾಗಿದೆ. ಆದ್ದರಿಂದ ರೈತರು ಹತ್ತಿರದ ಸೇವಾ ಕೇಂದ್ರಗಳಿಗೆ ತೆರಳಿ ಆಧಾರ್ ಜೋಡಣೆ ಮಾಡಸಬೇಕು ಎಂದರು. ಬೇಗೂರು ಗ್ರಾಪಂನ ರಾಜಸ್ವ ನಿರೀಕ್ಷಕ ರವಿ, ಗ್ರಾಮ ಆಡಳಿತಾಧಿಕಾರಿ ಮಹಾದೇವಪ್ಪ ಗ್ರಾಮ ಸಹಾಯಕ ರಾಜು ಇದ್ದರು.

ಶ್ರೀ ಅನ್ನದಾತ ಚಾರಿಟಬಲ್ ಸೇವಾ ಟ್ರಸ್ಟ್ ಸೇವಾಶ್ರಮಕ್ಕೆ ಆಹ್ವಾನ

ಮೈಸೂರು, ಮೇ 28–ಶ್ರೀರಂಗಪಟ್ಟಣ ತಾಲೂಕಿನ ಹೊಸ ಉಂಡವಾಡಿ ಗ್ರಾಮದಲ್ಲಿ ನಿರಾಶ್ರಿತರು, ವೃದ್ಧರು, ಅನಾಥ ಮಕ್ಕಳಿಗಾಗಿ ಶ್ರೀ ಅನ್ನದಾತ ಚಾರಿಟಬಲ್ ಸೇವಾ ಟ್ರಸ್ಟ್ ಉಚಿತ ಸೇವಾಶ್ರಮ ಆರಂಭವಾಗಿದೆ. ಆಶ್ರಮದಲ್ಲಿರುವವರಿಗೆ ಉಚಿತ ಬಟ್ಟೆ, ಊಟ, ವಸತಿ ನೀಡಲಾಗುವುದು. ದಾನಿಗಳು ಸಹಾಯಹಸ್ತವನ್ನು ವೃದ್ಧ ಚೇತನಗಳಿಗೆ ನೀಡಬಹುದು. ಇಚ್ಛೆವುಳ್ಳವರು ಅಧ್ಯಕ್ಷ ರವೀಂದ್ರಕುಮಾರ್, ಮೊ. 9743313178, ಪ್ರಧಾನ ಕಾರ್ಯದರ್ಶಿ ಬಿ.ಆರ್.ಚಂದ್ರಕಲಾ, ಮೊ. 8197508158 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಪಠ್ಯ ಪುಸ್ತಕಗಳ ಪರಿಷ್ಕರಣೆ ಇಲ್ಲ

ಶಿಕ್ಷಕರ ಕೊರತೆ ಇದೆ. ಜೊತೆಗೆ ಅನುದಾನಿತ ಶಾಲೆಗಳಲ್ಲಿ 8 ಸಾವಿರ ಶಿಕ್ಷಕರ ಕೊರತೆ ಇದೆ. ಇನ್ನು ನಾಲ್ಕು ವರ್ಷದ ಅವಧಿಯಲ್ಲಿ ಗರಿಷ್ಠ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಮಕ್ಕಳ ಪೌಷ್ಠಿಕತೆ ಹೆಚ್ಚಿಸಲು ಈ ಮೊದಲು ಒಂದು ಮೊಟ್ಟೆ ನೀಡುತ್ತಿದ್ದೆವು. ಆದರೆ ಈಗ ವಾರದಲ್ಲಿ ಎರಡು ಮೊಟ್ಟೆ ನೀಡಲಾಗುತ್ತಿದೆ. ಬೆಳಿಗ್ಗೆ ರಾಗಿ ಮಾಲ್ಟ್ ಕೂಡ ನೀಡಲಾಗುತ್ತಿದೆ ಎಂದು ಹೇಳಿದರು.

10 ಗ್ರೇಸ್ ಮಾರ್ಕ್ಸ್: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 10 ಗ್ರೇಸ್ ಮಾರ್ಕ್ಸ್ ನೀಡಲಾಗಿದೆ. ಆದರೆ 20 ಗ್ರೇಸ್ ಮಾರ್ಕ್ಸ್ ನೀಡಲಾಗಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ನಾವು ತೆಗೆದುಕೊಂಡ ತೀರ್ಮಾನದಿಂದ 42 ಸಾವಿರ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಎಂದರು. ವಿದ್ಯಾರ್ಥಿಗಳು ಅನುತ್ತೀರ್ಣರಾದರೆ ಶಾಲೆಯಿಂದ ಹೊರಗುಳಿಯುತ್ತಾರೆ. ಅವರ ಭವಿಷ್ಯ ಹಾಳಾಗುತ್ತದೆ. ಆದ ಕಾರಣ ಗ್ರೇಸ್ ಮಾರ್ಕ್ಸ್ ನೀಡಲಾಗಿದೆ. ವಿದ್ಯಾರ್ಥಿಗಳ ಅವಶ್ಯಕತೆಯಂತೆ ಶಾಲಾ–ಕಾಲೇಜು ಆರಂಭ ಮಾಡಲಾಗುತ್ತಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಯಾವುದೇ ತೊಂದರೆ ಆಗದಂತೆ ರಾಜ್ಯ ಸರ್ಕಾರ ತೀರ್ಮಾನ ಕೈಗೊಳ್ಳುತ್ತಿದೆ ಎಂದು ಸ್ಪಷ್ಟನೆ ನೀಡಿದರು. ಶಾಲಾ ಮಕ್ಕಳ ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳನ್ನು ಶೇ.95ರಷ್ಟು ವಿತರಣೆ ಮಾಡಲಾಗಿದೆ. ಈ ತಿಂಗಳಾಂತ್ಯಕ್ಕೆ ಉಳಿದ ಶೇ.5ರಷ್ಟು ವಿತರಣೆ ಮಾಡಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು. ಶಾಸಕ ಡಾ.ತಿಮ್ಮಯ್ಯ, ವಿಧಾನ ಪರಿಷತ್ ಚುನಾವಣೆಯ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ, ಕೆಪಿಸಿಸಿ ಉಪಾಧ್ಯಕ್ಷ ಸುಧೀಂದ್ರ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಮೇಯರ್ ಪ್ರಕಾಶ್, ಭಾಸ್ಕರ್ ಗೌಡ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನನ್ನ ವಿರುದ್ಧ ಏಕೆ ಪ್ರತಿಭಟನೆ ಮಾಡ್ತಾರೆ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಗ್ಗೆ ನಾನು ಮಾತನಾಡಿದರೆ ಸವಿತಾ ಸಮಾಜದವರು ನನ್ನ ವಿರುದ್ಧ ಏಕೆ ಪ್ರತಿಭಟನೆ ಮಾಡುತ್ತಾರೆ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದ್ದಾರೆ.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸವಿತಾ ಸಮಾಜದವರು ತಮ್ಮ ವಿರುದ್ಧ ನಾಳೆ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ನಾನು ಯಾವುದೇ ಸಮಾಜಕ್ಕೆ ಅವಮಾನ ಆಗುವಂತೆ ಮಾತನಾಡಿಲ್ಲ. ಅಂತಹ ನಡವಳಿಕೆಯನ್ನು ನನ್ನ ತಂದೆ ಹೇಳಿ ಕೊಟ್ಟಿಲ. ನನ್ನ ವಿರುದ್ಧ ಪ್ರತಿಭಟನೆ ಮಾಡುವ ಅವರಿಗೆ ಯಾರೋ ತಪ್ಪು ಮಾಹಿತಿ ನೀಡಿರಬೇಕು ಎಂದು ಹೇಳಿದರು.

ವೃತ್ತಿ ನಿರತ ಕಾಯಕ ಸಮುದಾಯದ ಬಗ್ಗೆ ಗೌರವವಿರಲಿ ಮಧು ಬಂಗಾರಪ್ಪಗೆ ರಘು ಕೌಟಿಲ್ಯ ಸಲಹೆ

ವೃತ್ತಿ ನಿರತ ಕಾಯಕ ಸಮುದಾಯಗಳನ್ನು ಗೌರವದಿಂದ ಕಾಣುವ ಸಂಸ್ಕಾರ ಬೆಳೆಸಿಕೊಳ್ಳಲಿ ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲಹೆ ನೀಡಿದ್ದಾರೆ.

ನನಗೆ ಹೇಕ್ ಕಟ್ ಮಾಡುವವರು ಫ್ರೀ ಇಲ್ಲ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಫ್ರೀಯಾಗಿದ್ದರೆ ಬಂದು ಕಟ್ಟಿಂಗ್ ಮಾಡಲಿ ಎಂಬ ಮಧು ಬಂಗಾರಪ್ಪ ಹೇಳಿಕೆಯನ್ನು ತಮ್ಮ ಎಕ್ಸ್ ಖಾತೆಯಲ್ಲಿ ಟ್ಯಾಗ್ ಮಾಡಿ ಈ ಹೇಳಿಕೆ ನೀಡಿದ್ದಾರೆ. ಮಧು ಬಂಗಾರಪ್ಪನವರು ಕೇಶಾಲಂಕಾರ ಮಾಡಿಕೊಳ್ಳದಿದ್ದರೂ ಪರ್ವಾಗಿಲ್ಲ. ಆದರೆ ಹೆಂಡದ ಮಾರಯ್ಯ ವೃತ್ತಿ ತ್ಯಜಿಸಿ, ಶರಣ ಶ್ರೇಷ್ಠನಾಗಲು ಪ್ರಭಾವ ಬೀರಿದ ಅಣ್ಣ ಬಸವಣ್ಣನವರ ಬಲಗೈಯಂತಿದ್ದ ಮಹಾ ಶರಣ ಹಡಪದ ಅಪ್ಪಣ್ಣನ ಸಮಾಜ ಸೇರಿದಂತೆ ಕಾಯಕ ಸಮುದಾಯಕ್ಕೆ ಗೌರವ ನೀಡಲಿ ಎಂದು ಹೇಳಿದ್ದಾರೆ. ಶಿಕ್ಷಣ ಪರಿಶುಭ್ರತೆಗೆ ಕಪ್ಪು ಚುಕ್ಕೆ ಸಂಕೇತಿಸುವ ವಿಕೃತಿ ಅಳವಡಿಸಿಕೊಂಡಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮುಖಕ್ಕೆ ಕನ್ನಡಿ ಹಿಡಿದು ತಿಳಿ ಹೇಳಿದ ನಮ್ಮ ರಾಜ್ಯಾಧ್ಯಕ್ಷ ವಿಜಯೇಂದ್ರ ಸಲಹೆಯನ್ನು ಸಕರಾತ್ಮಕವಾಗಿ ಸ್ವೀಕರಿಸುವ ಬದಲು ವಿಚಲಿತಗೊಂಡಂತೆ ಪ್ರತಿಕ್ರಿಯಿಸಿದ್ದಾರೆ ಎಂದು ರಘು ಕೌಟಿಲ್ಯ ಕಿಡಿಕಾರಿದ್ದಾರೆ.

ಎನ್‌ಡಿಎ ಅಭ್ಯರ್ಥಿ ಬೆಂಬಲಿಸುವ ವಿಶ್ವಾಸ

ಬಗ್ಗೆ ಪ್ರಸ್ತಾಪಿಸಬೇಕು. ಯಾವುದೇ ಕಾರಣಕ್ಕೂ ಮೈಮರೆಯದೇ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಬಿಜೆಪಿ ನಗರಾಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕಾಂಗ್ರೆಸ್ ಆಡಳಿತದಿಂದ ಶಿಕ್ಷಕರು ಬೇಸತ್ತಿದ್ದಾರೆ. ಬೇಡಿಕೆಗಳ ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ನೂತನ ಶಿಕ್ಷಣ ನೀತಿಯನ್ನು ಕೈ ಬಿಟ್ಟು ಹಳೆಯ ಪದ್ಧತಿ ಆರಂಭಿಸಿರುವುದು ಸರಿಯಲ್ಲ. ಶಿಕ್ಷಣದಲ್ಲಿ ರಾಜಕೀಯ ಮಾಡುತ್ತಿರುವ ಈ ಸರ್ಕಾರಕ್ಕೆ ಚುನಾವಣೆಯ ಫಲಿತಾಂಶದ ಮೂಲಕ ಉತ್ತರ ಕೊಡಬೇಕಾಗಿದೆ ಎಂದರು. ಸಭೆಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ನಿರಂಜನ್ ಮೂರ್ತಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೈಸೂರು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ವಿಭಾಗೀಯ ಪ್ರಭಾರಿ ಮೈ.ವಿ.ರವಿಶಂಕರ್, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಕೇಬಲ್ ಮಹೇಶ್, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಒಗ್ಗಟ್ಟಿನಿಂದ ಕೆಲಸ ಮಾಡಲು ಸಲಹೆ

ಮನವೊಲಿಸಬೇಕು. ನಗರ ಪ್ರದೇಶದಲ್ಲಿ ಮತದಾನದ ಪ್ರಮಾಣ ಹೆಚ್ಚಾಗುವಂತೆ ಮಾಡಿದರೆ ಗೆಲುವು ಸುಲಭವಾಗಲಿದೆ ಎಂದು ಸಲಹೆ ನೀಡಿದರು.

ಜೆಡಿಎಸ್ ಅಭ್ಯರ್ಥಿಗೆ ಚುನಾವಣೆ ಹೊಸದಾಗಿದ್ದರೂ, ಪಕ್ಷ ಹಳೆಯದು. ವ್ಯಕ್ತಿಗಿಂತ ಪಕ್ಷ ಮುಖ್ಯ. ಈ ಕ್ಷೇತ್ರ ಪಕ್ಷದ ಭದ್ರಕೋಟೆ ಎನ್ನುವುದನ್ನು ನಿರೂಪಿಸಲು ದೊಡ್ಡ ಅವಕಾಶವಿದೆ. ಇದರಲ್ಲಿ ಕೆಲಸ ಮಾಡದೆ ಸುಮ್ಮನಾದರೆ ಅಂತಹವರ ಬಗ್ಗೆ ಗಮನಹರಿಸಲಾಗುವುದು. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲ ಪಡಿಸಲು ಈ ಚುನಾವಣೆ ಮಹತ್ವದ್ದಾಗಿದೆ ಎಂದರು. ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ವಿಧಾನ ಪರಿಷತ್ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಗೆಲ್ಲಲೇಬೇಕು. ಈ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಒಂದಾಗಿರುವುದರಿಂದ ಕಾಂಗ್ರೆಸ್ ವಲಯದಲ್ಲಿ ನಡುಕ ಉಂಟು ಮಾಡಿದೆ. ಹೆಚ್.ಡಿ.ಕುಮಾರಸ್ವಾಮಿ–ವಿಜಯೇಂದ್ರ ಅವರಿಗೆ ಗೆಲುವಿನ ಉಡುಗೊರೆ ನೀಡಬೇಕು. ಪಕ್ಷದ ಮುಖಂಡರು ತಮ್ಮಲ್ಲಿರುವ ಕೆಲವು ವಿಚಾರಗಳನ್ನು ತೆಗೆಯಬೇಕು. ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಬರುವ ಕಾರಣ ಪಕ್ಷ ಸೋಲಬಾರದು ಎಂದು ತಿಳಿಸಿದರು. ಸಭೆಯಲ್ಲಿ ಮಾಜಿ ಶಾಸಕ ಎಂ.ಅಶ್ವಿನ್‌ಕುಮಾರ್, ಅಭ್ಯರ್ಥಿ ಕೆ.ವಿವೇಕಾನಂದ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಮಹದೇಶ್, ಅಶ್ವಿನಿ ಅನಂತು, ಎಸ್‌ಬಿಎಂ ಮಂಜು, ರಮೇಶ್ ರಮಣಿ, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯಾದರ್ಶನ್ ಇನ್ನಿತರರು ಪಾಲ್ಗೊಂಡಿದ್ದರು.

ನವೀನ್‌ಗೌಡ, ಚೇತನ್ ಎಸ್‌ಐಟಿಯಿಂದ ಬಂಧನ

ಎಂಬ ಆರೋಪ ಇವರ ಮೇಲಿದೆ. ನವೀನ್ ಮತ್ತು ಇತರರ ವಿರುದ್ಧ ಪ್ರಜ್ವಲ್ ರೇವಣ್ಣ ಅವರ ಚುನಾವಣಾ ಏಜೆಂಟ್ ಪೂರ್ಣಚಂದ್ರ ತೇಜಸ್ವಿ ಏಪ್ರಿಲ್ 23ರಂದು ಹಾಸನ ಕೇಂದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು. ಏಪ್ರಿಲ್ 21ರ ಸಂಜೆಯಿಂದ ಈ ಆರೋಪಿಗಳು ಸಿಡಿ ಮತ್ತು ಪೆನ್‌ಡ್ರೈವ್, ಗೋಡೆ ಬರಹ ಹಾಗೂ ಪೋಸ್ಟರ್‌ಗಳನ್ನು ಹಂಚಿದ್ದರು. ಪ್ರಜ್ವಲ್ ರೇವಣ್ಣ ಅವರ ಬಗ್ಗೆ ಅಶ್ಲೀಲ ಭಾವಚಿತ್ರ ಮತ್ತು ವಿಡಿಯೋಗಳನ್ನು ತಯಾರಿಸಿಕೊಂಡು ಹಾಸನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮನೆ ಮನೆಗೆ ತೆರಳಿ ಮೊಬೈಲ್‌ಗಳಲ್ಲಿ ತೋರಿಸಿ ಮತ್ತು ಹಂಚಿಕೆ ಮಾಡಿ ಜನರ ದಿಕ್ಕು ತಪ್ಪಿಸಿ ಅಭ್ಯರ್ಥಿ ಪರವಾಗಿ ಮತದಾನ ಮಾಡದಂತೆ ಪ್ರಚೋದಿಸುತ್ತಿದ್ದಾರೆ. ಹಾಗೂ ಚುನಾವಣೆಯಲ್ಲಿ ನ್ಯಾಯಯುತ ಮತದಾನ ಆಗುವುದನ್ನು ತಪ್ಪಿಸುವ ಸಲುವಾಗಿ ದುಷ್ಕೃತ್ಯವನ್ನು ಎಸಗುತ್ತಿರುವ ಇವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ದೂರು ನೀಡಿದ್ದರು. ಇದಾದ ನಂತರ ಅಶ್ಲೀಲ ಸಿಡಿ ಮತ್ತು ಪೆನ್‌ಡ್ರೈವ್‌ಗಳನ್ನು ಹಂಚಿಕೆ ಮಾಡಿದ ಆರೋಪ ಪ್ರಕರಣದ ತನಿಖೆಯನ್ನು ಪೊಲೀಸರಿಂದ ಎಸ್‌ಐಟಿಗೆ ವರ್ಗಾವಣೆ ಮಾಡಲಾಗಿತ್ತು.

ತದನಂತರ ಇವರು ನಿರೀಕ್ಷಣಾ ಜಾಮೀನು ಕೋರಿ ವಿಚಾ ರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿ ವಜಾಗೊಂಡ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಪ್ರಕರಣ ದಾಖಲಾದ ನಂತರ ಆರೋಪಿಗಳು ತಲೆ ಮರೆಸಿಕೊಂಡಿದ್ದರು, ಇವರು ಶಕ್ತಿಸೌಧದಲ್ಲೇ ರಾಜಾ ರೋಷವಾಗಿ ಓಡಾಡಿಕೊಂಡಿದ್ದಾರೆಂದು

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದರು. ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ 6 ಮತ್ತು 7ನೇ ಆರೋಪಿಗಳನ್ನೂ ಎಸ್‌ಐಟಿ ಈಗಾಗಲೇ ವಶಕ್ಕೆ ಪಡೆದಿದೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ಇದೇ 31ಕ್ಕೆ ಎಸ್‌ಐಟಿ ಮುಂದೆ ಹಾಜರಾಗುವುದಾಗಿ ನೀಡಿದ ಹೇಳಿಕೆ ಬೆನ್ನಲ್ಲೇ ಈ ಆರೋಪಿಗಳ ಬಂಧನ ಕುತೂಹಲ ಮೂಡಿಸಿದೆ.

ಬಿಜೆಪಿ ಸರಳ ಬಹುಮತದಿಂದ ಅಧಿಕಾರಕ್ಕೆ ಬಂದರೂ ಸಂವಿಧಾನ ಬದಿಗಿರಿಸಿ ಮನುಸ್ಮೃತಿ ಆಧರಿತ ಆಡಳಿತ

- ಪ್ರಗತಿಪರ ಚಿಂತಕ ಶಿವಸುಂದರ್ ಆರೋಪ
- ಇದರ ಪರಿಣಾಮ ಅಸಮಾನತೆ, ಅನ್ಯಾಯದ ಆಡಳಿತ
- ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೂ ಅಸ್ಥಿರಗೊಳಿಸುವ ಕುತಂತ್ರ

ಮೈಸೂರು, ಮೇ 28(ಎಂಟಿವೈ)– ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸರಳ ಬಹುಮತದಿಂದ ಅಧಿಕಾರಕ್ಕೆ ಬಂದರೂ ಡಾ. ಬಿ.ಆರ್.ಅಂಬೇಡ್ಕರ್ ಕೊಡುಗೆ ನೀಡಿರುವ ಸಂವಿಧಾನವನ್ನು ಬದಿಗಿರಿಸಿ, ಮತ್ತೆ ಮನುಸ್ಮೃತಿ ಆಧಾರಿತ ಅಸಮಾನತೆ ಮತ್ತು ಅನ್ಯಾಯದ ಆಡಳಿತ ಜಾರಿಗೆ ತರುತ್ತಾರೆ ಎಂದು ಪ್ರಗತಿಪರ ಚಿಂತಕ, ಅಂಕಣಕಾರ ಶಿವಸುಂದರ್ ಆರೋಪಿಸಿದ್ದಾರೆ.

ಮೈಸೂರಿನ ಅಶೋಕ ವೃತ್ತದ ಬಳಿಯ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಅಶೋಕಪುರಂ ಅಭಿಮಾನಿಗಳ ಬಳಗ, ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ಹಾಗೂ ವಿಶ್ವಮೈತ್ರಿ ಬುದ್ಧ ವಿಹಾರದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ '2024ರ ಚುನಾವಣೋತ್ತರ ಭಾರತ' ಕುರಿತ ಮುಕ್ತ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400ಕ್ಕಿಂತ ಹೆಚ್ಚು ಸ್ಥಾನ ಗಳಿಸುವುದಾಗಿ ಹೇಳಿಕೊಳ್ಳುತ್ತಿದೆ. ಭಾರಿ ಅಂತರದ ಬಹುಮತ ಪಡೆಯುವ ನಿರೀಕ್ಷೆ ಬಿಜೆಪಿಯದ್ದಾಗಿದೆ. ಆದರೆ ಈ ಬಾರಿ ಸರಳ ಬಹುಮತ ಪಡೆದರೂ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುತ್ತಾರೆ. ಈ ಹಿಂದೆಯೇ ಸಂವಿಧಾನ ಬದಲಿಸುತ್ತೇವೆ ಎಂದಿದ್ದ ಬಿಜೆಪಿಗರು, ಈ ಬಾರಿ ಅಧಿಕಾರಕ್ಕೆ ಬಂದ ನಂತರ ಸಂವಿಧಾನವನ್ನು ಬದಿಗಿರಿಸಿ, ಮತ್ತೆ ಮನುಸ್ಮೃತಿ ಆಧಾರಿತ ಅಸಮಾನತೆ ಮತ್ತು ಅನ್ಯಾಯದ ಆಡಳಿತವನ್ನು ಜಾರಿಗೆ ತರುತ್ತಾರೆ. ಮೀಸಲಾತಿಯನ್ನು ರದ್ದುಗೊಳಿಸಿ, ಗುಪ್ತರ ಕಾಲದ ಗುಲಾಮಗಿರಿಯ ಪರಿಸ್ಥಿತಿಗೆ ಬಿಜೆಪಿ ನಮ್ಮನ್ನು ನೂಕುತ್ತದೆ. ಅಂಬಾನಿ–ಅದಾನಿ ಸೇರಿದಂತೆ ಬಂಡವಾಳಶಾಹಿಗಳಿಗೆ ದೇಶದ ಸಂಪತ್ತನ್ನು ಒಪ್ಪಿಸುತ್ತದೆ ಎಂದು ಕಿಡಿಕಾರಿದರು.



ಮೈಸೂರಿನ ಅಶೋಕ ವೃತ್ತದ ಬಳಿಯಿರುವ ಬುದ್ಧ ವಿಹಾರದಲ್ಲಿ ನಡೆದ 'ಚುನಾವಣೋತ್ತರ ಭಾರತ' ಸಂವಾದ ಕಾರ್ಯಕ್ರಮವನ್ನು ಪ್ರಗತಿಪರ ಚಿಂತಕ, ಅಂಕಣಕಾರ ಶಿವಸುಂದರ್ ಸಂವಿಧಾನದ ಪ್ರಸ್ತಾವನೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ಈ ಚುನಾವಣೆಯಲ್ಲಿ ಇಂಡಿಯಾ ಒಕ್ಕೂಟ ಅಧಿಕಾರಕ್ಕೆ ಬಂದರೂ ಬಿಜೆಪಿಗರು ಭ್ರಮನಿರಸನಗೊಂಡು, ಆಡಳಿತ ನಡೆಸಲು ಅವಕಾಶ ಕೊಡುವುದಿಲ್ಲ. ಸರ್ಕಾರವನ್ನು ಅಸ್ಥಿರಗೊಳಿಸಲು ತಂತ್ರ–ಕುತಂತ್ರ ನಡೆಸುತ್ತದೆ ಎಂದರು.

ಚುನಾವಣಾ ಆಯೋಗವೂ ಬೆಂಬಲಿಸುತ್ತಿದೆ: ಈ ಹಿಂದಿನಿಂದಲೂ ಚುನಾವಣಾ ಆಯೋಗ ಮುಕ್ತ ಮತ್ತು ನಿರ್ಭೀತ ಚುನಾವಣೆ ನಡೆಸುತ್ತಾ ಘನತೆಯನ್ನು ಕಾಪಾಡಿಕೊಂಡಿತ್ತು. 2014ರ ಲೋಕಸಭಾ ಚುನಾವಣೆಯ ನಂತರ ಆಯೋಗ ಬಿಜೆಪಿ ಪರವಾಗಿ ನಿಲುವು ತಾಳುತ್ತಿದೆ. ಬಿಜೆಪಿಗೆ ಎಲ್ಲಾ ಮಾರ್ಗದಲ್ಲೂ ಅನುಕೂಲ ಮಾಡಿಕೊಡಲು ಪ್ರಯತ್ನಿಸುತ್ತಿದೆ. ಬಿಜೆಪಿ ನಾಯಕರು ನೀತಿ ಸಂಹಿತೆಯನ್ನು ಉಲ್ಲಂಘಿಸಿ ಪ್ರಚೋದನಾಕಾರಿಯಾಗಿ ಮಾತನಾಡಿದರೂ ಚುನಾವಣಾ ಆಯೋಗ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ನಿಷ್ಪಕ್ಷಪಾತ, ನ್ಯಾಯ ಸಮ್ಮತವಾದ ಚುನಾವಣೆಯನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಹೇಗಾದರೂ ಮಾಡಿ ಅಧಿಕಾರದ ಗದ್ದುಗೆ ಏರಬೇಕೆಂದು ಹವಣಿಸುತ್ತಿದೆ. ಸ್ಪಷ್ಟ ಬಹುಮತ ಬಾರದೆ, ಬೇರೆ ಪಕ್ಷಗಳ ಸಹಕಾರದಿಂದ ಸರ್ಕಾರ ರಚನೆ ಮಾಡುವ ಪರಿಸ್ಥಿತಿ ಎದುರಾದರೆ ಕಾಂಗ್ರೆಸ್, ಆರ್‌ಜೆಡಿ, ಡಿಎಂಕೆ ಮತ್ತು ಕಮ್ಯುನಿಸ್ಟ್ ಪಕ್ಷಗಳನ್ನು ಹೊರತುಪಡಿಸಿ ಇಂಡಿಯಾ ಒಕ್ಕೂಟದ ಇತರೆ ಪಕ್ಷಗಳೊಂದಿಗೆ ಬಿಜೆಪಿ ಕೈಜೋಡಿಸಿದರೂ ಅಚ್ಚರಿಪಡಬೇಕಿಲ್ಲ ಎಂದರು.

ಮೋದಿ ಹವಾ ಕಡಿಮೆ: ಪ್ರಧಾನಿ ಮೋದಿ ಅವರು 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಾಗಿ ಹೇಳಿಕೊಂಡು ಅಧಿಕಾರಕ್ಕೆ ಬಂದರೂ ಭ್ರಷ್ಟಾಚಾರವನ್ನು ಕಡಿಮೆ ಮಾಡಲಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಪುಲ್ವಾಮ ದಾಳಿಯನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡು ಅಧಿಕಾರಕ್ಕೆ ಬಂದರು. ಈ ಲೋಕಸಭಾ ಚುನಾವಣೆಯಲ್ಲಿ ಅಯೋಧ್ಯೆಯ ರಾಮಮಂದಿರವನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡರು. ಬಿಜೆಪಿ, ಗೆದ್ದರೂ, ಸೋತರೂ ಮೋದಿ ಹವಾ ಈಗ ಕಡಿಮೆಯಾಗಿದೆ. ಆದ್ದರಿಂದಲೇ ಅವರು ಚುನಾವಣಾ ಭಾಷಣಗಳಲ್ಲಿ ಪ್ರಚೋದನಾಕಾರಿಯಾಗಿ ಮಾತನಾಡುತ್ತಿದ್ದಾರೆ. ಆದರೆ ವಿರೋಧ ಪಕ್ಷಗಳ ಇಂಡಿಯಾ ಒಕ್ಕೂಟ ಈ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಬೇಕಾದ ಪ್ರಚಾರ, ಶಕ್ತಿ, ಪ್ರಭಾವ ಇತ್ತೇ ಎಂಬುದು ಚುನಾವಣೆಯ ನಂತರ ತಿಳಿಯುತ್ತದೆ ಎಂದು ಅಭಿಪ್ರಾಯಪಟ್ಟರು.

ಹಿಂದುತ್ವದ ಅಜೆಂಡಾವನ್ನೇ ಉಸಿರಾಗಿಸಿಕೊಂಡಿರುವ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೂ, ಕಾಂಗ್ರೆಸ್ ಮತ್ತಿತರ ಪಕ್ಷಗಳ ಕೆಲವು ಮುಖಂಡರ ತಲೆಗೆ ಹೊಕ್ಕಿರುವ ಹಿಂದುತ್ವದ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ಬಿಜೆಪಿಯನ್ನು ಸೋಲಿಸುವುದರ ಜೊತೆಗೆ ಅಸಮಾನತೆಯ ಗೂಡಾಗಿರುವ ಹಿಂದುತ್ವದ ರಾಜಕಾರಣ ಮತ್ತು ಬ್ರಾಹ್ಮಣಶಾಹಿ ಮನಸ್ಥಿತಿಯನ್ನೂ ಸೋಲಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆಎನ್. ಲಿಂಗಪ್ಪಮಾತನಾಡಿ, ಜವಹರಲಾಲ್ ನೆಹರು ಸಾಕಷ್ಟು ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಆದರೆ ಹತ್ತು ವರ್ಷಗಳ ಆಡಳಿತದ ಅವಧಿಯಲ್ಲಿ ಒಂದು ಸಾರ್ವಜನಿಕ ಸಂಸ್ಥೆಯನ್ನೂ ಸ್ಥಾಪಿಸದ ನರೇಂದ್ರ ಮೋದಿ ಬಹುತೇಕ ಸಾರ್ವಜನಿಕ ಸಂಸ್ಥೆಗಳನ್ನು ಬಂಡವಾಳಶಾಹಿಗಳಿಗೆ ಮಾರಾಟ ಮಾಡಿದರು. ಕೇಂದ್ರ ಸರ್ಕಾರದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಅವುಗಳನ್ನು ಭರ್ತಿ ಮಾಡಲಿಲ್ಲ. ಹಸಿ ಸುಳ್ಳುಗಳನ್ನು ಹೇಳುವುದನ್ನು ಬಿಟ್ಟು ನರೇಂದ್ರಮೋದಿ ಯಾವ ಕೆಲಸವನ್ನೂ ಮಾಡಿಲ್ಲ ಎಂದರು.

ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ಕೆ.ಎಸ್. ಭಗವಾನ್, ಮಾಜಿ ಮೇಯರ್ ಪುರುಷೋತ್ತಮ್, ಮೆಸ್ಕೋ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪ್ರೊ. ಸಬೀರ್ ಮುಸ್ತಫಾ, ಸಾಹಿತಿ ಸಿದ್ದಸ್ವಾಮಿ, ದಲಿತ ವೆಲ್ಫೇರ್ ಟ್ರಸ್ಟ್ ಗೌರವಾಧ್ಯಕ್ಷ ಪ್ರೊ.ಟಿ.ಎಂ. ಮಹೇಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಉಚಿತವಾಗಿ ಬಿತ್ತನೆ ಬೀಜ, ರಸಗೊಬ್ಬರ ಕಲ್ಪಿಸಲು ಆಗ್ರಹ



ಮೈಸೂರಿನ ಗನ್‌ಹೌಸ್ ಸಮೀಪದ ಉದ್ಯಾನವನದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ತಾಲೂಕು ಘಟಕದ ಸದಸ್ಯರು ಸಭೆ ನಡೆಸಿದರು.

ಮೈಸೂರು, ಮೇ 28(ಎಂಟಿವೈ)– ಬರಗಾಲದಿಂದ ರೈತರು ತತ್ತರಿಸಿರುವ ಹಿನ್ನೆಲೆಯಲ್ಲಿ ಈ ಬಾರಿ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಉಚಿತವಾಗಿ ನೀಡುವುದರೊಂದಿಗೆ ಆರ್‌ಟಿಸಿಗೆ ಆಧಾರ್ ನಂಬರ್ ಲಿಂಕ್ ಮಾಡುವ ಪ್ರಕ್ರಿಯೆ ಸರಳೀಕರಿಸುವಂತೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ತಾಲೂಕು ಘಟಕ ಆಗ್ರಹಿಸಿದೆ.

ರೈತರ ಬೇಡಿಕೆ

- ಖಾಸಗಿ ಹಣಕಾಸು ಸಂಸ್ಥೆಗಳು ಸಾಲ ವಸೂಲಿಗೆ ಗೂಂಡಾಗಳ ಬಳಸಿಕೊಳ್ಳುವುದಕ್ಕೆ ಬ್ರೇಕ್ ಹಾಕಿ
- ಕಬ್ಬಿನ ಹೆಚ್ಚುವರಿ ದರ ಪಾವತಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು
- ಗಾಳಿ–ಮಳೆಯಿಂದ ಹಾನಿಗೀಡಾದ ಬೆಳೆಗೆ ಪರಿಹಾರ ಕಲ್ಪಿಸಬೇಕು

ಮೈಸೂರಿನ ಗನ್‌ಹೌಸ್ ಬಳಿಯಿರುವ ಉದ್ಯಾನವನದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ತಾಲೂಕು ಘಟಕದ ಮುಖಂಡರು ಸಭೆ ನಡೆಸಿ, ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿದರು.

ಕಳೆದ ವರ್ಷ ತೀವ್ರ ಬರಗಾಲದ ಹಿನ್ನೆಲೆಯಲ್ಲಿ ರೈತರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಈ ಬಾರಿ ರೈತರಿಗೆ ಕೃಷಿ ಚಟುವಟಿಕೆ ಮಾಡಲು ಬಿತ್ತನೆ ಬೀಜ, ರಸಗೊಬ್ಬರ ಉಚಿತವಾಗಿ ನೀಡಬೇಕು. ಆರ್‌ಟಿಸಿಗೆ ಆಧಾರ್ ಲಿಂಕ್ ಮಾಡುವುದನ್ನು ಸರಳೀಕರಣಗೊಳಿಸಬೇಕು. ಬರ ಪರಿಹಾರದ ಹಣ ಎಲ್ಲಾ ರೈತರಿಗೂ ಸಿಗುವಂತೆ ಕ್ರಮ ಕೈಗೊಳ್ಳಬೇಕು. ಸರ್ಕಾರ ಘೋಷಣೆ ಮಾಡಿರುವ ಕಬ್ಬಿನ ಹೆಚ್ಚುವರಿ ದರ ಟನ್‌ಗೆ 150 ರೂ. ಬಣ್ಣಾರಿ ಸಕ್ಕರೆ ಕಾರ್ಖಾನೆ ರೈತರಿಗೆ ಇನ್ನೂ ಪಾವತಿ ಮಾಡಿಲ್ಲ. ತಾಲೂಕಿನ ಕಬ್ಬು ಬೆಳೆಗಾರರಿಗೆ ಹಣ ಕೊಡಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಒಕ್ಕೊರಲಿನಿಂದ ಒತ್ತಾಯಿಸಲಾಯಿತು.

ಈ ವೇಳೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್ ಮಾತನಾಡಿ, ಇತ್ತೀಚೆಗೆ ಭಾರಿ ಮಳೆ–ಗಾಳಿಯಿಂದ ಮೈಸೂರು ತಾಲೂಕಿನಲ್ಲಿ ರೈತರು ಬೆಳೆದ ಬಾಳೆ, ಕಬ್ಬು, ಮಾವು ಹಾಗೂ ಇನ್ನಿತರ ಬೆಳೆಗಳಿಗೆ ಹಾನಿಯಾಗಿದೆ. ಈ ಕುರಿತು ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಸಮೀಕ್ಷೆ ನಡೆಸಿ ನ್ಯಾಯಯುತ ಪರಿಹಾರ ಹಣ ಸಮರ್ಪಕವಾಗಿ ರೈತರಿಗೆ ಕೊಡಿಸಬೇಕು. ಮುಂಗಾರು ಮಳೆ ಆರಂಭವಾಗುತ್ತಿರುವ ಕಾರಣ ತಾಲೂಕಿನ ಎಲ್ಲಾ ಕೆರೆಗಳ, ಕಾಲುವೆಗಳ ಹೂಳೆತ್ತುವ ಕಾರ್ಯ ಸಮರೋಪಾದಿಯಲ್ಲಿ ಕೈಗೊಂಡು ಕೆರೆ–ಕಟ್ಟೆ ತುಂಬಿಸಲು ಕ್ರಮ ಕೈಗೊಳ್ಳಬೇಕು.

ಇದರಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಅಂತರ್ಜಲ ವೃದ್ಧಿಯಾಗಲು ಸಹಕಾರಿಯಾಗುತ್ತದೆ. ಬರ ಪರಿಹಾರ ಜಂಟಿ ಖಾತೆದಾರ ರೈತರಿಗೆ ಬಗರ್‌ಹುಕುಂ ಸಾಗುವಳಿ ರೈತರಿಗೆ ಪರಿಹಾರ ನೀಡುವಂತಾಗಬೇಕು. ಬ್ಯಾಂಕುಗಳು ಸರ್ಕಾರದ ಪರಿಹಾರದ ಹಣ ರೈತರ ಸಾಲದ ಖಾತೆಗೆ ಜಮಾ ಮಾಡಿಕೊಳ್ಳುವುದನ್ನು ತಪ್ಪಿಸಬೇಕು, ಎಲ್ಲ ಬ್ಯಾಂಕುಗಳ ಮುಂದೆ ರೈತರಿಗೆ ಸಿಗುವ ಸಾಲ ಸೌಲಭ್ಯ ಮಾಹಿತಿ ಒದಗಿಸಬೇಕು. ಖಾಸಗಿ ಹಣಕಾಸು ಸಂಸ್ಥೆಗಳು ಸಾಲ ವಸೂಲಾತಿಗಾಗಿ ಗೂಂಡಾಗಳ ಬಳಸುತ್ತಿದ್ದು, ಇದಕ್ಕೆ ನಿಯಂತ್ರಣ ಹಾಕಬೇಕು. ಎನ್‌ಆರ್‌ಇಜಿ ಕಾಮಗಾರಿ ಹಣ ಬಿಡುಗಡೆ ಮಾಡಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು

ಸಭೆಯಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ತಾಲೂಕು ಅಧ್ಯಕ್ಷ ಲಕ್ಷ್ಮಿಪುರ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಕಾಟೂರು ಮಾದೇವಸ್ವಾಮಿ, ವರಕೋಡು ನಾಗೇಶ್, ಸಂಘಟನಾ ಕಾರ್ಯದರ್ಶಿ ಗಿರೀಶ್, ನಂಜುಂಡಸ್ವಾಮಿ, ಸಿದ್ದರಾಮು, ಪ್ರಕಾಶ್, ಸೋಮು, ಮುಖಂಡರುಗಳಾದ ಶ್ರೀಕಂಠ ನಾಗೇಶ್, ಶಿವಣ್ಣ ಚೋರನಹಳ್ಳಿ ಪುಟ್ಟಸ್ವಾಮಿ, ಮಾರ್ಬಳ್ಳಿ ಗುಂಡು, ಬಸವರಾಜು ಇನ್ನಿತರರು ಪಾಲ್ಗೊಂಡಿದ್ದರು.

ಆನ್‌ಲೈನ್‌ನಲ್ಲಿ ಷೇರು ಮಾರುಕಟ್ಟೆ ಪ್ರವೇಶಿಸಿ ಲಕ್ಷಾಂತರ ರೂ. ಕಳೆದುಕೊಂಡ ವೃದ್ಧರು

ಮೈಸೂರು, ಮೇ 28(ಎಸ್‌ಪಿಎನ್)– ಫೇಸ್‌ಬುಕ್‌ನಲ್ಲಿ ಷೇರು ಮಾರುಕಟ್ಟೆ ಜಾಹಿರಾತು ನೋಡಿ ವೃದ್ಧರಿಬ್ಬರು ಲಕ್ಷಾಂತರ ರೂ ಕಳೆದುಕೊಂಡಿರುವ ಘಟನೆ ಮೈಸೂರಿನಲ್ಲಿ ನಡೆದಿದ್ದು, ಈ ಸಂಬಂಧ ಸೆನ್ ಠಾಣೆಯಲ್ಲಿ ಎರಡು ಪ್ರತ್ಯೇಕ ದೂರು ದಾಖಲಾಗಿವೆ.

ಮೊದಲ ಪ್ರಕರಣ: ವಿಜಯನಗರ ನಿವಾಸಿ ಸತೀಶ್, ಫೇಸ್‌ಬುಕ್‌ನಲ್ಲಿ ಷೇರು ಮಾರುಕಟ್ಟೆ ಹೂಡಿಕೆ ಜಾಹೀರಾತು ನೋಡಿದ್ದಾರೆ. ಇದರಿಂದ ಪ್ರೇರಿತರಾಗಿ ಸಿಐಎನ್‌ವಿ ಎಂ/ಎಫ್ ಸಂಸ್ಥೆ ಸದಸ್ಯತ್ವ ಪಡೆದುಕೊಂಡಿದ್ದಾರೆ.

ಈ ಸಂಸ್ಥೆಯ ಪ್ರತಿನಿಧಿಗಳು ನೀಡಿದ ಸಲಹೆ ಮೇರೆಗೆ ಕೆನರಾ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದು ಏ.2ರಿಂದ ಹಂತ ಹಂತವಾಗಿ ಒಟ್ಟು 86 ಲಕ್ಷ ರೂ. ಹಣ ಹೂಡಿಕೆ ಮಾಡಿದ್ದಾರೆ. ನಂತರ ಷೇರು ಹೂಡಿಕೆ ಬಗ್ಗೆ ಮಾಹಿತಿ ಪಡೆಯಲು ಸಂಸ್ಥೆಯವರನ್ನು ಸಂಪರ್ಕಿಸಿದಾಗ ಯಾರೂ ಪ್ರತಿಕ್ರಿಯೆ ನೀಡದ ಹಿನ್ನಲೆಯಲ್ಲಿ ತಾನು ಮೋಸ ಹೋಗಿರುವುದು ತಿಳಿದು ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಎರಡನೇ ಪ್ರಕರಣ: ಷೇರು ವಹಿವಾಟಿನಲ್ಲಿ ತೊಡಗಿಸಿದರೆ ಲಕ್ಷಾಂತರ ರೂ ಲಾಭದ ಆಸೆ ತೋರಿಸಿ ವೃದ್ಧರೊಬ್ಬರಿಗೆ 21,74,773 ರೂ. ವಂಚಿಸಿದ್ದು, ಈ ಸಂಬಂಧ ಮೈಸೂರಿನ ಸೆನ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೈಸೂರು ಜೆ.ಪಿ.ನಗರ ನಿವಾಸಿ ಬಿ.ಎಸ್.ವೆಂಕಟೇಶ್ ವಂಚನೆಗೊಳಗಾದವರು. ವಾಟ್ಸಾಪ್ ಗ್ರೂಪ್‌ನಲ್ಲಿ ಜಾಯಿನ್ ಆಗುವಂತೆ ವೆಂಕಟೇಶ್ ಮೊಬೈಲ್‌ಗೆ ಲಿಂಕ್ ಕಳುಹಿಸಿ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವಂತೆ ಅವರಿಗೆ ಸಲಹೆ ನೀಡಿದ್ದಾರೆ. ನಂತರ ಇವರ ಮಾತು ನಂಬಿ ಹಂತ ಹಂತವಾಗಿ ಒಟ್ಟು 21,74,773 ಹಣ ಹೂಡಿಕೆ ಮಾಡಿದ್ದಾರೆ.

ನಂತರ ವೆಂಕಟೇಶ್ ಲಾಭದ ಹಣವನ್ನು ತಮ್ಮ ಅಕೌಂಟ್‌ನಿಂದ ವಿತ್ ಡ್ರಾ ಮಾಡಲು ಹೋದಾಗ ಶೇ.30% ಕಮಿಷನ್ ಕೇಳಿದ್ದಾರೆ. ಈ ಹಂತದಲ್ಲೂ 3 ಲಕ್ಷ ಹಣ ಕಟ್ಟಿದ್ದಾರೆ. ಮತ್ತೆ ಲಾಭದ ಹಣ ಡ್ರಾ ಮಾಡಲು ಯತ್ನಿಸಿದಾಗ ಪುನಃ 2 ಲಕ್ಷ ಕಟ್ಟುವಂತೆ ವಂಚಕರು ಒತ್ತಾಯಿಸಿದ್ದಾರೆ. ಪದೇ ಪದೆ ಹಣ ಕೇಳುರುವುದನ್ನು ಗಮನಿಸಿದ ವೆಂಕಟೇಶ್ ಅವರು, ತಾವು ಆನ್‌ಲೈನ್ ಮೂಲಕ ವಂಚನೆಗೊಳಗಾಗಿರುವುದು ಅರಿವಿಗೆ ಬಂದು ಮೈಸೂರಿನ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.


ಆಮಿಷಗಳಿಗೆ ಒಳಗಾಗಿ ಮತ ಮಾರಾಟ ಮಾಡಿಕೊಳ್ಳಬೇಡಿ

ಶಿಕ್ಷಕ ಮತದಾರರಿಗೆ ಎಂಎಲ್‌ಸಿ ಡಾ.ತಿಮ್ಮಯ್ಯ ಸಲಹೆ

ಮೈಸೂರು, ಮೇ28(ಬಿಎಲ್‌ಯು)– ಶಿಕ್ಷಕ ಮತದಾರರು ಆಮಿಷಗಳಿಗೆ ಒಳಗಾಗಿ ತಮ್ಮ ಮತಗಳನ್ನು ಮಾರಾಟ ಮಾಡಿಕೊಳ್ಳಬಾರದು ಎಂದು ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಸಲಹೆ ನೀಡಿದ್ದಾರೆ.

ಮೈಸೂರಿನ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಇಂದು ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ವಿಭಾಗ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡದ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಶಿಕ್ಷಕರು ಆಮಿಷಗಳಿಗೆ ಒಳಗಾಗದೆ ಆತ್ಮಸಾಕ್ಷಿಯಂತೆ ಮತದಾನ ಮಾಡಬೇಕು ಎಂದು ಹೇಳಿದರು.

ಇದೇ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಕಳೆದ 24 ವರ್ಷದಿಂದ ಶಿಕ್ಷಕರ ಪರವಾಗಿ ಹೋರಾಟ ಮಾಡಿದ್ದಾರೆ. ಶಿಕ್ಷಕ ಮತದಾರರು ಈ ಬಾರಿಯೂ ಮರಿತಿಬ್ಬೇಗೌಡರನ್ನು ಬೆಂಬಲಿಸಿದರೆ ನಿಮ್ಮ ಬೇಡಿಕೆ ಈಡೇರಿಸಲಿದ್ದಾರೆ ಎಂದು ಆಶ್ವಾಸನೆ ನೀಡಿದರು.



ಮೈಸೂರಿನ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆ ಮೈಸೂರು ವಿಭಾಗ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡದ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಮಂಗಳವಾರ ಆಯೋಜಿಸಿದ್ದ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಬೆಂಬಲ ಸೂಚಿಸಲಾಯಿತು.

ದೇಶಕ್ಕೆ ಶಿಕ್ಷಕರ ಪಾತ್ರ ಮಹತ್ವವಾಗಿದೆ. ಶ್ರೇಷ್ಠ ಸ್ಥಾನದಲ್ಲಿರುವ ಶಿಕ್ಷಕರ ಶ್ರಮದಿಂದ ಕಳೆದ 75 ವರ್ಷದ ಅವಧಿಯಲ್ಲಿ ದೇಶದ ಸಾಕ್ಷರತೆ ಪ್ರಮಾಣ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ದೇಶದ ಅಭಿವೃದ್ಧಿಗೆ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ಡಾ.ತಿಮ್ಮಯ್ಯ ಹೇಳಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ, ದೇವಸ್ಥಾನದಲ್ಲಿ ಗಂಟೆ ಹೆಚ್ಚು ಬಾರಿಸಿದರೆ ಮೌಢ್ಯ ಹೆಚ್ಚಾಗುತ್ತದೆ. ಶಾಲೆಗಳಲ್ಲಿ ಗಂಟೆ ಹೆಚ್ಚು ಬಾರಿಸಿದರೆ ಶಿಕ್ಷಣ ಕ್ರಾಂತಿಯಾಗುತ್ತದೆ ಎಂದು ಡಾ.ಅಂಬೇಡ್ಕರ್ ಹೇಳಿದ್ದಾರೆ. ಅದರಂತೆ ಶಿಕ್ಷಣ ಕ್ರಾಂತಿ ಹೆಚ್ಚಾಗಲು ಶಿಕ್ಷಕರ ಪಾತ್ರ ಬಹು ಮುಖ್ಯವಾಗಿದೆ ಎಂದರು.

ಕಳೆದ 24 ವರ್ಷದ ಅವಧಿಯಲ್ಲಿ ಸದನದ ಒಳಗೆ ಹಾಗೂ ಹೊರಗೆ ಶಿಕ್ಷಕರ ಬೇಡಿಕೆ ಬಗ್ಗೆ ಹೋರಾಟ ಮಾಡಿದ್ದೇನೆ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತರಲು ಶ್ರಮಿಸಿದ್ದೇನೆ. ಮತ್ತೊಂದು ಬಾರಿ ನನ್ನ ಆಯ್ಕೆ ಮಾಡಿದರೆ ಮತ್ತಷ್ಟು ಒಳ್ಳೆಯ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ತರುವಾಯ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮನುವಾದ, ಕೋಮುವಾದ ಹೇರುವ ಬಿಜೆಪಿಯನ್ನು ಕಿತ್ತೊಗೆಯಬೇಕು. ಸಂವಿಧಾನ ವಿರೋಧಿಗಳಿಗೆ ತಕ್ಕಪಾಠ ಕಲಿಸಬೇಕು. ಈ ಮಹತ್ತರ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಸಲಹೆ ನೀಡಿದರು.

ಮಾಜಿ ಸಚಿವ ಕೋಟೆ ಶಿವಣ್ಣ, ಕಾಂಗ್ರೆಸ್ ಮುಖಂಡರಾದ ಶಶಿಕಲಾ ನಾಗರಾಜ್, ಸುಬ್ಬಯ್ಯ, ಕೆ.ವಿ.ಮಲ್ಲೇಶ್ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 29 ಮೇ 2024

ನಾಗರಹೊಳೆ, ಬಂಡೀಪುರ ಉದ್ಯಾನದ ಅತಿಥಿಗಳಿಗೆ ಸಫಾರಿ ಸೌಲಭ್ಯದ ಮಾಹಿತಿ ಒದಗಿಸಲು ಹೈಕೋರ್ಟ್ ಸೂಚನೆ

ಬೆಂಗಳೂರು: ನಾಗರಹೊಳೆ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನ ಮತ್ತು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಖಾಸಗಿ ರೆಸಾರ್ಟ್‌ಗಳಲ್ಲಿ ತಂಗುವ ಅತಿಥಿಗಳಿಗೆ ಸಫಾರಿಗೆ ವಾಹನಗಳನ್ನು ಹಂಚಿಕೆ ಮಾಡುವ ವಿಧಾನದ ಕುರಿತಂತೆ ಮಾಹಿತಿ ಒದಗಿಸುವಂತೆ ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಲಿಮಿಟೆಟ್ (ಜೆಎಲ್‌ಆರ್‌ಎಲ್)ಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಖಾಸಗಿ ರೆಸಾರ್ಟ್ ಅತಿಥಿಗಳಿಗೆ ಕ್ಯಾಂಟರ್‌ಗಳನ್ನು ಒದಗಿಸಲಾಗುತ್ತಿದೆ. ಆದರೆ, ಜೆಎಲ್‌ಆರ್‌ಎಲ್ ಅತಿಥಿ ಗೃಹಗಳಿಗೆ ಬರುವ ಪ್ರವಾಸಿಗರಿಗೆ ಸಫಾರಿಗೆ ಸೂಕ್ತವಾಗಿರುವ ಜೀಪ್‌ಗಳನ್ನು ಒದಗಿಸಲಾಗಿದೆ ಎಂದು ಆರೋಪಿಸಿ ಕರ್ನಾಟಕ ಪರಿಸರ ಪ್ರವಾಸೋದ್ಯಮ ರೆಸಾರ್ಟ್‌ಗಳ ಸಂಘ 2022ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿ ವಿಚಾರಣೆ ಮುಂದೂಡಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಸಫಾರಿ ವಾಹನ ಸೌಲಭ್ಯ ಒದಗಿಸುವುದು ಮತ್ತು ಇತರ ಸೌಲಭ್ಯಗಳ ಕುರಿತಂತೆ ಸರ್ಕಾರದೊಂದಿಗೆ ಖಾಸಗಿ ರೆಸಾರ್ಟ್‌ಗಳ ಸಂಘ ಒಪ್ಪಂದ ಮಾಡಿಕೊಂಡಿದೆ. ಆದರೆ, ಜೆಎಲ್‌ಆರ್‌ಎಲ್ ಒಪ್ಪಂದ ಉಲ್ಲಂಘಿಸುತ್ತಿದೆ. ಸಫಾರಿ ವಾಹನಗಳ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಸರ್ಕಾರ ಮತ್ತು ನ್ಯಾಯಾಲಯದ ಆದೇಶ ಉಲ್ಲಂಘಿಸಿ ಹೊಸ ರೆಸಾರ್ಟ್‌ಗಳಿಗೆ ಹೊಸ ಸಫಾರಿ ಅನುಮತಿಗಳನ್ನು ನೀಡಲಾಗಿದೆ. ಅಲ್ಲದೇ, ಸಫಾರಿ ವಾಹನಗಳ ನ್ಯಾಯಯುತ ಹಂಚಿಕೆ ಮತ್ತು ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ವಿಸ್ತರಿಸಲು ನಿರ್ದೇಶನ ನೀಡಬೇಕು ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಜೆಎಲ್‌ಆರ್‌ಎಲ್ ಅತಿಥಿಗಳಿಗೆ ವನ್ಯಜೀವಿಗಳ ಉತ್ತಮ ವೀಕ್ಷಣೆ ಇರುವ ವಲಯಗಳ ಮಾರ್ಗಗಳಲ್ಲಿ ಸಫಾರಿ ವಾಹನಗಳ ಪ್ರವೇಶಕ್ಕೆ ಅವಕಾಶ ನೀಡಲಿದ್ದಾರೆ. ಆದರೆ, ಖಾಸಗಿ ರೆಸಾರ್ಟ್‌ಗಳ ಅತಿಥಿಗಳಿಗೆ ಈ ಸೌಲಭ್ಯದಿಂದ ವಂಚಿಸುತ್ತಿದ್ದಾರೆ. ಆದ್ದರಿಂದ ಖಾಸಗಿಯವರಿಗೂ ಸಮಾನ ಅವಕಾಶ ಲಭ್ಯವಾಗುವಂತೆ ಮಾಡಬೇಕು ಎಂದು ಅವರು ಕೋರಿದ್ದರು.

ವಿವೇಕಾನಂದ ಪರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಅವರ ಪರ ಸಂಜೀವಿನಿ ಕುಮಾರ್, ಬೋರೇಗೌಡ, ಅರುಣ್, ಶ್ರೀನಿವಾಸ ಗೌಡ, ನರಸಿಂಹೇಗೌಡ, ಹೇಮಾವತಿ, ಪ್ರಕಾಶ್ ಗೌಡ ಇತರರು ಸೇಫಿಯಂಟ್ ಕಾಲೇಜಿನಲ್ಲಿ ಮತಯಾಚನೆ ಮಾಡಿದರು

ಹುಟ್ಟುಹಬ್ಬದ ಶುಭಾಶಯ



ಕೆಎಂಪಿಕೆ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಲಾಯಿತು. ಚಿತ್ರದಲ್ಲಿ ಸ್ವೀಟ್ ಮಹೇಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಉದ್ಯಮಿ ಪ್ರದೀಪ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸಪ್ಪ ಇತರರಿದ್ದಾರೆ.

ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿಗೆ ಮನವಿ



ಬರುವ ಜೂನ್ 1ರಂದು ಮೈಸೂರಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸುವಂತೆ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿಗೆ ಮೈಸೂರು ಜಿಲ್ಲಾ ವಕೀಲರ ಸಂಘದ ವತಿಯಿಂದ ಮನವಿ ಮಾಡಲಾಯಿತು. ಈ ವೇಳೆ ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುದೀರ್, ಹಿರಿಯ ವಕೀಲ ಪ್ರಸಾದ್ ಇತರರು ಉಪಸ್ಥಿತರಿದ್ದರು.

ಕ್ಲಾಸಿ ಮಾಡೆಲ್ ಸ್ಪರ್ಧೆ



ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ ಅಂತರರಾಷ್ಟ್ರೀಯ ಕ್ಲಾಸಿ ಮಾಡೆಲ್ ಸ್ಪರ್ಧೆಯಲ್ಲಿ ಮೈಸೂರಿನ ಎನ್.ಎಸ್.ಯೋಗಗೌಡ ರನ್ನರ್ ಅಪ್ ಆಗಿ ಹೊರಹೊಮ್ಮಿದ್ದು ಆಕರ್ಷಕ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಇವರು ಮೈಸೂರಿನ ವಕೀಲರಾದ ಡಿ.ಎಸ್.ಶಿವಪ್ರಕಾಶ್ ಹಾಗೂ ಹೆಚ್.ಕೆ.ಲತಾ ದಂಪತಿ ಪುತ್ರ.

ಶ್ರೀಮತಿ ಪ್ರಮೀಳಾ ನಿಧನ



ಮೈಸೂರು, ಮೇ 28– ಮೂಲತಃ ಪಿರಿಯಾಪಟ್ಟಣ ತಾಲೂಕು ರಾವಂದೂರು ನಿವಾಸಿ ಶ್ರೀಶೈಲ(ಅಣ್ಣಯ್ಯಪ್ಪಣ್ಣ) ಅವರ ಪತ್ನಿ ಶ್ರೀಮತಿ ಪ್ರಮೀಳಾ ಅವರು ಇಂದು ಮೈಸೂರಲ್ಲಿ ನಿಧನರಾದರು. ಇವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರ ಪಾರ್ಥಿವ ಶರೀರವನ್ನು ಮೈಸೂರಿನ ಹೆಬ್ಬಾಳಿನಲ್ಲಿರುವ ಅವರ ಮಗನ ಮನೆಯಲ್ಲಿ ನಾಳೆ(ಬುಧವಾರ)ಬೆಳಗ್ಗೆ 8 ಗಂಟೆಯವರೆಗೆ ದರ್ಶನಕ್ಕೆ ಇಟ್ಟು ನಂತರ ಸ್ವಗ್ರಾಮ ರಾವಂದೂರಿಗೆ ಕೊಂಡೊಯ್ದು ಸಂಜೆ ವೇಳೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೋಕೇಶ್ ನರಸಿಂಹೇಗೌಡ



ಮೈಸೂರು, ಮೇ 28– ವಿಜಯನಗರ ಒಂದನೇ ಹಂತದ ನಿವಾಸಿ ಲೋಕೇಶ್ ನರಸಿಂಹೇಗೌಡ(62) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಪಾಂಡವಪುರ ತಾಲೂಕಿನ ಪಟ್ಟ ಸೋಮನಹಳ್ಳಿ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೌಂಟ್ ಎವರೆಸ್ಟ್ ಯಶಸ್ವಿ ಶಿಖರಾರೋಹಿ ಡಾ.ಉಷಾ ಹೆಗಡೆ ಅವರಿಗೆ ಜೆಎಸ್‌ಎಸ್ ಸಂಸ್ಥೆ ವತಿಯಿಂದ ಸನ್ಮಾನ

ಮುಕ್ತಕಂಠದಿಂದ ಪ್ರಶಂಸಿಸಿದ ಸುತ್ತೂರು ಶ್ರೀಗಳು



ಮೌಂಟ್ ಎವರೆಸ್ಟ್ ಶಿಖರವನ್ನೇರಿದ ಜೆಎಸ್‌ಎಸ್ ಸಂಸ್ಥೆಯ ಪ್ರಾಧ್ಯಾಪಕಿ ಡಾ.ಉಷಾ ಹೆಗಡೆ ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು.

> “ಈ ಸಾಹಸ ಯಾತ್ರೆಯಲ್ಲಿ ಉತ್ತಮ ಹವಾಮಾನಕ್ಕಾಗಿ ಕಾಯಬೇಕಾಗಿತ್ತು. ಬೇಸ್ ಕ್ಯಾಂಪ್‌ನಲ್ಲಿ ನಾವೆಲ್ಲ ಸಣ್ಣ ಟೆಂಟ್‌ನಲ್ಲಿ ಉಳಿದುಕೊಂಡಿದ್ದೆವು. ಈ ಪಯಣ ಅಷ್ಟೇನು ಸರಾಗವಾಗಿರಲಿಲ್ಲ. ಅಲ್ಲಿನ ಹವಾಮಾನಕ್ಕೆ ದೇಹ ಒಗ್ಗಿಕೊಳ್ಳಬೇಕಾಗಿತ್ತು. ಬೇಸ್ ಕ್ಯಾಂಪ್‌ನಲ್ಲಿ –5 ಡಿಗ್ರಿ ಸೆಲ್ಸಿಯಸ್‌ನಿಂದ –10ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪಮಾನ ವಿದ್ದರೆ ಶಿಖರಗಳಲ್ಲಿ –40 ಡಿಗ್ರಿ ಸೆಲ್ಸಿಯಸ್ ಇತ್ತು. ಮೌಂಟ್ ಎವರೆಸ್ಟ್ ಏರುವಾಗ ಹಲವರ ಧೈರ್ಯದ ಮಾತುಗಳು ಈ ಸಾಧನೆ ಮಾಡಲು ಸ್ಫೂರ್ತಿಯಾಯಿತು.
> –ಡಾ.ಉಷಾ ಹೆಗಡೆ, ಪ್ರಾಧ್ಯಾಪಕರು

ಮೈಸೂರು,ಮೇ 28(ಎಸ್‌ಪಿಎನ್)– ಸಮುದ್ರ ಮಟ್ಟದಿಂದ 8,848.86 ಮೀಟರ್ (29,031ಅಡಿ) ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನೇರಿದ ಮೈಸೂರಿನ ಮೊದಲ ಮಹಿಳೆ ಎಂಬ ಕೀರ್ತಿಗೆ ಡಾ.ಉಷಾ ಹೆಗಡೆ ಭಾಜನರಾಗಿರುವುದು ನಮ್ಮ ಸಂಸ್ಥೆಗೂ ಹೆಮ್ಮೆಯ ವಿಷಯ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು. ಡಾ.ಉಷಾ ಹೆಗಡೆ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ.

ಮೈಸೂರು–ಬೆಂಗಳೂರು ರಸ್ತೆಯ ಜೆಎಸ್‌ಎಸ್ ಔಷಧ ಮಹಾವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಹಾಗೂ ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಸಹಯೋಗದೊಂದಿಗೆ ಏರ್ಪಡಿಸಿದ್ದ ಮೌಂಟ್ ಎವರೆಸ್ಟ್ ಶಿಖರವನ್ನೇರಿದ ಜೆಎಸ್‌ಎಸ್ ಸಂಸ್ಥೆ ಪ್ರಾಧ್ಯಾಪಕಿ ಡಾ. ಉಷಾ ಹೆಗಡೆ ಅವರನ್ನು ಸನ್ಮಾನಿಸಿ ಶ್ರೀಗಳು, ಮಾತನಾಡಿದರು. ದಾಖಲೆಗಳ ಪ್ರಕಾರ ವಿವಿಧ ರಾಷ್ಟ್ರಗಳಿಂದ ಮೌಂಟ್ ಎವರೆಸ್ಟ್ ಶಿಖರವನ್ನೇರಿದವರಲ್ಲಿ 6,664 ಪರ್ವತಾರೋಹಿಗಳಿದ್ದಾರೆ. ಇದರಲ್ಲಿ 544 ಮಂದಿ ಭಾರತೀಯರು. ಆ ಸಾಧನೆಯ ಪಟ್ಟಿಯಲ್ಲಿ ಡಾ.ಉಷಾ ಹೆಗಡೆ ಹೆಸರು ಇರುವುದು ಹೆಮ್ಮೆಯ ಸಂಗತಿ. ಈ ಕೀರ್ತಿ ಜೆಎಸ್‌ಎಸ್ ಸಂಸ್ಥೆಗೂ ಸಲ್ಲುತ್ತದೆ ಎಂದರು.

ಡಾ.ಉಷಾ ಅವರು, ಏ.19ರಂದು ಮೌಂಟ್ ಎವರೆಸ್ಟ್ ಶಿಖರವನ್ನು ಹತ್ತಲು ಆರಂಭಿಸಿದ್ದಾರೆ. ಮೇ 19ರಂದು ಶಿಖರದ ತುತ್ತತುದಿಯನ್ನು ತಲುಪುವ ಮೂಲಕ ದಾಖಲೆ ಬರೆದಿದ್ದಾರಲ್ಲದೆ, ಜೆಎಸ್‌ಎಸ್ ಸಂಸ್ಥೆ ಹೆಸರಿನ ಧ್ವಜವನ್ನು ಆ ಪ್ರದೇಶದಲ್ಲಿ ಹಾರಿಸಿದ್ದಾರೆ. ಅವರ ಸಾಧನೆಯ ಜೊತೆಗೆ ಸಂಸ್ಥೆಯ ಕೀರ್ತಿಯನ್ನೂ ಹೆಚ್ಚಿಸಿದ್ದಾರೆ. ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಖರ ಹತ್ತುವ ಮುನ್ನ ಡಾ.ಉಷಾ ಹೆಗಡೆ ಅತ್ಯಂತ ಕಠಿಣ ತರಬೇತಿ ಪಡೆದು, –40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಲ್ಲಿ ದೇಹವನ್ನು ದಂಡಿಸಿ, ಶಿಖರವನ್ನೇರಿದ್ದಾರೆ. ಈ ಸಾಧನೆಯ ಹಿಂದೆ ಅವರ ಪತಿ ಶಸ್ತ್ರಚಿಕಿತ್ಸಕ ಡಾ.ಅಜಯ್ ಹೆಗ್ಡೆ ಪ್ರೋತ್ಸಾಹ ಇದೆ. ಅಲ್ಲದೆ, ಎವರೆಸ್ಟ್ ಹತ್ತಲು ನಿತ್ಯ ಚಾಮುಂಡಿಬೆಟ್ಟ ಹತ್ತುವುದು ಸೇರಿದಂತೆ ಎಲ್ಲಾ ರೀತಿಯ ಕಸರತ್ತು ನಡೆಸಿ ಸಾಧನೆ ಮಾಡಿದ್ದಾರೆ ಎಂದರು.

ಸಾಧನೆಗೆ ಪರಿಶ್ರಮವಿರಬೇಕು: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಸುರಿಂದರ್ ಸಿಂಗ್ ಮಾತನಾಡಿ, ಸಾಧನೆಗೆ ಪರಿಶ್ರಮ ಇರಬೇಕು. ಅದಕ್ಕೆ ಎಂದೂ ಪ್ರತಿಫಲ ದೊರಕುತ್ತದೆ ಎಂಬುದಕ್ಕೆ ಇಂದಿನ ವೇದಿಕೆಯಲ್ಲಿ ಸನ್ಮಾನಿತರಾಗಿರುವ ಡಾ.ಉಷಾ ಹೆಗಡೆ ಅವರೇ ಸಾಕ್ಷಿ. ಮೌಂಟ್ ಎವರೆಸ್ಟ್ ಶಿಖರವನ್ನೇರಲು ಹಲವು ದಿನಗಳ ತರಬೇತಿ ಬೇಕು ಹಾಗೂ ಕುಟುಂಬ ಸದಸ್ಯರ ಬೆಂಬಲ ಬೇಕು. ಈ ಸಾಧನೆಗೆ ಆರೋಗ್ಯ ಕಾಪಾಡಿಕೊಳ್ಳಬೇಕು. ಇವೆಲ್ಲದರಿಂದಾಗಿ ಡಾ.ಉಷಾ ಹೆಗಡೆ ಸಾಧನೆ ಮಾಡಿದ ಮೊದಲ ಮೈಸೂರಿನ ಮಹಿಳೆಯಾಗಿ ಹೊರಹೊಮ್ಮಿದ್ದಾರೆ. ಅಲ್ಲದೆ, ಈ ಕೀರ್ತಿ ನಮ್ಮ ಸಂಸ್ಥೆಗೂ ಸಂದಿದೆ ಎಂದು ಬಣ್ಣಿಸಿದರು. ಕಳೆದ 25 ವರ್ಷಗಳಿಂದ ಡಾ.ಉಷಾ ಹೆಗಡೆ ಬೋಧನೆಯಲ್ಲೂ ಸೈ ಎನಿಸಿಕೊಂಡು, ನೂರಾರು ಶಿಷ್ಯರನ್ನು ಹೊಂದಿದ್ದಾರೆ.

ಮೌಂಟ್ ಎವರೆಸ್ಟ್ ಶಿಖರವನ್ನೇರಲು ಉತ್ತಮ ಫಿಟ್ನೆಸ್ ಕಾಪಾಡಿಕೊಂಡು, ಮ್ಯಾರಥಾನ್, ಟ್ರಯಥ್ಲಾನ್ ಸೇರಿದಂತೆ ಇತರೆ ಕ್ರೀಡೆಗಳಲ್ಲಿ ತೊಡಗಿಸಿಕೊಂಡು ಜೊತೆಗೆ ತಮಗಾದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಇಂತಹ ಸಾಧಕರು ನಮ್ಮ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಸಂತೋಷ ಸಂಗತಿ ಎಂದರು.

ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ.ಎಂ.ಆರ್.ದಾಕ್ಷಾಯಣಿ ಮಾತನಾಡಿ, ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಹಠ, ಅದಕ್ಕಾಗಿ ನಡೆಸಿದ ತಯಾರಿಯಿಂದಾಗಿ ಡಾ.ಉಷಾ ಹೆಗಡೆ ಮೌಂಟ್ ಎವರೆಸ್ಟ್ ಶಿಖರವನ್ನೇರಿದ ಮೈಸೂರಿನ ಮೊದಲ ಮಹಿಳೆ ಮತ್ತು ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಹಾಗೂ ನಮ್ಮ ಸಹದ್ಯೋಗಿ ಎಂಬುದು ಹೆಮ್ಮೆಯ ವಿಷಯ ಎಂದರು.

ಡಾ.ಉಷಾ ಹೆಗಡೆ ಸನ್ಮಾನ ಸ್ವೀಕರಿಸಿ, ಶಿಖರವನ್ನೇರುವಾಗ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಈ ವೇಳೆ ನಮ್ಮ ಕುಟುಂಬದವರು ಸ್ವಲ್ಪ ಆತಂಕಗೊಂಡಿದ್ದರು. ನಂತರ ಶಿಖರದ ತುತ್ತತುದಿ ಏರಿದ ಮೇಲೆ ನನ್ನ ಕುಟುಂಬದವರನ್ನು ಸಂಪರ್ಕಿಸಿ ವಿಷಯ ಮುಟ್ಟಿಸಿದೆ. ಈ ವೇಳೆ ನನಗಾದ ಆನಂದ ಹೇಳತೀರದು. ಈ ಸಾಧನೆಯನ್ನು ನಮ್ಮ ಸಂಸ್ಥೆ ಗುರುತಿಸಿ, ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್ ಮಠ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ್, ಉಪಪ್ರಾಂಶುಪಾಲ ಡಾ.ಹೆಚ್.ಪಿ. ಜೈಶಂಕರ್, ಡಾ.ಬೃಂದಾ, ಡಾ.ಎಸ್.ಎಂ. ಅನುಶ್ರೀ, ಡಾ.ಕ್ಯಾತಯಿನಿ, ಡಾ.ಎಸ್. ಮಂಜುಳಾ, ಡಾ.ಜೆ.ಎನ್.ಹೆಗಡೆ, ಡಾ.ಸುಮನ್ ಬಸವರಾಜು ಸೇರಿದಂತೆ ಇತರರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ

ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಪರ ಶಾಸಕ ಟಿ.ಎಸ್.ಶ್ರೀವತ್ಸ ಮತಯಾಚನೆ



ಎನ್‌ಡಿಎ ಅಭ್ಯರ್ಥಿ ವಿವೇಕಾನಂದರ ಪರ ಶಾಸಕ ಟಿ.ಎಸ್.ಶ್ರೀವತ್ಸ ಮತಯಾಚಿಸಿದರು.

ಮೈಸೂರು, ಮೇ 28(ಎಸ್‌ಪಿಎನ್)– ಕರ್ನಾಟಕ ವಿಧಾನಪರಿಷತ್ ಚುನಾವಣೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ವಿವೇಕಾನಂದ ಅವರ ಪರವಾಗಿ ಶಾಸಕ ಟಿ.ಎಸ್.ಶ್ರೀವತ್ಸ ವಿವಿಧ ಕಾಲೇಜಿನಲ್ಲಿ ಮಂಗಳವಾರ ಮತಯಾಚನೆ ಮಾಡಿದರು.

ಮೈಸೂರಿನ ಕುವೆಂಪು ಪದವಿ ಕಾಲೇಜು, ಜ್ಯೋತಿ ಪದವಿಪೂರ್ವ ಕಾಲೇಜು ಹಾಗೂ ಪ್ರೌಢಶಾಲೆ, ಕಾಗಿನೆಲೆ ಬಿಎಡ್ ಹಾಗೂ ಪದವಿಪೂರ್ವ ಕಾಲೇಜು, ಕಾವೇರಿ ಪ್ರೌಢಶಾಲೆ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಿಗೆ ಭೇಟಿ ನೀಡಿದ ಅವರು, ಮತಯಾಚನೆ ಮಾಡಿ ವಿವೇಕಾನಂದರ ಗೆಲ್ಲಿಸಲು ಮನವಿ ಮಾಡಿದರು.

ಶಿಕ್ಷಕರ ಸಮಸ್ಯೆ ಬಗೆಹರಿಸಲು ಎನ್‌ಡಿಎ ಅಭ್ಯರ್ಥಿ ವಿವೇಕಾನಂದರ ಕ್ರಮ ಸಂಖ್ಯೆ 2 ಅವರ ಹೆಸರಿನ ಮುಂದೆ ಮೊದಲ ಪ್ರಾಶಸ್ತ್ಯ ಮತ ನೀಡಿ ಅಧಿಕ ಮತಗಳ ಅಂತರದಿಂದ ಗೆಲ್ಲಿಸುವಂತೆ ಅವರು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ಕೆ.ವಸಂತ್ ಕುಮಾರ್, ವಾಣೀಶ್, ಜೋಗಿ ಮಂಜು, ನಗರ ಪ್ರಧಾನ ಕಾರ್ಯದರ್ಶಿ ಜಯರಾಮು, ಮುಖಂಡರಾದ ಮಂಜುನಾಥ್, ಪ್ರದೀಪ್, ಬಿಜೆಪಿ ಜಿಲ್ಲಾ ವಕ್ತಾರ ದೇವರಾಜು, ನಗರಪಾಲಿಕೆ ಮಾಜಿ ಸದಸ್ಯರಾದ ಶಂಕರ್, ಮಾಯಾ ಜಗದೀಶ್ ಉಪಸ್ಥಿತರಿದ್ದರು.

ಕನ್ಯಾಕುಮಾರಿಯಲ್ಲಿ 31ರಂದು ಪ್ರಧಾನಿ ಮೋದಿ ಧ್ಯಾನ!

ನವದೆಹಲಿ, ಮೇ 28– ಪ್ರಧಾನಿ ನರೇಂದ್ರ ಮೋದಿ ಅವರು ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ಶಿಲಾ ಸ್ಮಾರಕದಲ್ಲಿ ಇದೇ 31ರಂದು ಧ್ಯಾನ ಮಾಡಲಿದ್ದಾರೆ.

ಲೋಕಸಭಾ ಚುನಾವಣೆಯ ಕೊನೆ ಹಂತದ ಮತದಾನ ಜೂನ್ 1ರಂದು ನಡೆಯಲಿದ್ದು, ಅದಕ್ಕೂ ಮುನ್ನಾ ದಿನ ಧ್ಯಾನ ಕೈಗೊಳ್ಳುವ ಪ್ರಧಾನಿ ಮೋದಿ ಅವರ ಈ ನಡೆಯು ರಾಷ್ಟ್ರೀಯ ಏಕತೆಯ ಸಂದೇಶ ರವಾನಿಸಲಿದೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ.

ಮೋದಿ ಅವರು ಮೇ 30ರಂದು ಕನ್ಯಾಕುಮಾರಿಗೆ ಭೇಟಿ ನೀಡಲಿದ್ದು, 2–3 ದಿನ ಕಳೆಯಲಿದ್ದಾರೆ. ಸ್ವಾಮಿ ವಿವೇಕಾನಂದ ಅವರು ಧ್ಯಾನ ಕೈಗೊಂಡಿದ್ದ ಸ್ಥಳ 'ಧ್ಯಾನ ಮಂಟಪ'ದಲ್ಲಿಯೇ ಮೋದಿ ಅವರು ಈ ಭೇಟಿ ವೇಳೆ ಧ್ಯಾನ ಕೈಗೊಳ್ಳುವರು. ಈ ಸ್ಥಳವು ತಮಿಳಿನ ಸಂತ ಕವಿ ತಿರುವಳ್ಳುವರ್ ಪ್ರತಿಮೆ ಸನಿಹದಲ್ಲಿದೆ.

2019ರ ಮೇನಲ್ಲಿ ಲೋಕಸಭಾ ಚುನಾವಣೆ ಮುಗಿದ ನಂತರ ಮೋದಿ ಅವರು ಕೇದಾರನಾಥಕ್ಕೆ ಭೇಟಿ ನೀಡಿ, ರುದ್ರ ಗುಹೆಯಲ್ಲಿ ಧ್ಯಾನ ನಡೆಸಿದ್ದರು.

ಗ್ರಾಮಗಳ ನೈರ್ಮಲ್ಯತೆ ಕಾಪಾಡಲು ಜಿಪಂ ಸಿಇಓ ಸಲಹೆ; ಖುದ್ದು ಸ್ಥಳ ಪರಿಶೀಲನೆ



ಮೈಸೂರು, ಮೇ 28–ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕು ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯತಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ ಭೇಟಿ ನೀಡಿ, ಕುಡಿಯುವ ನೀರಿನ ಸ್ಥಾವರಗಳನ್ನು ಸುಸ್ಥಿತಿಯಲ್ಲಿಡುವುದು ಮತ್ತು ನೈರ್ಮಲೀಕರಣದ ಕುರಿತಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮುನ್ನೆಚ್ಚರಿಗೆ ಕ್ರಮಗಳ ಬಗ್ಗೆ ತಿಳಿಸಿದರು.

ಟಿ.ನರಸೀಪುರ ತಾಲೂಕಿನ ಸೋಸಲೆ, ಬೆನಕನಹಳ್ಳಿ, ದೊಡ್ಡಬಾಗಿಲು, ಕೊಲತ್ತೂರು, ಚಿದರವಳ್ಳಿ ಮತ್ತು ಉಕ್ಕಲಗೆರೆ ಗ್ರಾಮ ಪಂಚಾಯತಿಗಳಿಗೆ ಅವರು ಭೇಟಿ ನೀಡಿದರು. ಮಳೆಗಾಲ ಸಮೀಪಿಸುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಸಂಬಂಧ ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಬರುವ ಉಪ–ಗ್ರಾಮ ಅಥವಾ ಜನವಸತಿಗಳ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಸ್ಥಾವರಗಳನ್ನು ಪರಿವೀಕ್ಷಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಂಬಂಧಪಟ್ಟ ಇಲಾಖೆಗಳಿಗೆ ಹಾನಿಗೊಳಗಾದ ಕೊಳವೆ ಬಾವಿಗಳನ್ನು ತುರ್ತಾಗಿ ದುರಸ್ತಿಗೊಳಿಸಿ, ಬಾವಿಯ ಸುತ್ತ–ಮುತ್ತಲಿನ ಗಿಡಗಂಟಿಗಳು ಮತ್ತು ಇತರೆ ಮಲಿನ ಅವಶೇಷಗಳನ್ನು ತೆರವುಗೊಳಿಸಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಆಯಾ ಗ್ರಾಮಗಳಲ್ಲಿನ ಎಲ್ಲಾ ಚರಂಡಿ, ಪಕ್ಕಾ ಗಟಾರಗಳಲ್ಲಿ ಶೇಖರಣೆಯಾದಂತಹ ಹೂಳನ್ನು ತೆರವುಗೊಳಿಸುವುದು, ಅವಶ್ಯಕತೆ ಇದ್ದಲ್ಲಿ ಕಚ್ಚಾ ಕಾಲುವೆಗಳನ್ನು ನಿರ್ಮಿಸಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಕ್ರಮವಹಿಸಬೇಕು. ನೀರಿನ ತೊಂಬೆ/ಕೊಳವೆ ಬಾವಿಗಳ ಕೇಸಿಂಗ್ ಪೈಪ್ ಹಾಳಾಗಿದ್ದರೆ ಬದಲಿಸಿ, ಅವಶ್ಯಕತೆ ಇದ್ದಲ್ಲಿ ಕೇಸಿಂಗ್ ಪೈಪನ್ನು ಮೇಲಕ್ಕೆ ಎತ್ತರಿಸುವುದು. ಕೊಳವೆ ಬಾವಿಯ ಸುತ್ತಲೂ ಕಾಂಕ್ರೀಟೀಕರಣ ಮಾಡಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ(ಆಡಳಿತ) ನಾಗರಾಜ್, ಮೈಸೂರು ವಿಭಾಗದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಂಜಿತ್ ಕುಮಾರ್, ಟಿ.ನರಸೀಪುರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಿರಿಯ ಅಭಿಯಂತರರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಭವಾನಿ ರೇವಣ್ಣ ಜಾಮೀನು ಅರ್ಜಿ ವಿಚಾರಣೆ




ಬೆಂಗಳೂರು, ಮೇ 28– ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂಬಂಧಪಟ್ಟ ಸಂತ್ರಸ್ತ ಮಹಿಳೆಯ ಅಪಹರಣ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿರುವ ಹೆಚ್.ಡಿ. ರೇವಣ್ಣ ಅವರ ಪತ್ನಿ ಭವಾನಿ ರೇವಣ್ಣ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಬುಧವಾರಕ್ಕೆ (ನಾಳೆ) ಮುಂದೂಡಿದೆ.

ಬಂಧನ ಭೀತಿಯಿಂದ ನಿರೀಕ್ಷಣಾ ಜಾಮೀನು ಕೋರಿ ಭವಾನಿ ಅವರು ಸೋಮವಾರ ಅರ್ಜಿ ಸಲ್ಲಿಸಿದ್ದರು. ಇಂದು ವಿಚಾರಣೆ ವೇಳೆ ಅರ್ಜಿಗೆ ಸಂಬಂಧಿಸಿದಂತೆ ಎಸ್‌ಐಟಿ ಪರ ಹಾಜರಾಗಿದ್ದ ಎಸ್‌ಪಿಪಿ ಬಿ.ಎನ್. ಜಗದೀಶ್ ದೂರಿಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿಲ್ಲ. ಆದ್ದರಿಂದ ವಿಚಾರಣೆಯನ್ನು ಗುರುವಾರ ಅಥವಾ ಶುಕ್ರವಾರಕ್ಕೆ ಮುಂದೂಡಲು ಮನವಿ ಮಾಡಿದರು. ಅಲ್ಲದೆ, ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದು ಕೋರಿದರು.

ಈ ವೇಳೆ ಅರ್ಜಿದಾರರ ಪರ ವಕೀಲರು, ನೋಟಿಸ್ ಇಲ್ಲದೆಯೂ ಬಂಧಿಸಲು ಅವಕಾಶವಿದೆ. ಇಂದೇ ಅವರನ್ನು ಬಂಧಿಸಿದರೆ ಏನು ಮಾಡುವುದು. ಹೀಗಾಗಿ ಮಧ್ಯಂತರ ಜಾಮೀನು ಮಂಜೂರು ಮಾಡಬೇಕು. ಮುಂದಿನ ವಿಚಾರಣೆ ವರೆಗೂ ಬಂಧನದಿಂದ ರಕ್ಷಣೆ ನೀಡಬೇಕು ಎಂದು ಕೋರಿದರು.

ಅಲ್ಲದೆ, ಕೆಎಂಎಫ್‌ನ ನಿವೃತ್ತ ಅಧಿಕಾರಿಯೊಬ್ಬರನ್ನು 7ನೇ ಆರೋಪಿಯಾಗಿ ಮಾಡಲಾಗಿದೆ. ಎಸ್‌ಐಟಿ ವಿರುದ್ಧ ದೂರು ನೀಡಿದವರನ್ನೂ ಆರೋಪಿಯಾಗಿ ಮಾಡಲಾಗುತ್ತಿದೆ. ಹೀಗಾಗಿ ಭವಾನಿ ರೇವಣ್ಣರಿಗೆ ಬಂಧನದಿಂದ ರಕ್ಷಣೆ ನೀಡಬೇಕು ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಭವಾನಿಯನ್ನು ಈವರೆಗೂ ಆರೋಪಿಯನ್ನಾಗಿ ಮಾಡಿಲ್ಲ. ಎಫ್‌ಐಆರ್‌ನಲ್ಲಿ ಸೇರಿಸದೇ ಬಂಧಿಸಬಾರದು ಎಂದೇನಿಲ್ಲ. ಆದರೆ, ಮಧ್ಯಂತರ ಜಾಮೀನು ಪರಿಗಣಿಸಲು ಏನಾದರೂ ದಾಖಲೆ ಬೇಕು. ಎಸ್‌ಐಟಿ ಮೊದಲು ಆಕ್ಷೇಪಣೆ ಸಲ್ಲಿಸಲಿ ಎಂದು ತಿಳಿಸಿ ವಿಚಾರಣೆಯನ್ನು ನಾಳೆಗೆ ಮುಂದೂಡಿದರು.

ಜಾಮೀನು ಸಿಕ್ಕ ಬೆನ್ನಲ್ಲೇ ಕಾನೂನು ಹೋರಾಟಕ್ಕಿಳಿದ ಶಾಸಕ ಎಚ್.ಡಿ.ರೇವಣ್ಣ



ಬೆಂಗಳೂರು, ಮೇ 28– ತಮ್ಮ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಜೆಡಿಎಸ್ ಶಾಸಕ ಎಚ್.ಡಿ .ರೇವಣ್ಣ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಹೊಳೆನರಸೀಪುರದಲ್ಲಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ, ಕೆ.ಆರ್.ನಗರದ ಸಂತ್ರಸ್ತೆ ಕಿಡ್ನ್ಯಾಪ್ ಪ್ರಕರಣ ರದ್ದು ಕೋರಿ ರೇವಣ್ಣ ಪರ ವಕೀಲರು ಇಂದು (ಮೇ 28) ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಹಾಸನದ ಹೊಳೆನರಸೀಪುರದಲ್ಲಿ ಲೈಂಗಿಕ ದೌರ್ಜನ್ಯ ಕೇಸ್ ಹಾಗೂ ಮೈಸೂರಿನ ಕೆ.ಆರ್.ನಗರ ಸಂತ್ರಸ್ತೆ ಅಪಹರಣ ಪ್ರಕರಣ ದಾಖಲಾಗಿವೆ. ಇದೀಗ ತಮ್ಮ ವಿರುದ್ಧ ದಾಖಲಾದ ಈ ಎರಡೂ ಎಫ್‌ಐಆರ್‌ಗಳನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್‌ಗೆ ಮಾಜಿ ಸಚಿವ ಎಚ್.ಡಿ ರೇವಣ್ಣ, ಪ್ರಕರಣಗಳಲ್ಲಿ ಹುರುಳಿಲ್ಲ, ಇದು ರಾಜಕೀಯ ಪ್ರೇರಿತವಾಗಿದೆ. ಹೀಗಾಗಿ ಎಫ್‌ಐಆರ್‌ಗಳನ್ನು ರದ್ದು ಮಾಡಬೇಕು ಎಂದು ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಇತ್ತೀಚೆಗೆ ಕೆ.ಆರ್.ನಗರದ ಸಂತ್ರಸ್ತೆಯ ಕಿಡ್ನ್ಯಾಪ್ ಪ್ರಕರಣಕ್ಕೆ ಸಂಬಂಧಿಸಿ ರೇವಣ್ಣ ಅವರನ್ನು ಎಸ್‌ಐಟಿ ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳಿಸಿತ್ತು ಆರು ದಿನಗಳ ನಿರಂತರ ಕಾನೂನು ಹೋರಾಟ ಮಾಡಿ ಮೇ 13ರಂದು ಜಾಮೀನು ಪಡೆದುಕೊಂಡು ಜೈಲಿನಿಂದ ಆಚೆ ಬಂದಿದ್ದರು. ನಂತರ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲೂ ಮಾಜಿ ಸಚಿವ ಎಚ್‌ಡಿ ರೇವಣ್ಣ ಅವರಿಗೆ ಮೇ 20ರಂದು ಜಾಮೀನು ಮಂಜೂರಾಗಿತ್ತು. ಇದೀಗ ಎರಡು ಎಫ್‌ಐಆರ್ ರದ್ದು ಮಾಡುವಂತೆ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಹೊಳೆನರಸೀಪುರದಲ್ಲಿ ದಾಖಲಾಗಿರುವ ಮಹಿಳೆ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಎ1 ಆರೋಪಿಯಾಗಿದ್ದರೆ, ಅವರ ಪುತ್ರ ಪ್ರಜ್ವಲ್ ರೇವಣ್ಣ ಎರಡನೇ ಆರೋಪಿಯಾಗಿದ್ದಾರೆ. ಇನ್ನು ಕೆ.ಆರ್.ನಗರದಲ್ಲಿ ದಾಖಲಾಗಿರುವ ಮಹಿಳೆಯ ಅಪಹರಣ ಪ್ರಕರಣದಲ್ಲಿ ರೇವಣ್ಣ ಸಹ ಆರೋಪಿಯಾಗಿದ್ದಾರೆ

ಮೇ 31, ಉಪನ್ಯಾಸ ಕಾರ್ಯಕ್ರಮ

ಮೈಸೂರು, ಮೇ 28– ಮೇ 31 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆಯ ಆಯುಕ್ತರ ಕಚೇರಿಯ ಆವರಣದಲ್ಲಿ ಪೂರ್ವ ಮತ್ತು ಪ್ರಾಗೈತಿಹಾಸ ವಿಷಯ ಕುರಿತು, ತುಮಕೂರಿನ ಸ್ಟಡೀಸ್ ಅಂಡ್ ರಿಸರ್ಚ್ ಇನ್ ಹಿಸ್ಟರಿ ಅಂಡ್ ಆರ್ಕಿಯಾಲಜಿಯ ಸಹಾಯಕ ಪ್ರಾಧ್ಯಾಪಕ ಡಾ. ಪ್ರಿಯಾ ತುಮಕೂರ್ ಉಪನ್ಯಾಸ ನೀಡಲಿದ್ದು, ಆಸಕ್ತ ವಿದ್ಯಾರ್ಥಿಗಳು, ಇತಿಹಾಸಕಾರರು ಹಾಗೂ ಸಾರ್ವಜನಿಕರು ಭಾಗವಹಿಸಬಹುದಾಗಿದೆ.

ಮಾಹಿತಿಗಾಗಿ ಪ್ರಥಮ ದರ್ಜೆ ಸಹಾಯಕರಾದ ಶಶಿಧರ್ ಅವರನ್ನು ಮೊ: 7349057976 ಅನ್ನು ಸಂಪರ್ಕಿಸಬಹುದು ಎಂದು ಪುರಾತತ್ವ, ಸಂಗ್ರಹಗಳು ಮತ್ತು ಪರಂಪರೆಯ ಉಪ ನಿರ್ದೇಶಕರು(ಪರಂಪರೆ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆದ ಶಿಲ್ಪಾಶೆಟ್ಟಿ

ನಂಜನಗೂಡು, ಮೇ 28– ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಮಂಗಳ ವಾರ ಸಂಜೆ ಭೇಟಿ ನೀಡಿ ದೇವರ ದರ್ಶನ ಪಡೆದು



ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರಿನ ಇಲವಾಲದಲ್ಲಿ ನಡೆಯುತ್ತಿರುವ ಹಿಂದಿ ಚಿತ್ರದ ಚಿತ್ರೀಕರಣಕ್ಕಾಗಿ ಆಗಮಿಸಿದ್ದು, ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಬಗ್ಗೆ ಬಹಳ ಕೇಳಿದ್ದೆ. ಇಂದು ದೇವರ ದರ್ಶನ ಪಡೆಯುವ ಸೌಭಾಗ್ಯ ದೊರೆಯಿತು ಎಂದು ಹರ್ಷ ವ್ಯಕ್ತಪಡಿಸಿದರು. ದೇವರ ದರ್ಶನ ಪಡೆದ ನಂತರ ದೇವಾಲಯದ ವಸಂತ ಮಂಟಪದಲ್ಲಿ 5 ನಿಮಿಷಗಳ ಕಾಲ ಕುಳಿತು ಜ್ಞಾನ ಮಜ್ಞರಾಗಿದ್ದ ಶಿಲ್ಪಾಶೆಟ್ಟಿ ಅವರಿಗೆ ದೇವಾಲಯದ ಅರ್ಚಕರು ದೇವರ ಶೇಷ ವಸ್ತ್ರ ಹಾಗೂ ಪ್ರಸಾದ ನೀಡಿದರು.

ಬೈಕ್‌ಗಳ ಮುಖಾಮುಖಿ ಡಿಕ್ಕಿ: ಸವಾರ ಸಾವು

ನಂಜನಗೂಡು, ಮೇ 28– ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಸವಾರ ಸಾವನ್ನಪ್ಪಿರುವ ಘಟನೆ ಸೋಮವಾರ ರಾತ್ರಿ ತಾಲೂಕಿನ ಗೀಕಹಳ್ಳಿ ಹುಂಡಿ ಗ್ರಾಮದ ಬಳಿ ಜರುಗಿದೆ. ತಾಲೂಕಿನ ಆಲಂಬೂರು ಮಂಟಿ ಗ್ರಾಮದ ಎಂ.ಪ್ರವೀಣ್ ಕುಮಾರ್(19) ಮೃತ ದುರ್ದೈವಿ. ಈತ ತನ್ನ ಸ್ಪ್ಲೆಂಡರ್ ಪ್ಲಸ್ ಬೈಕ್‌ನಲ್ಲಿ ಕಾರ್ಯ ನಿಮಿತ್ತ ಸ್ವಗ್ರಾಮದಿಂದ ನಂಜನಗೂಡು ಕಡೆಗೆ ತೆರಳುತ್ತಿದ್ದ ವೇಳೆ ನಂಜನಗೂಡು ಕಡೆಯಿಂದ ವೇಗವಾಗಿ ಬಂದ ಪಲ್ಸರ್ ಬೈಕ್ ತಾಲೂಕಿನ ಗೀಕಹಳ್ಳಿ ಹುಂಡಿ ಬಳಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಪ್ರವೀಣ್‌ಕುಮಾರ್‌ನನ್ನು ಚಿಕಿತ್ಸೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀಸಿದ್ದಪ್ಪಾಜಿ ಪೂಜಾ ಮಹೋತ್ಸವ



ಬನ್ನೂರು ಸಮೀಪದ ಚಾಮನಹಳ್ಳಿಯಲ್ಲಿ ಶ್ರೀಸಿದ್ದಪ್ಪಾಜಿ ದೇವಸ್ಥಾನದ 17ನೇ ಪೂಜಾ ಮಹೋತ್ಸವ ಅಂಗವಾಗಿ ಸಿದ್ದಪ್ಪಾಜಿ, ಬಸಪ್ಪ ಮತ್ತು ಕಂಡಾಯ ಸಮೇತ ಹೂ ಹೊಂಬಾಳೆ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಅರ್ಚಕ ಗುಡ್ಡಪ್ಪ ನಾಗಾಚಾರಿ ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.



ಬಾಲಕ ನಾಪತ್ತೆ

ಮೈಸೂರು, ಮೇ 28– ಬಾಲಕನೋರ್ವ ನಾಪತ್ತೆಯಾಗಿರುವ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಯಪುರ ಹೋಬಳಿ ಹಾರೋಹಳ್ಳಿ ಗ್ರಾಮದ ನಿವಾಸಿ ಚೆಲುವರಾಜು ಪುತ್ರ ಸಿ.ಚರಿತ್(14) ನಾಪತ್ತೆಯಾದವರು. ಈತ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಮೈಸೂರು ಹೊರ ವರ್ತುಲ ರಸ್ತೆ ಸಮೀಪದ ಗುರೂರು ಗ್ರಾಮದಲ್ಲಿರುವ ಅಜ್ಜಿ ಮನೆಗೆ ಹೋಗಿದ್ದ. ಆದರೆ ಏ.25ರಂದು ಮಧ್ಯಾಹ್ನ ಮನೆಯಿಂದ ಬೈಕ್ ತೆಗೆದುಕೊಂಡು ಹೋದವನು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಆತನ ಪೋಷಕರು ಮೈಸೂರು ದಕ್ಷಿಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈತನ ಸುಳಿವು ಸಿಕ್ಕಲ್ಲಿ ಮೊ. 9902020393 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕಲ್ಲಹಳ್ಳಿಯಲ್ಲಿ ಯುವಕನ ಮೇಲೆ ಹಲ್ಲೆ

ಹುಣಸೂರು, ಮೇ 28– ಜಮೀನು ಉಳುಮೆ ಮಾಡಲು ಬಂದಿದ್ದ ಯುವಕನ ಮೇಲೆ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.



ತಾಲೂಕಿನ ಮೋದೂರು ಗ್ರಾಮದ ನಿವಾಸಿ ರವಿ ಅವರ ಪುತ್ರ ಯೋಗೇಶ್(20) ಗಾಯಗೊಂಡವರು.

ವಿವರ: ಸೋಮವಾರ ಕಲ್ಲಹಳ್ಳಿ ಗ್ರಾಮದ ರಮೇಶ್ ಅವರ ಪುತ್ರ ಮಹೇಶ್ ಅವರ ಜಮೀನನ್ನು ಯೋಗೇಶ್ ಟ್ರಾಕ್ಟರ್‌ನಲ್ಲಿ ಉಳುಮೆ ಮಾಡುತ್ತಿದ್ದರು. ಸಂಜೆ 7 ಗಂಟೆ ವೇಳೆಗೆ ಸ್ಥಳಕ್ಕಾಗಮಿಸಿದ ಅದೇ ಗ್ರಾಮದ ಪಕ್ಕದ ಜಮೀನಿನ ಮಾಲೀಕ ಕೆಂಪಯ್ಯನವರ ಪುತ್ರರಾದ ಸದಾನಂದ, ಭೋಗಪ್ಪ, ಮಹೇಶ್ ಅವರು ಜಮೀನು ಉಳುಮೆ ಮಾಡಲು ನೀನ್ಯಾರು. ನಿನ್ನನ್ನು ಯಾರು ಕರೆ ತಂದಿದ್ದು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಯೋಗೇಶ್ ಮೇಲೆ ಹಲ್ಲೆ ನಡೆಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಮಹೇಶ್ ಹಲ್ಲೆ ನಡೆಸುವುದನ್ನು ತಡೆಯಲು ಮುಂದಾದಾಗ ಆತನ ಮೇಲೂ ಹಲ್ಲೆ ನಡೆಸಿದ್ದಾರೆ. ತೀವ್ರ ಗಾಯಗೊಂಡ ಇವರಿಬ್ಬರೂ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲ್ಲೆ ನಡೆಸಿದ ಕೆಂಪಯ್ಯನವರ ಮಕ್ಕಳು ಮತ್ತು ಮಹೇಶ್ ದಾಯಾದಿಗಳಾಗಿದ್ದು, ಇವರಿಬ್ಬರ ನಡುವೆ ಜಮೀನು ಹಂಚಿಕೆ ವಿಚಾರದಲ್ಲಿ ಈ ಹಿಂದೆ ಗಲಾಟೆಯಾಗಿ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ. ಆದರೆ ಸೋಮವಾರ ಜಮೀನು ಉಳುಮೆ ಮಾಡಲು ಬಂದ ಯೋಗೇಶ್ ಬಳಿ ಕೆಂಪಯ್ಯನವರ ಮಕ್ಕಳು ಗಲಾಟೆ ಮಾಡಿ ಹಲ್ಲೆ ನಡೆಸಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಮೇ 28– ಮೂಲ ಸೌಕರ್ಯಕ್ಕೆ ಒತ್ತಾಯಿಸಿ ತಾಲೂಕಿನ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಗೋಳೂರು ಹಾಡಿಯಲ್ಲಿ ಆದಿವಾಸಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಆದಿವಾಸಿ ಮಹಿಳೆ ಗೌರಿ, ಹಲವು ವರ್ಷಗಳಿಂದ ನಮ್ಮ ಹಾಡಿ ಕುಡಿಯುವ ನೀರು, ವಿದ್ಯುತ್, ರಸ್ತೆ, ಮನೆ ಸೇರಿದಂತೆ ಮೂಲ ಸೌಕರ್ಯದಿಂದ ವಂಚಿತವಾಗಿದೆ. ಹಾಡಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲದೇ ನಿತ್ಯ ಕತ್ತಲಲ್ಲೇ ಕಾಲ ಕಳೆಯುವಂತಾಗಿದೆ. ವಿದ್ಯುತ್ ಸಂಪರ್ಕ ಕಲ್ಪಿಸುವವರೆಗೆ ಸರ್ಕಾರದಿಂದ ಅಳವಡಿಸಿದ್ದ ಸೋಲಾರ್ ದೀಪಗಳು ಸಹ ಕೆಟ್ಟು ನಿಂತಿವೆ. ಗ್ರಾಪಂ ವ್ಯಾಪ್ತಿಯ ಬಹುತೇಕ ಹಾಡಿಗಳ ಜನರು ಕತ್ತಲಲ್ಲೇ ಜೀವನ ನಡೆಸುತ್ತಿದ್ದಾರೆ. ಸೋಲಾರ್ ದೀಪ ದುರಸ್ತಿಪಡಿಸಿಕೊಡುವಂತೆ ಹಲವು ಬಾರಿ ಗ್ರಾಪಂಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಈಗಲಾದರೂ ಶಾಸಕ ಅನಿಲ್ ಅವರು ಕೂಡಲೇ ಹಾಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವಿದ್ಯುತ್, ಕುಡಿಯುವ ನೀರು ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಒದಗಿಸಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಅಖಿಲ ಭಾರತ ಜನಾಧಿಕಾರ ಸುರಕ್ಷಾ ಸಮಿತಿ ಮುಖಂಡ ಟಿ.ಆರ್.ಸುನೀಲ್ ಮಾತನಾಡಿ, ಆದಿವಾಸಿಗಳ ಸಮಸ್ಯೆಗಳ ವಿಚಾರವಾಗಿ ಹಲವು ಬಾರಿ ಗ್ರಾಪಂಗೆ ದೂರು ನೀಡಿದ್ದರೂ, ಸಮಸ್ಯೆ ಬಗೆಹರಿಸಲು ಮುಂದಾಗಿಲ್ಲ. ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡುತ್ತಿಲ್ಲ. ಕೆಟ್ಟು ಹೋಗಿರುವ ಸೋಲಾರ್ ದೀಪಗಳನ್ನು ದುರಸ್ತಿ ಮಾಡಿಸುವಂತೆ ಮನವಿ ಸಲ್ಲಿಸಿದರೂ ಸ್ಪಂದಿಸದ ಗ್ರಾಪಂ ಅಧಿಕಾರಿಗಳು ನಮಗೆ ಯಾರೂ ತಿಳಿಸಿಲ್ಲ ಎಂದು ಸುಳ್ಳು ಹೇಳುತ್ತಾರೆ. ಹೀಗಾಗಿ ಹಾಡಿಗೆ ಮೂಲ ಸೌಕರ್ಯ ಕಲ್ಪಿಸದಿದ್ದರೇ ಡಿ.ಬಿ.ಕುಪ್ಪೆ ಗ್ರಾಪಂ ಎದುರು ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಗೋಳೂರು ಹಾಡಿ ನಿವಾಸಿಗಳಾದ ಗೌರಿ, ಗಂಗೆ, ಗೌರಮ್ಮ ಸುಶೀಲ, ದೇವಿ, ಸುಂದ್ರಿ, ಸಣ್ಣಪ್ಪ ಇನ್ನಿತರರಿದ್ದರು.

ಜೂ.9, ಮೈಸೂರಲ್ಲಿ ಅರ್ಥಪೂರ್ಣ ಬಸವ ಜಯಂತಿ

ಸರಗೂರು, ಮೇ 28– ಮೈಸೂರಿನಲ್ಲಿ ಜೂ.9ರಂದು ನಡೆಯುವ ಬಸವ ಜಯಂತಿ ಕಾರ್ಯಕ್ರಮ ಈ ಬಾರಿ ವಿಶಿಷ್ಟವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯಲಿದೆ ಎಂದು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್ ತಿಳಿಸಿದರು.



ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ಜೂ.9ರಂದು ಮೈಸೂರಿನಲ್ಲಿ ನಡೆಯುವ ನಮ್ಮ ಬಸವ ಜಯಂತಿ ಕಾರ್ಯಕ್ರಮಕ್ಕೆ ಸರಗೂರು ತಾಲೂಕಿನ ಸಮುದಾಯ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 20 ರಿಂದ 25 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, ಅಂದು ಮೈಸೂರು ದಸರಾ ನೆನಪಿಸುವ ಮಾದರಿ ಆನೆ ಮೇಲೆ ಬಸವೇಶ್ವರರ ಪ್ರತಿಮೆ ಪ್ರತಿಷ್ಠಾಪಿಸಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಿ, ಮಹಾರಾಜ ಕಾಲೇಜು ಮೈದಾನದಲ್ಲಿ ಅದ್ದೂರಿ ಸಮಾರಂಭ ನಡೆಯಲಿದೆ. ಅಲ್ಲದೇ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿದೆ. ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಸಮಾಜದ ಬಂಧುಗಳಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದರು.

ಇದೇ ವೇಳೆ ಬಸವ ಬಳಗಗಳ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಎಂ.ಕೆ. ಸ್ವಾಮಿ, ಮಹಿಳಾ ಅಧ್ಯಕ್ಷೆ ಸುನಂದರಾಜ್ ಮಾತನಾಡಿದರು. ಸಭೆಯಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್. ವೀರೇಶ್, ಉಪಾಧ್ಯಕ್ಷ ಎಂ.ಪಿ.ಮಂಜುನಾಥ್, ಪ್ರತಿಧ್ವನಿ ಪ್ರಸಾದ್, ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಡಿ.ಜಿ.ಶಿವ ರಾಜು, ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಹಣಕಾಸು ಸಮಿತಿ ಸಂಚಾಲಕ ನಟರಾಜು, ತಾಲೂಕು ಬಸವ ಬಳಗದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಶಿವರಾಜಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗುರುಸ್ವಾಮಿ, ಯುವ ಸಮಿತಿ ಅಧ್ಯಕ್ಷ ಪರಶಿವಮೂರ್ತಿ, ಸಹಕಾರ ಸಂಘದ ಅಧ್ಯಕ್ಷ ನಟರಾಜು, ತಾಪಂ ಮಾಜಿ ಅಧ್ಯಕ್ಷ ಗಿರೀಶ್, ಮುಖಂಡರಾದ ಕೆ.ರಾಜಪ್ಪ, ಟಿ.ಪಿ. ಮಹದೇವಸ್ವಾಮಿ, ಟೌನ್ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್, ಕುಮಾರ್, ವಿರೂಪಾಕ್ಷಪ್ಪ, ಭವಾನೀಶ್, ಶಿವಣ್ಣ, ವಿರುಪಾಕ್ಷ, ಮಾದಪ್ಪ, ಸಿದ್ದಮಲ್ಲಪ್ಪ, ಗುರುಸ್ವಾಮಿ, ಬಸವರಾಜು, ತೇಜು, ನಂದೀಶ್ ಇತರರಿದ್ದರು.

ನಂಜನಗೂಡಿನಲ್ಲಿ ಕಾರ್ಮಿಕ ಆತ್ಮಹತ್ಯೆ

ನಂಜನಗೂಡು, ಮೇ 28– ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಕಾರ್ಮಿಕನೋರ್ವ ಕಾರ್ಖಾನೆಯ ಗೋದಾಮಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಂಜನಗೂಡು ಕೈಗಾರಿಕಾ ಪ್ರದೇಶದ ರೆಹಾನ್ಸ್ ಕಾರ್ಖಾನೆಯಲ್ಲಿ ಜರುಗಿದೆ. ತಾಲೂಕಿನ ಮಹದೇವನಗರದ ನಿವಾಸಿ ನಂಜೇಶ್(42) ಆತ್ಮಹತ್ಯೆ ಮಾಡಿಕೊಂಡವರು. ಈತನಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ. ರೆಹಾನ್ಸ್ ಕಾರ್ಖಾನೆಯಲ್ಲಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದ ನಂಜೇಶ್ ಸೋಮವಾರ ರಾತ್ರಿ ಕಾರ್ಖಾನೆ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮೃತನ ಪತ್ನಿ ನಂಜನಗೂಡು ಪಟ್ಟಣ ಠಾಣೆಗೆ ದೂರು ನೀಡಿದ್ದಾರೆ.

ಎಸ್.ಸಿ.ಬಸವರಾಜ್ ಅವರನ್ನು ಎಂಎಲ್‌ಸಿ ಮಾಡಲು ಆಗ್ರಹ



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪಕ್ಷದ ಎಸ್‌ಟಿ ಘಟಕದ ಮುಖಂಡರು ಮಾತನಾಡಿದರು.

ನಂಜನಗೂಡು, ಮೇ 28– ಮುಂಬರುವ ಜೂನ್‌ನಲ್ಲಿ ರಾಜ್ಯ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ನಾಯಕ ಸಮಾಜದ ಮುಖಂಡ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಎಸ್.ಸಿ.ಬಸವರಾಜ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು ಎಂದು ಕಾಂಗ್ರೆಸ್ ಪಕ್ಷದ ಎಸ್‌ಟಿ ಘಟಕದ ಮುಖಂಡರು ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಶಿವಕುಮಾರ್ ಮಾತನಾಡಿ, ಎಸ್.ಸಿ.ಬಸವರಾಜ್ ಅವರು ಜಿಪಂ ಅಧ್ಯಕ್ಷ, ರಾಜ್ಯ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಕಳೆದ 30 ವರ್ಷಗಳಿಂದ ಪಕ್ಷದ ವಿವಿಧ ಘಟಕಗಳ ನೇತೃತ್ವ ವಹಿಸಿ ಪಕ್ಷ ಸಂಘಟನೆ ಮಾಡುವ ಮೂಲಕ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ದುಡಿದಿದ್ದಾರೆ. ಅವಿಭಾಜಿತ ಹಳೇ ಮೈಸೂರು ಭಾಗದ ಪ್ರಭಾವಿ ಮುಖಂಡರಾಗಿರುವ ಎಸ್.ಸಿ.ಬಸವರಾಜ್ ಅವರಿಗೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಮೈಸೂರು, ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ನಾಯಕ ಜನಾಂಗಕ್ಕೆ ವಿಧಾನ ಪರಿಷತ್ ಸ್ಥಾನ ನೀಡಿದ ಕೀರ್ತಿ ಲಭಿಸುತ್ತದೆ. ಕ್ಷೇತ್ರದಲ್ಲಿ ಎಲ್ಲಾ ಸಮಾಜಗಳನ್ನು ಒಟ್ಟಿಗೆ ಕರೆದೊಯ್ಯುವ ಸಾಮರ್ಥ್ಯ ಹೊಂದಿರುವ ಸಂಘಟನಾ ಚತುರ ಎಚ್.ಸಿ.ಬಸವರಾಜ್ ಅವರಿಗೆ ಕಾಂಗ್ರೆಸ್ ಪಕ್ಷ ವಿಧಾನ ಪರಿಷತ್ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಮುಖಂಡ ಗೋನಹಳ್ಳಿ ಕುಮಾರ್ ಮಾತನಾಡಿ, ಈ ಹಿಂದೆ ರಾಜ್ಯದಲ್ಲಿ ಜೆಡಿಎಸ್ ಅಧಿಕಾರವಧಿಯಲ್ಲಿ ನಾಯಕ ಸಮಾಜದ ಮುಖಂಡ ಎಸ್.ಚಿಕ್ಕಮಾದು, ಬಿಜೆಪಿ ಅಧಿಕಾರದಲ್ಲಿದ್ದಾಗ ಸಮಾಜದ ಸಿದ್ದರಾಜು ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡಿತ್ತು. ಕಾಂಗ್ರೆಸ್ ಪಕ್ಷದಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ನಾಯಕ ಸಮಾಜದವರಿಗೆ ವಿಧಾನ ಪರಿಷತ್ ಸ್ಥಾನ ನೀಡಿಲ್ಲ. ಎಸ್.ಸಿ.ಬಸವರಾಜ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಅವರಲ್ಲಿ ಮನವಿ ಮಾಡುತ್ತೇವೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ನಾಗರಾಜು, ಹೊಸಕೋಟೆ ಬಸವರಾಜು, ರವಿಕುಮಾರ್, ಸೋಮೇಶ್, ರಂಗಸ್ವಾಮಿ, ಅರುಣ್, ಸಿದ್ದರಾಜು, ಶಿವಕುಮಾರ್ ಇದ್ದರು.

ಜಗತ್ತಿನಾದ್ಯಂತ ಡಾ.ಬಿ.ಆರ್.ಅಂಬೇಡ್ಕರ್‌ಗೆ ಗೌರವ

ಅಂಬೇಡ್ಕರ್ ಜಯಂತಿಯಲ್ಲಿ ಎಸ್‌ಐ ರವಿಶಂಕರ್ ಅಭಿಪ್ರಾಯ

ತಿ.ನರಸೀಪುರ, ಮೇ 28– ಜಗತ್ತಿನಾದ್ಯಂತ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಗೌರವ ಸಿಗುತ್ತಿದೆ ಎಂದು ಬಿಳಿಗೆರೆ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ರವಿಶಂಕರ್ ತಿಳಿಸಿದೆ.



ಕಾರ್ಯಕ್ರಮದಲ್ಲಿ ಅತೀಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವರುಣ ವಿಧಾನಸಭಾ ಕ್ಷೇತ್ರದ ತಾಯೂರು ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಪ್ರತಿಯೊಂದು ಸಮಾಜವು ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಹಾಗೂ ಪ್ರತಿಯೊಬ್ಬ ಭಾರತೀಯನಿಗೂ ಹಕ್ಕು ಮತ್ತು ಸಮಾನತೆ ಅವಕಾಶಗಳನ್ನು ಕಲ್ಪಿಸಿದ್ದಾರೆ. ಆದರೆ ಅವರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ಸರಿಯಲ್ಲ ಎಂದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಪ್ರಬುದ್ಧ ಭಾರತ ಇನ್ನೂ ನಿರ್ಮಾಣವಾಗಿಲ್ಲ. ಹೀಗಾಗಿ ಅಂಬೇಡ್ಕರ್ ಅವರನ್ನು ಅರ್ಥೈಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ ಎಂದು ವಿಷಾದಿಸಿದರು.

ಕೃಷಿ ಇಲಾಖೆಯ ಕಿರಣ್ ಕುಮಾರ್ ಮಾತನಾಡಿ, ಅಂಬೇಡ್ಕರ್ ಜಯಂತಿಯಂದು ಅವರ ಆಶಯ, ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರ ಜಯಂತಿ ಸಾರ್ಥಕತೆ ಕಾಣುತ್ತದೆ. ಸಂವಿಧಾನದ ಕಲ್ಪನೆ ಸಂಪೂರ್ಣವಾಗಿ ಈ ದೇಶದಲ್ಲಿ ಜಾರಿಯಾಗಿಲ್ಲ. ಅಂಬೇಡ್ಕರ್ ಕಂಡ ಕನಸು ನನಸಾಗಬೇಕಾದರೆ ಸಂವಿಧಾನದ ಚಿಂತನೆಗಳು ಸಂಪೂರ್ಣವಾಗಿ ಅನುಷ್ಠಾನಗೊಳ್ಳಬೇಕು ಹಾಗೂ ಅವರ ಆಶಯಗಳಂತೆ ಜನತೆ ನಡೆದುಕೊಳ್ಳಬೇಕು ಎಂದರು.

ಮುಖಂಡ ಶಾಂತಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 1994ರಲ್ಲಿ ಸ್ಥಾಪಿತವಾದ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘವನ್ನು ಹಿರಿಯ ಮುಖಂಡರಾದ ಉಪಾಧ್ಯಕ್ಷ ನಾಗರಾಜು ಮತ್ತು ಕಾರ್ಯದರ್ಶಿ ಲೇ.ಪ್ರಕಾಶ್ ಅವರ ನೇತೃತ್ವದಲ್ಲಿ ಕಳೆದ 30 ವರ್ಷದಿಂದ ಸಂಘಟನೆ ಮಾಡುತ್ತಿದ್ದೇವೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅನ್ನ ಸಂತರ್ಪಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಸಂಘದ ಹಾಲಿ ಅಧ್ಯಕ್ಷ ಕೆ.ಮಹದೇವಸ್ವಾಮಿ, ಕಾರ್ಯದರ್ಶಿ ನಿಂಗರಾಜು, ಶಿವಣ್ಣ, ಕೆಪಿಸಿಸಿ ಯುವ ಮುಖಂಡರಾದ ಮಧು, ಮುತ್ತ, ಸಾಗರ, ಚಂದ್ರು, ರಂಜಿತ್, ಉಪಾಧ್ಯಕ್ಷ ಮಹೇಶ, ಸಂತೋಷ, ಸತೀಶ, ಗ್ರಾಮದ ಯಜಮಾನರು ಮತ್ತು ಮುಖಂಡರಾದ ಸೋಮಣ್ಣ, ನಟೇಶ್, ರಂಗಸ್ವಾಮಿ, ದೊರೆಸ್ವಾಮಿ, ಗುಡ್ಡಪ್ಪ, ಚಿನ್ನಸ್ವಾಮಿ, ರಾಚಯ್ಯ, ನಂಜುಂಡಸ್ವಾಮಿ, ಚಿಕ್ಕೂಸಯ್ಯ ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟರ್ಬೋ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
3ನೇ ಕೃಷ್ಣಪ್ಪ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿಭುಜ (ಕ)	ಬೆಳಗಿನ ಪ್ರದರ್ಶನ
ಕೃಷ್ಣ ನೀ ಬೇಗನೆ ಬಾರೋ (ಕ)	3 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **3ನೇ ಕೃಷ್ಣಪ್ಪ (ಕ)**: ಮ.1.10ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.30ಕ್ಕೆ, ಬಯ್ಯಾ ಜಿ (ಹಿಂ): ಮ.1.35ಕ್ಕೆ, ಸಂ.4.25ಕ್ಕೆ, ಥಾಲವನ್ (ಮ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ಪಿಟಿ ಸರ್ (ತ): ಮ.1.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಟರ್ಬೋ (ಮ): ಬೆ.10.10ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **4N6** (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕುರುಳಿದ ಲಾರಿ



ಹುಣಸೂರು, ಮೇ 28– ಚಾಲಕನ ನಿಯಂತ್ರಣ ಕಳೆದುಕೊಂಡ ಲಾರಿ ಆಕ್ಸಲ್ ಕಟ್ ಆಗಿ ರಸ್ತೆ ಬದಿಯ ಹಳ್ಳಕ್ಕೆ ಉರುಳಿ ಬಿದ್ದ ಘಟನೆ ಹುಣಸೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರ ಬಿಳಿಕೆರೆ ಜಂಕ್ಷನ್ ಬಳಿ ಸೋಮವಾರ ಮಧ್ಯಾಹ್ನ ನಡೆದಿದೆ.

ಆಂಧ್ರ ಪ್ರದೇಶದಿಂದ ಮಂಗಳೂರಿಗೆ ಟೈಲ್ಸ್ ತುಂಬಿಕೊಂಡು ಹೋಗುತ್ತಿದ್ದ 16 ಚಕ್ರದ ಗೂಡ್ಸ್ ಲಾರಿ ಬಿಳಿಕೆರೆ ಜಂಕ್ಷನ್‌ನ ಎಲೈಟ್ ಹೋಟೆಲ್ ಎದುರಿನ ಹೆದ್ದಾರಿಗೆ ಹಾಕಿರುವ ರಸ್ತೆ ಹಂಪ್ ಗಮನಿಸದೇ ವೇಗವಾಗಿ ಬಂದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿ ಕಿರು ಸೇತುವೆಗೆ ಡಿಕ್ಕಿ ಹೊಡೆದು, ಆಕ್ಸಲ್ ಕಟ್ ಆಗಿ ಚಕ್ರಗಳು ಕಳಚಿ ಬಿದ್ದು ರಸ್ತೆ ಬದಿ ಹಳ್ಳಕ್ಕೆ ಉರುಳಿದೆ.

ಆಕಸ್ಮಿಕವಾಗಿ ಈ ಘಟನೆ ನಡೆದಿದ್ದು, ಲಾರಿಯಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೆದ್ದಾರಿಯಲ್ಲಿ ವಾಹನ ದಟ್ಟಣೆ ಇಲ್ಲದಿದ್ದರಿಂದ ಭಾರೀ ಅನಾಹುತ ತಪ್ಪಿದಂತಾಗಿದೆ ಎಂದು ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ ತಿಳಿಸಿದ್ದಾರೆ.

ಅಧಿಕಾರಿ ಆತ್ಮಹತ್ಯೆ: ಮೂವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಆರೋಪಿಗಳು ನಾಪತ್ತೆ!

ಶಿವಮೊಗ್ಗ, ಮೇ 28– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್‌ಟಿಡಿಸಿ) ಅಧಿಕಾರಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಮೂವರು ಉನ್ನತ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್‌ಟಿಡಿಸಿ) ಅಕೌಂಟ್ಸ್ ಅಧಿಕಾರಿ ಪಿ.ಚಂದ್ರಶೇಖರ ಆತ್ಮಹತ್ಯೆಗೆ ಶರಣಾಗಿದ್ದು, ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದಿದ್ದಾರೆ. ಡೆತ್‌ನೋಟ್‌ನಲ್ಲಿ ತಮ್ಮ ಸಾವಿಗೆ ಕಾರಣ ಎಂದು ಹೇಳಿ ಮೂವರು ಉನ್ನತ ಅಧಿಕಾರಿಗಳ ಹೆಸರು ಉಲ್ಲೇಖಿಸಿದ್ದು, ಇದರ ಆಧಾರದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸಾವಿಗೂ ಮುನ್ನ ಅವರು ಸುಮಾರು ಆರು ಪುಟಗಳ ಡೆತ್‌ನೋಟ್ ಬರೆದಿಟ್ಟಿದ್ದಾರೆ. ಸೂಸೈಡ್ ನೋಟ್‌ನಲ್ಲಿ, ಅವರು ತಮ್ಮ ಸಾವಿಗೆ ಮೂವರು ಹಿರಿಯ ಸಹೋದ್ಯೋಗಿಗಳು ಕಾರಣರಾಗಿದ್ದು, ಅವರು ಸಂಸ್ಥೆಯ ಸುಮಾರು 87 ಕೋಟಿ ರೂಪಾಯಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಚಂದ್ರಶೇಖರನ್ ಆರೋಪಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಮೂವರು ಅಧಿಕಾರಿಗಳು ವಿವಿಧ ಠೇವಣಿಗಳ ಮೂಲಕ ವೈಯಕ್ತಿಕ ಲಾಭಕ್ಕಾಗಿ 87 ಕೋಟಿ ರೂಪಾಯಿ ದುರುಪಯೋಗ ಪಡಿಸಿಕೊಂಡಿದ್ದು, ಮಾತ್ರವಲ್ಲದೇ ತನಗೆ ಕಿರುಕುಳ ನೀಡಿದ್ದಾರೆ. ಪಾಲಿಕೆಯ ಪ್ರಾಥಮಿಕ ಖಾತೆಯಿಂದ ಲೆಕ್ಕಕ್ಕೆ ಸಿಗದ ಹಣವನ್ನು ಬೇರೆಡೆಗೆ ತಿರುಗಿಸಲು ಸಮಾನಾಂತರ ಬ್ಯಾಂಕ್ ಖಾತೆ ತೆರೆಯುವಂತೆ ಹಿರಿಯ ಅಧಿಕಾರಿಗಳು ಒತ್ತಾಯಿಸಿದ್ದಾರೆ.

ಎಂ.ಜಿ. ರಸ್ತೆಯಲ್ಲಿರುವ ಬ್ಯಾಂಕ್ ಶಾಖೆಯಲ್ಲಿ ಗ್ರಾಹಕರು ಉಳಿತಾಯ ಮತ್ತು ಚಾಲ್ತಿ ಖಾತೆಗಳ ನಡುವೆ ಹಣವನ್ನು ವರ್ಗಾಯಿಸಲು ಮತ್ತು ಸ್ಥಿರ ಠೇವಣಿ ಖಾತೆಗಳನ್ನು ಲಿಂಕ್ ಮಾಡಲು ಗ್ರಾಹಕರಿಗೆ ಅನುಮತಿಸುವ ಸ್ವೀಪ್–ಇನ್ ಮತ್ತು ಸ್ವೀಪ್–ಔಟ್ ಖಾತೆಯನ್ನು ತೆರೆಯಲು ಸಚಿವರು ಮತ್ತು ಅಧಿಕಾರಿಯಿಂದ ನಿರ್ದೇಶಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಇದರಿಂದ ಬೇಸತ್ತು ತಾವು ಆತ್ಮಹತ್ಯೆಗೆ ಶರಣಾಗುತ್ತಿರುವುದಾಗಿ ಚಂದ್ರಶೇಖರ್ ಡೆತ್‌ನೋಟ್‌ನಲ್ಲಿ ಆರೋಪಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳು ನಾಪತ್ತೆ: ಇನ್ನು ಚಂದ್ರಶೇಖರ್ ಆತ್ಮಹತ್ಯೆ ಬೆನ್ನಲ್ಲೇ ಆರೋಪಿ ಸರ್ಕಾರಿ ನೌಕರರು ತಲೆಮರೆಸಿಕೊಂಡಿದ್ದಾರೆ. ಅವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮಹಜರ್ (ಸ್ಥಳ ತಪಾಸಣೆ) ಮಾಡಲಾಗಿದೆ, ಹೆಚ್ಚಿನ ತನಿಖೆಗಾಗಿ ಆತ್ಮಹತ್ಯೆ ಪತ್ರ ಮತ್ತು ಮೃತ ಖಾತೆ ಅಧಿಕಾರಿಯ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಸಚಿವರ ಸ್ಪಷ್ಟನೆ: ಇನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಮಾತನಾಡಿ, ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದ್ದು, ಕೆಎಂವಿಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ, ದುರ್ಗಣ್ಣ ಮತ್ತು ಸುಚಿಸ್ಮಿತಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇದರಲ್ಲಿ ಯಾರೇ ಭಾಗಿಯಾಗಿದ್ದರೂ ಮತ್ತು ಅವರು ಎಷ್ಟೇ ಪ್ರಭಾವಶಾಲಿಯಾಗಿದ್ದರೂ ನಾವು ಅವರನ್ನು ಬಿಡುವುದಿಲ್ಲ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಂಭೀರವಾಗಿ ಪರಿಗಣಿಸಿದ್ದಾರೆ. ಫೋರೆನ್ಸಿಕ್ ವರದಿಯಲ್ಲಿ ಎಂಡಿ ಸಹಿ ಮಾಡಿದ್ದಾರೆ ಎಂದು ಹೇಳಿದರೆ, ನಾವು ಅವರನ್ನು ಅಮಾನತುಗೊಳಿಸುತ್ತೇವೆ. ಸಾರ್ವಜನಿಕರ ಹಣದ ಸೋರಿಕೆಗೆ ನಾವು ಅವಕಾಶ ನೀಡುವುದಿಲ್ಲ ಎಂದು ಪತ್ರಿಕಾಗೋಷ್ಠಿ ಯಲ್ಲಿ ಹೇಳಿದ್ದಾರೆ.

ಸಚಿವ ನಾಗೇಂದ್ರ ವಜಾಕ್ಕೆ ಬಿಜೆಪಿ ಆಗ್ರಹ



ಇನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ಕೂಡಲೇ ಸಚಿವ ನಾಗೇಂದ್ರ ಅವರನ್ನು ವಜಾ ಮಾಡಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ. ಅಂತೆಯೇ ದಲಿತರು ಮತ್ತು ಬುಡಕಟ್ಟು ಸಮುದಾಯಗಳ ಪರ ಕೆಲಸ ಮಾಡುವ ನೆಪದಲ್ಲಿ ಕಾಂಗ್ರೆಸ್ ನಾಯಕರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಕರ್ನಾಟಕ ಬಿಜೆಪಿ ಮುಖ್ಯಸ್ಥ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ. ಅಲ್ಲದೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಬಿ.ನಾಗೇಂದ್ರ ಅವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕು. ಅಧಿಕಾರಿಯ ಸಾವಿನ ಬಗ್ಗೆ ಪಾರದರ್ಶಕ ತನಿಖೆಗೆ ಒತ್ತಾಯಿಸುತ್ತೇನೆ ಎಂದು ಅವರು X (ಟ್ವಿಟರ್) ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ 7ನೇ ಕ್ಲಾಸ್ ವಿದ್ಯಾರ್ಥಿನಿ ಈಗ 3 ತಿಂಗಳ ಗರ್ಭಿಣಿ

ಮುಖ್ಯ ಶಿಕ್ಷಕನ ಬಂಧನ

ಚಿಕ್ಕಬಳ್ಳಾಪುರ, ಮೇ 28– ಶಿಡ್ಲಘಟ್ಟ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕನೊಬ್ಬ ತನ್ನ ಶಾಲೆಯ ಅಪ್ರಾಪ್ತ ವಿದ್ಯಾರ್ಥಿ ಮೇಲೆ ಅತ್ಯಾಚಾರ ಎಸಗಿರುವ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ.

ಮುಖ್ಯ ಶಿಕ್ಷಕ ವೆಂಕಟೇಶ್ ತಮ್ಮ ಶಾಲೆಯಲ್ಲಿ ಓದುತ್ತಿದ್ದ 7ನೇ ತರಗತಿ ವಿದ್ಯಾರ್ಥಿ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಶಿಡ್ಲಘಟ್ಟ ಗ್ರಾಮಾಂತರ ಠಾಣೆಯಲ್ಲಿ ಬಾಲಕಿ ದೂರು ನೀಡಿದ್ದು, ಮುಖ್ಯ ಶಿಕ್ಷಕ ವೆಂಕಟೇಶನನ್ನು ಬಂಧಿಸಲಾಗಿದೆ. ಶಾಲಾ ಬಾಲಕಿಯ ಮೈ–ಕೈ, ಎದೆ ಭಾಗವನ್ನು ಮುಖ್ಯ ಶಿಕ್ಷಕ ಮುಟ್ಟಿ ಮಾತನಾಡುತ್ತಿದ್ದನಂತೆ. ಇದಕ್ಕೆ ಬಾಲಕಿ ವಿರೋಧ ವ್ಯಕ್ತಪಡಿಸಿದಾಗ, ಏನು ತೊಂದರೆ ಆಗುವುದಿಲ್ಲ ಎಂದೇಳಿ ಆಫೀಸ್ ರೂಮಿನೊಳಗೆ ಕರೆದುಕೊಂಡು ಅತ್ಯಾಚಾರವೆಸಗಿದ್ದಾನೆ. ನಂತರ ನಡೆದ ಯಾವ ವಿಚಾರವನ್ನು ಯಾರ ಜತೆಗೂ ಹೇಳದಂತೆ ಬೆದರಿಕೆ ಹಾಕಿದ್ದಾನೆ.

ಆಕೆ ಮೂರು ತಿಂಗಳ ಗರ್ಭಿಣಿ ಆದಾಗಲೇ ಪ್ರಕರಣ ಬೆಳಕಿಗೆ ಬಂದಿದೆ. ಮಗಳು ಗರ್ಭಿಣಿಯಾಗಿದ್ದು ತಿಳಿದು ಪಾಲಕರು ಆತಂಕಕ್ಕೆ ಒಳಗಾಗಿದ್ದಾರೆ. ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಇಲಾಖೆಯಿಂದ ವಿದ್ಯಾರ್ಥಿನಿಯನ್ನು ರಕ್ಷಿಸಿ ಆಪ್ತ ಸಮಾಲೋಚನೆ ಮಾಡಲಾಗುತ್ತಿದೆ. ವರದನಾಯಕನಹಳ್ಳಿ ಸರ್ಕಾರಿ ಶಾಲೆಯ ಈ ಮುಖ್ಯ ಶಿಕ್ಷಕ ವೆಂಕಟೇಶ ಸಂತ್ರಸ್ತೆಗೆ ವರ್ಷದಿಂದ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಲಾಗಿದೆ. ಕಳೆದ ಐದು ತಿಂಗಳಿಂದ ಮುಟ್ಟಾಗದೇ ಇರುವುದರಿಂದ ಆತಂಕಗೊಂಡ ಬಾಲಕಿ ತಾಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಬಾಲಕಿಯನ್ನು ಪರೀಕ್ಷಿಸಿದ ವೈದ್ಯರು ಗರ್ಭಿಣಿಯಾಗಿರುವುದಾಗಿ ತಿಳಿಸಿ ದ್ದಾರೆ. ಸದ್ಯ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸರು ಶಿಕ್ಷಕ ವೆಂಕಟೇಶ್ ವಿರುದ್ಧ ಪೋಕ್ಸೋ 376 ಅಡಿ ಅತ್ಯಾಚಾರ ಪ್ರಕರಣ ದಾಖಲಿಸಿ ತನಿಖೆ ಯನ್ನು ಮುಂದುವರಿಸಿದ್ದಾರೆ.

ರಾಜ್ಯಾದ್ಯಂತ ತಂಬಾಕು ಸಹಿತ ಗುಟ್ಕಾ, ಪಾನ್ ಮಸಾಲಾ ನಿಷೇಧಿಸಿದ ತೆಲಂಗಾಣ ಸರ್ಕಾರ



ಹೈದರಾಬಾದ್, ಮೇ 28– ಮಹತ್ವದ ಬೆಳವಣಿಗೆಯಂದಲ್ಲಿ ತೆಲಂಗಾಣ ಸರ್ಕಾರ ರಾಜ್ಯಾದ್ಯಂತ ತಂಬಾಕು ಸಹಿತ ಗುಟ್ಕಾ, ತಂಬಾಕು ಮತ್ತು ಪಾನ್ ಮಸಾಲಾ ಉತ್ಪನ್ನಗಳನ್ನು ನಿಷೇಧಿಸಿ ಆದೇಶ ಹೊರಡಿಸಿದೆ.

ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ ಮತ್ತು ಪಾನ್ ಮಸಾಲಾ ತಯಾರಿಕೆ, ಸಂಗ್ರಹಣೆ, ವಿತರಣೆ, ಸಾಗಣೆ ಮತ್ತು ಮಾರಾಟವನ್ನು ರಾಜ್ಯದಾದ್ಯಂತ ಒಂದು ವರ್ಷದ ಅವಧಿಗೆ ನಿಷೇಧಿಸಿ ತೆಲಂಗಾಣ ಸರ್ಕಾರ ಆದೇಶ ಹೊರಡಿಸಿದೆ.

ಈ ಬಗ್ಗೆ ತೆಲಂಗಾಣ ರಾಜ್ಯ ಆಹಾರ ಸುರಕ್ಷತಾ ಆಯುಕ್ತರು ಮೇ 24ರಂದು ಸಾರ್ವಜನಿಕ ಆರೋಗ್ಯದ ಕಾಳಜಿಯನ್ನು ಉಲ್ಲೇಖಿಸಿ ಆದೇಶ ಹೊರಡಿಸಿದ್ದು, ಆಹಾರ ಸುರಕ್ಷತೆ ಮತ್ತು ಮಾನದಂಡಗಳ (ನಿಷೇಧ ಮತ್ತು ಮಾರಾಟದ ನಿರ್ಬಂಧ) ನಿಯಮಾವಳಿ 2011ರ ನಿಯಮಾವಳಿ 2.3.4ರ ಜೊತೆಗೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಸೆಕ್ಷನ್ 30ರ ಉಪ–ವಿಭಾಗ (2)ರ ಷರತ್ತು (ಎ) ಅಡಿಯಲ್ಲಿ ನಿಷೇಧವನ್ನು ಜಾರಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸ್ಯಾಚೆಟ್‌ಗಳು, ಪೌಚ್‌ಗಳು ಅಥವಾ ಪ್ಯಾಕೇಜುಗಳಲ್ಲಿ ಪ್ಯಾಕ್ ಮಾಡಲಾದ ಗುಟ್ಕಾ ಮತ್ತು ಪಾನ್ ಮಸಾಲಾವನ್ನು 2024ರ ಮೇ 24ರಿಂದ ಜಾರಿಗೆ ಬರುವಂತೆ ಇಡೀ ತೆಲಂಗಾಣ ರಾಜ್ಯದಲ್ಲಿ ಒಂದು ವರ್ಷದ ಅವಧಿಗೆ ನಿಷೇಧಿಸಲಾಗಿದೆ. ಸರ್ಕಾರದ ಈ ಆದೇಶಕ್ಕೆ ಪಾನ್ ಶಾಪ್ ಮಾಲೀಕರಲ್ಲಿ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಕೆಲವರು ಒಪ್ಪಿಗೆ ಸೂಚಿಸಿದ್ದರೆ ಮತ್ತೆ ಕೆಲ ಮಾಲೀಕರು ಆದೇಶ ಪಾಲನೆಗೆ ಸಹಕಾರ ನೀಡುತ್ತಿಲ್ಲ ಎನ್ನಲಾಗಿದೆ.

11ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ ಇರುವ ದುಃಖತಪ್ತರು: ಪತ್ನಿ ಶ್ರೀಮತಿ ಜಯಶ್ರೀ, ಮೊಮ್ಮಕ್ಕಳಾದ ಶ್ರೇಷ್ಠ.ವೈ, ಋತ್ವಿತ್.ವೈ ಹಾಗೂ ಕುಟುಂಬವರ್ಗದವರು

ಶ್ರೀಯುತ ಎಂ.ವೆಂಕಟೇಶ್
ವಾಹನ ಚಾಲಕರು, ಮೈಸೂರು ಮಹಾನಗರಪಾಲಿಕೆ

3ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮಮ್ಮ (ಪುಟ್ಟಿ)
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಪತಿ ಸಿದ್ದೇಗೌಡ (ಪೊಲೀಸ್ ಇಲಾಖೆ) ಮಕ್ಕಳು ರವಿಚಿ, ಗೋವಿಂದ ಸ್ವಾಮಿ ಮತ್ತು ಕುಟುಂಬವರ್ಗ

7ನೇ ವರ್ಷದ ಸವಿನೆನಪು



ಸಿದ್ದೇಗೌಡರು
ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ವಿಜಯಲಕ್ಷ್ಮಿ, ಮಕ್ಕಳು ಹಾಗೂ ಕುಟುಂಬ ವರ್ಗದವರು. ಗಣೇಶನಗರ, ಎನ್.ಆರ್.ಮೊಹಲ್ಲಾ, ಮೈಸೂರು.

4ನೇ ವರ್ಷದ ಸವಿನೆನಪು



ಸೋಮಸುಂದರಮ್ಮ (ತೊಳಸಿ)
ಅಂಗನವಾಡಿ ಆಶಾ ಕಾರ್ಯಕರ್ತೆ, ಗಿರಿಯಾ ಬೋವಿ ಪಾಳ್ಯ, ಮೈಸೂರು
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಂಜುನಾಥ ಪಿ, ಮಕ್ಕಳು, ಮಹದೇವ, ಸುಪ್ರಿತಾ ಹಾಗೂ ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ದಿನಾಂಕ: 14–05–2024 ರಂದು ಮೈಸೂರು ವಲಯ ಡಿ.ಡಿ.ಪಿ.ಐ ರವರು ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆ ರಾಜೀವನಗರ, ಮೈಸೂರು ಇದರ ಮಾನ್ಯತೆಯನ್ನು ರದ್ದುಗೊಳಿಸಿದ್ದು ಸದರಿ ಆದೇಶವನ್ನು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 13498/2024 ಪ್ರಶ್ನಿಸಿದ್ದು, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆಯ ರಿಟ್ ಅರ್ಜಿಯನ್ನು ಪುರಸ್ಕರಿಸಿ ದಿನಾಂಕ: 21–05–2024ರ ಆದೇಶ ಹೊರಡಿಸಿದ್ದು ಡಿ.ಡಿ.ಪಿ.ಐರವರ ಆದೇಶವನ್ನು ರದ್ದುಗೊಳಿಸಿರುತ್ತೇವೆ.

ಸಹಿ/– ಮುಖ್ಯೋಪಾಧ್ಯಾಯರು
ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆ
ರಾಜೀವ್‌ನಗರ, 1ನೇ ಹಂತ, ಮೈಸೂರು.

Sd/- N. SHRIDHARA B.A, LL.B
Advocate, KAR-1044/2000
Sd/- MANOJ. M B.Com, LL.B
Advocate, KAR-997/2009, MN Law Firm #143, Paduvana Road, C & D Block, Kuvempunagar, Mysuru 570 023, Mob: 9611468889, 9916219407

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ರಕ್ಷಿತ್.ಕೆ.ಎಸ್

ಇವರು ದಿನಾಂಕ 19–05–2024ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 29–05–2024ನೇ ಬುಧವಾರ ಬೆಳಗ್ಗೆ 10:30 ಗಂಟೆಗೆ ಶ್ರೀ ಮರುಳೇಶ್ವರ ಶಾಂತಿಧಾಮ ಕಾವೇರಿ ಶಾಲೆಯ ಹತ್ತಿರ, ಕುವೆಂಪು ನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು : ಶ್ರೀಮತಿ ಪಿ. ಮಂಜುಳ ಮತ್ತು ಶ್ರೀ ಕೆ.ಸಿ. ಶಿವಪ್ಪ ಸಹೋದರ ಶ್ರೀ ರವಿ ಕುಟುಂಬವರ್ಗದವರು, ಕೆ.ಜಿ. ಕೊಪ್ಪಲು ಗ್ರಾಮಸ್ಥರು
ಭೋಜನ : ಮಧ್ಯಾಹ್ನ 12:30 ಗಂಟೆಗೆ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಕೆ ನಟರಾಜು ರವರು
ಉದ್ಯಮಿಗಳು ಮತ್ತು ಮಾಜಿ ಸದಸ್ಯರು, ಆಶ್ರಯ ಸಮಿತಿ, ಹುಲ್ಲಹಳ್ಳಿ

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇ॥ ಶ್ರೀಮತಿ ಓಬಮ್ಮ ಮತ್ತು ಯಜಮಾನ್ ಕೂಸೇಗೌಡರ ಕುಟುಂಬ
ಶ್ರೀಮತಿ ರತ್ನಮ್ಮ ಮಾಡುವ ವಿಜ್ಞಾಪನೆಗಳು
ನನ್ನ ಪೂಜ್ಯ ಪತಿಯವರಾದ
ಶ್ರೀ ಕೆ. ನಟರಾಜುರವರು
ದಿನಾಂಕ 19–05–2024 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 29–05–2024 ಬುಧವಾರ ಬೆಳಗ್ಗೆ 10.30 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿಸುತ್ತೇವೆ ಹಾಗೂ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ಕೇಳಿಕೊಳ್ಳುತ್ತೇವೆ.
ಭೋಜನ: ಮಧ್ಯಾನ 1–00 ರಿಂದ
ಸ್ಥಳ : ಸ್ವಗ್ರಾಮ ಹುಲ್ಲಹಳ್ಳಿ

ದುಃಖತಪ್ತರು :
ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು
ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು.
ಮೊ: 9164958818